॥ ಶ್ರೀ ಗುರು ಬಸವಲಿಂಗಾಯ ನಮಃ ॥



# ಲಿಂಗಾಯತ ದರ್ಶನ


ಸಂಪುಟ : ೭ ಏಪ್ರಿಲ್–ಮೇ ೨೦೨೦ ಸಂಚಿಕೆ : ೪–೫



ಮಾರ್ಗದರ್ಶನ

**ಪೂಜ್ಯಶ್ರೀ ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು**

ರುದ್ರಾಕ್ಷಿಮಠ, ನಾಗನೂರು–ಬೆಳಗಾವಿ

ತೋಂಟದಾರ್ಯ ಸಂಸ್ಥಾನಮಠ, ಗದಗ–ಡಂಬಳ

**ಸಂಪಾದಕ**

**ಡಾ॥ ಎನ್. ಜಿ. ಮಹಾದೇವಪ್ಪ**

**ಸಹ ಸಂಪಾದಕ**

**ಡಾ॥ ರಾಮಕೃಷ್ಣ ಮರಾಠೆ**



**ಸಂಪಾದಕ ಮಂಡಳಿ**

ಡಾ॥ ಗುರುಲಿಂಗ ಕಾಪಸೆ — ಡಾ॥ ಸಿ. ಕೆ. ನಾವಲಗಿ

ಶ್ರೀ ಆರ್. ಪಿ. ಅಪರಾಜ — ಡಾ॥ ವಿ. ಎಸ್. ಮಾಳಿ

ಡಾ॥ ಬಸವರಾಜ ಜಗಜಂಪಿ — ಶ್ರೀ ಬಿ. ಬಿ. ಹೊಸಮನಿ

ಡಾ. ಎಂ. ಎಸ್. ಹುಲ್ಲೋಳಿ — ಶ್ರೀಮತಿ ನೀಲಗಂಗಾ ಚರಂತಿಮಠ



**ಪ್ರಕಾಶಕರು**

ಕಾರ್ಯದರ್ಶಿ ಶ್ರೀ ಸಿದ್ಧರಾಮೇಶ್ವರ ಶಿಕ್ಷಣ ಸಂಸ್ಥೆಯ

**ವಚನ ಅಧ್ಯಯನ ಕೇಂದ್ರ**

ನಾಗನೂರು ಶ್ರೀ ರುದ್ರಾಕ್ಷಿಮಠ, ಶಿವಬಸವನಗರ

ಬೆಳಗಾವಿ–೫೯೦೦೧೦

**ದೂ:೦೮೩೧–೨೪೦೭೧೫೭** ***email:basavaguru@rediffmail.com***

***Web: www.rudrakshimath.in***



**ಚಂದಾವಿವರ**

| | | |
|---|---|---|
| ಮಹಾಪೋಷಕರು | ರೂ. | ೧೦,೦೦೦=೦೦ |
| ಪೋಷಕರು | ರೂ. | ೫೦೦೦=೦೦ |
| ಆಜೀವ | ರೂ. | ೩೦೦೦=೦೦(೨೦ ವರ್ಷ) |
| ಆರು ವರ್ಷದ | ರೂ. | ೧೦೦೦=೦೦ |
| ಒಂದುವರ್ಷದ | ರೂ. | ೨೦೦=೦೦ |
| ಬಿಡಿ ಪ್ರತಿ | ರೂ. | ೨೦=೦೦ |

ಚಂದಾಹಣವನ್ನು ನಗದು ಅಥವಾ **'ವಚನ ಅಧ್ಯಯನ ಕೇಂದ್ರ'** ಹೆಸರಿನಲ್ಲಿ ಕ್ರಾಸ್ ಮಾಡಿದ ಡಿ.ಡಿ/ ಚೆಕ್‌ಮುಖಾಂತರ **"ನಿರ್ದೇಶಕರು, ವಚನ ಅಧ್ಯಯನ ಕೇಂದ್ರ ನಾಗನೂರು ರುದ್ರಾಕ್ಷಿಮಠ, ಶಿವಬಸವ ನಗರ, ಬೆಳಗಾವಿ–೫೯೦ ೦೧೦"** ಈ ವಿಳಾಸಕ್ಕೆ ಕಳಿಸಬೇಕಾಗಿ ವಿನಂತಿ.


**ಅಂತರಂಗದೊಳಗೆ.....**


* ಸಂಪಾದಕೀಯ ೨

* ವಚನಾರ್ಥ ಚಿಂತನ ೪
  - **ಡಾ. ಸಿದ್ಧರಾಮ ಸ್ವಾಮಿಗಳು**

* ಬಸವಣ್ಣನವರ ವಿಶ್ವಸಂದೇಶ ೬
  - **ಡಾ. ಗೊ. ರು. ಚನ್ನಬಸಪ್ಪ**

* ಬಸವ ಗುರುವಿನ ಅವತಾರ ೧೧
  - **ಆರ್. ಪಿ. ಅಪರಾಜ**

* ಅನ್ನ ಮತ್ತು ಅಕ್ಷರ ದಾಸೋಹಗಳ ಮಹಾಯೋಗಿ ೧೪
  - **ಮಲ್ಲೇಪುರಂ ಜಿ. ವೆಂಕಟೇಶ**

* ಚಿರಂತನ ಚೇತನ ಸಿದ್ಧಗಂಗಾ ಶ್ರೀಗಳು ೧೬
  - **ಶ್ರೀ ಆರ್. ಎಸ್. ಚಾಪಗಾವಿ**

* ಬಸವತತ್ತ್ವ ಪ್ರಸಾರವೇ ಪ್ರಾಣ ಜೀವಾಳವಾಗಿಸಿಕೊಂಡಿರುವ ಪೂಜ್ಯಶ್ರೀ ಡಾ. ಬಸವಲಿಂಗ ಪಟ್ಟದ್ದೇವರು ೧೭
  - **ಶ್ರೀ ರಾಜು ಜುಬರೆ**

* ಕಲ್ಯಾಣ ನಾಡಿನ ಶ್ರೇಷ್ಠ ಕಾಯಕಮೂರ್ತಿ ಪೂಜ್ಯಶ್ರೀ ಡಾ. ಬಸವಲಿಂಗ ಪಟ್ಟದ್ದೇವರು ೧೮
  - **ಸಂಗಮೇಶ ಎಸ್. ಜವಾದಿ**

* ಜೋಗುಳ ಪದಗಳಲ್ಲಿ ಚೆನ್ನಬಸವಣ್ಣನವರು ೨೨
  - **ಎಂ. ಎಂ. ಗೊರಚಿಕ್ಕನವರ**

* ಶಿವಯೋಗಿಣಿ ಅಕ್ಕಮಹಾದೇವಿ ೨೭
  - **ಶ್ರೀಧರ ಗೌಡರ**

* ಶರಣ ಶಿವನಾಗಮಯ್ಯ ೨೯
  - **ವೆಂಕಟೇಶ ಕೆ. ಜನಾದ್ರಿ**



ಇಲ್ಲಿಯ ಲೇಖನಗಳ ಅಭಿಪ್ರಾಯಗಳು ಲೇಖಕರವೇ ಹೊರತು ಪತ್ರಿಕೆಯ ಅಭಿಪ್ರಾಯಗಳಲ್ಲ. **–ಸಂ**

ಸಂಪಾದಕೀಯ

# ಕೊರೋನಾ ಎಂಬ ಮಹಾಮಾರಿ

ಕಾಣುವ ವೈರಿಗಿಂತ ಕಾಣದ ವೈರಿಯ ಜೊತೆಗಿನ ಹೋರಾಟವು ಅತ್ಯಂತ ಕಷ್ಟಕರವಾದುದು. ಕಾಣದ ವೈರಿಯಿಂದ ಯಾವಾಗ, ಎಲ್ಲಿ, ಯಾವ ರೂಪದಲ್ಲಿ ದಾಳಿಯಾಗುವುದೋ ಹೇಳಲಿಕ್ಕಾಗದು. ಅಂಥ ಸಂದರ್ಭದಲ್ಲಿ ಆಕ್ರಮಣಕ್ಕಿಂತ ಆತ್ಮರಕ್ಷಣೆಯೇ ಸರಿಯಾದ ಮಾರ್ಗವೆನಿಸುತ್ತದೆ. ಆಗ ಶಕ್ತಿಗಿಂತ ಯುಕ್ತಿಯೇ ಹೆಚ್ಚು ನೆರವಿಗೆ ಬರುತ್ತದೆ. ಕೊರೋನಾ ವೈರಾಣುವಿನ ಸಂದರ್ಭದಲ್ಲಿ ಭಾರತವು ಹಮ್ಮಿಕೊಂಡಿದ್ದ ಸ್ವಯಂ ಕರ್ಫ್ಯೂವಾಗಲಿ, ಲಾಕ್‌ಡೌನವಾಗಲಿ ವೈರಾಣುವಿನ ಸೋಂಕು ತಡೆಗಟ್ಟುವಲ್ಲಿ ಪರಿಣಾಮಕಾರಿ ಉಪಕ್ರಮಗಳೆನಿಸಿವೆ. ವೈರಾಣು ನಿಯಂತ್ರಿಸುವಲ್ಲಿ ಮತ್ತು ಜನಜೀವನ ನಿರ್ವಹಿಸುವಲ್ಲಿ ಭಾರತದ ಮುಂಜಾಗೃತಾ ಕ್ರಮಗಳು ವಿಶ್ವ ಆರೋಗ್ಯ ಸಂಸ್ಥೆಯ ಪ್ರಶಂಸೆಗೆ ಪಾತ್ರವಾಗಿವೆ. 'ಜೀವ ಉಳಿದರೆ ತಾನೆ ಜೀವನ, ಮೊದಲು ಜೀವ ಉಳಿಸಿಕೊಳ್ಳೋಣ, ಆಮೇಲೆ ಬದುಕು ಕಟ್ಟಿಕೊಳ್ಳೋಣ' ಎಂದು ಪ್ರಧಾನಿಯವರು ದೇಶದ ಜನತೆಗೆ ಕೊಟ್ಟ ಕರೆಗೆ ಹಿನ್ನೆಲೆಯಾಗಿರುವುದು ಈ ನೆಲದ ವಿವೇಕ ಮತ್ತು ಜೀವಪರವಾದ ಅನುಭಾವ ಪರಂಪರೆ. ಅರ್ಥವ್ಯವಸ್ಥೆ ಕುಸಿದೀತು ಎಂದು ಕಾರ್ಖಾನೆ, ವ್ಯಾಪಾರ, ವಹಿವಾಟುಗಳನ್ನು ನಿಲ್ಲಿಸದ ಚೀನಾ, ಅಮೇರಿಕಾ, ಇಟಲಿ ಮೊದಲಾದ ಯುರೋಪ ದೇಶಗಳು ಕೊರೋನಾ ಸೋಂಕಿನಿಂದ ತತ್ತರಿಸುತ್ತಿವೆ. ಅಲ್ಲಿ ಹರಡುತ್ತಿರುವ ಸೋಂಕಿನ ಪ್ರಮಾಣ ಆಗುತ್ತಿರುವ ಜೀವಹಾನಿ ನೋಡಿದರೆ ಗಾಬರಿಯಾಗುತ್ತದೆ.

ದಿನ ನಿತ್ಯ ಚಟುವಟಿಕೆಗಳಿಂದ ಗಜಿಬಿಜಿಗುಡುತ್ತಿದ್ದ ಭಾರತವು ಲಾಕ್‌ಡೌನ್‌ದಿಂದ ಕೆಲವು ದಿನ ಸ್ತಬ್ಧಗೊಂಡಿತು. ಇದರಿಂದ ಜನರು ಮನೆಯೊಳಗೆ ಕುಳಿತು ಮನಸ್ಸಿನ ಬಾಗಿಲು ತೆರೆಯಲು ಒಂದು ಅವಕಾಶ ಸಿಕ್ಕಂತಾಯಿತು. ಒಳಗಣ ಲೋಕವನ್ನು ನೋಡಲು ಬೆಳಕಿಂಡಿ ಒದಗಿದಂತಾಯಿತು. ಇತ್ತೀಚಿನ ದಿನಗಳಲ್ಲಿ ಬದುಕು ತೆಗೆದುಕೊಂಡಿರುವ ಧಾವಂತದ ಓಟಕ್ಕೆ ಒಂದು ವಿರಾಮ ಬೇಕಾಗಿತ್ತೇನೋ? ಹಣ ಗಳಿಸಲು ಓಟ, ಅಧಿಕಾರ ಹಿಡಿಯಲು ಓಟ, ಇನ್ನೇನೋ ಸಾಧಿಸುವುದಕ್ಕೆ ಓಟ ಆದರೆ ನಮ್ಮ ನಿಜವಾದ ಓಟ ಏನು? ಹೇಗೆ ಎಂಬುದರ ದರ್ಶನವು ಕೊರೋನಾದಿಂದ ಆಗಿರಲು ಸಾಧ್ಯ. ಲಾಕ್‌ಡೌನ್ ಎಂಬುದು ಬದುಕನ್ನು ಮನೆಯ ಒಳಗೆ ಮತ್ತು ಮನೆಯ ಹೊರಗೆ ಎಂದು ವಿಂಗಡಿಸಿದಾಗ, ಬೀದಿಗೆ ಬಿದ್ದ ಕೂಲಿಕಾರ್ಮಿಕರ, ವಲಸೆ ಕಾರ್ಮಿಕರ ಬದುಕು ನಿಜಕ್ಕೂ ಮನಸ್ಸನ್ನು ಕಲಕುವಂತಿತ್ತು. ಆದರೆ ಅದೇ ವೇಳೆಗೆ ಅವರ ಕಷ್ಟಕ್ಕೆ, ಹಸಿವಿಗೆ ನೆರವಾಗಲು ಅನೇಕರು ಮುಂದೆ ಬಂದದ್ದನ್ನು, ದಾನ ದಾಸೋಹ ಚಟುವಟಿಕೆಗಳಲ್ಲಿ ತೊಡಗಿದ್ದನ್ನು ನೋಡಿದರೆ ಒಂದಿಷ್ಟು ಸಮಾಧಾನವೂ ಆಯಿತು. ಈ ವಿಷಯದಲ್ಲಿ ಬೆಳಗಾವಿಯ ನಾಗನೂರು ರುದ್ರಾಕ್ಷಿಮಠ ಮತ್ತು ಗದುಗಿನ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ ಮಾಡಿದ ಕಾರ್ಯ ಮತ್ತು ಸಲ್ಲಿಸಿದ ಸೇವೆಗಳು ಅವಿಸ್ಮರಣೀಯವಾಗಿವೆ. ಲಾಕ್‌ಡೌನ್ ಮುಗಿಯಿತು ಎಂದರೆ, ಕೊರೋನಾ ಸೋಲಿಸಿ ಗೆದ್ದೆವು ಎಂದು ಅರ್ಥವಲ್ಲ. ಅದು ಕಾಣದ ವೈರಿ, ಅದಕ್ಕೆ ಸರಿಯಾದ ಲಸಿಕೆ (ರೋಗ ನಿರೋಧಕ ಔಷಧಿ) ಕಂಡುಹಿಡಿಯುವವರೆಗೆ ಅದು ನಮ್ಮನ್ನು ಬೆಂಬತ್ತಿಯೇ ಇರುತ್ತದೆ. ಆದರೆ ಅದು ಸೋಂಕದಂತೆ ನಾವು ಸ್ವಚ್ಛತೆ, ಸಾಮಾಜಿಕ ಅಂತರವನ್ನು ಪ್ರಜ್ಞಾಪೂರ್ವಕವಾಗಿ ಪಾಲಿಸಲೇಬೇಕು; ರೋಗನಿರೋಧಕ ಶಕ್ತಿಯನ್ನು ಬೆಳೆಸಿಕೊಳ್ಳಲೇಬೇಕು; ಸಂದೇಹ ಬಂದರೆ ಪರೀಕ್ಷೆ ಮಾಡಿಸಿಕೊಳ್ಳಲೇಬೇಕು. ಈ ಸಂದರ್ಭದಲ್ಲಿ ಕೊರೋನಾ ಸೋಂಕಿತರ ಸೇವೆಯಲ್ಲಿ ತೊಡಗಿ, ಹಗಲಿರುಳು ದುಡಿಯುತ್ತಿರುವ ಕೇಂದ್ರ ಸರಕಾರದ ಮತ್ತು ರಾಜ್ಯ ಸರಕಾರದ ಅಧಿಕಾರಿಗಳನ್ನು, ವೈದ್ಯರನ್ನು, ದಾದಿಯರನ್ನು, ಆರೋಗ್ಯ ಸೇವಾ ಕಾರ್ಯಕರ್ತರನ್ನು, ಆಶಾ ಕಾರ್ಯಕರ್ತೆಯರನ್ನು ಮತ್ತು ಆರಕ್ಷಕರನ್ನು ಗೌರವಪೂರ್ವಕವಾಗಿ ಅಭಿನಂದಿಸುತ್ತೇವೆ.

* * *

ಕಳೆದ ಎರಡು ತಿಂಗಳಿಂದ ದೇಶದಲ್ಲಿ ಸಾಮೂಹಿಕ, ಸಂಘಟಿತ ಚಟುವಟಿಕೆಗಳನ್ನು ನಿಷೇಧಿಸಿದ್ದರಿಂದ ಈ ಸಲದ ಬಸವ ಜಯಂತಿ(ಎಪ್ರಿಲ್ ೨೬)ಯನ್ನು ಮನೆ ಮನೆಗಳಲ್ಲಿ, ತುಂಬ ಸರಳವಾಗಿ ಆಚರಿಸಿರುವುದು ಅಪರೂಪದ ಸಂಗತಿಯೇ. ಮನೆಯ ಸದಸ್ಯರು ಕೂಡಿ, ವಚನಗಳನ್ನು ಹೇಳಿ, ಸಿಹಿಯನ್ನು ಹಂಚಿ, ಬಸವಣ್ಣನವರ ಹೋರಾಟದ ಬದುಕನ್ನು ಮೆಲಕು ಹಾಕಿದರು. ಒಂದರ್ಥದಲ್ಲಿ ಬಸವಣ್ಣನವರ ಮನಸಿನಂತೆಯೇ ಅವರ ಜಯಂತಿ ಉತ್ಸವವು ನೆರವೇರಿತೆಂದು ಹೇಳಬೇಕು. ಕಾರಣ ಅವರು 'ನನಗಿಂತ ಕಿರಿಯರಿಲ್ಲ' ಎಂದು ವಿನಯವನ್ನು, ನಮ್ರತೆಯನ್ನು ವ್ಯಕ್ತಪಡಿಸಿದ್ದಾರೆ. ನಿರಾಡಂಬರ, ಸರಳತೆ ಅವರ ಬದುಕಿನ ಶೈಲಿಯಾಗಿತ್ತು. ಅದಕ್ಕಾಗಿಯೇ ಈ ಸಲದ ಆಚರಣೆಯು ಅವರ ತಾತ್ವಿಕ ನಿಲುವಿಗನುಗುಣವಾಗಿ ಜರುಗಿದ್ದು ಕೂಡ ಅರ್ಥಪೂರ್ಣವೇ.

ಲಿಂಗಾಯತ ಮಠ–ಮಾನ್ಯಗಳು 'ಕೊರೋನಾದಿಂದ ಕಷ್ಟಕ್ಕೆ ಸಿಲುಕಿದ ರೈತರಿಗೆ, ಬಡವರಿಗೆ ನೆರವಾಗುವ ಮತ್ತು ದಾಸೋಹ ಮಾಡುವ ಮೂಲಕ ಬಸವ ಜಯಂತಿಯನ್ನು ಆಚರಿಸಬೇಕು' ಎಂದು ಕರೆ ಕೊಟ್ಟದ್ದು

ಸಕಾಲಿಕ ಮತ್ತು ಸೂಕ್ತವಾದ ನಿರ್ಧಾರವೇ. ನೋವಿನ ಸಂಗತಿ ಎಂದರೆ, ಬಸವಣ್ಣನವರು ನಂದಿಯ ಅವತಾರವೆಂದು ಬಿಂಬಿಸಲು ಎತ್ತುಗಳ ಚಿತ್ರದ ಜೊತೆಗೆ ಬಸವಣ್ಣನವರನ್ನು ಸಮೀಕರಿಸಿದ್ದು! ಸಕಲ ಜೀವಿಗಳ ಲೇಸಿಗಾಗಿ ಹಂಬಲಿಸಿದವರು ಬಸವಣ್ಣನವರು. ಪ್ರತಿಯೊಬ್ಬ ವ್ಯಕ್ತಿಯ ಕಲ್ಯಾಣಕ್ಕಾಗಿ ಅವರ ಆತ್ಮಗೌರವಕ್ಕಾಗಿ, ಸಾಮಾಜಿಕ ಸಮಾನತೆಗಾಗಿ ಹೋರಾಡಿದಂತಹ ಕ್ರಾಂತಿಪುರುಷರು. ಅವರ ಘನವ್ಯಕ್ತಿತ್ವವನ್ನು ಈ ರೀತಿ ಹಗುರವಾಗಿ ಬಿಂಬಿಸುವುದು ಖಂಡನೀಯ. ಹಾಗೆಯೇ ಬ್ರಾಹ್ಮಣ ಧರ್ಮದಲ್ಲಿ ಹುಟ್ಟಿದ ಬಸವಣ್ಣನವರು ವೀರಶೈವ ಧರ್ಮವನ್ನು ಸ್ವೀಕರಿಸಿದರು ಎಂದು ಶ್ರೀಗಳೊಬ್ಬರು ಹೇಳಿರುವುದು ಹಸೀ ಸುಳ್ಳು. ಸರ್ವಸಮಾನತೆಯ, ಸಕಲಜೀವಾತ್ಮರಿಗೆ ಲೇಸ ಬಯಸುವ ಲಿಂಗಾಯತವೆಂಬ ಹೊಸ ಧರ್ಮವನ್ನು ಸ್ಥಾಪಿಸಿರುವುದು ಸೂರ್ಯಪ್ರಕಾಶದಷ್ಟು ಸ್ಪಷ್ಟವಿರುವಾಗ ದುರುದ್ದೇಶದಿಂದ ನೀಡಿದ ಆಧಾರರಹಿತವಾದ ಹುಸಿ ಹೇಳಿಕೆಯೂ ಕೂಡ ಖಂಡನಾರ್ಹವಾಗಿದೆ. **"ಹುಸಿ ಮಾತನಾಡಿ ಕೆಡಬೇಡ, ಲಿಂಗಾಯತಕೆ ಬಸವಣ್ಣನೇ ಕರ್ತೃ ಸರ್ವಜ್ಞ"** ಎಂಬ ಸರ್ವಜ್ಞನ ನುಡಿ ಅವರ ಹುಸಿಮಾತಿಗೆ ಉತ್ತರವಾಗಿದೆ ಎಂದು ಭಾವಿಸಿದ್ದೇವೆ.

ಇಡೀ ಜಗತ್ತು ಕೊರೋನಾ ಸೋಂಕಿನ ಭಯದಲ್ಲಿ ಬದುಕುತ್ತಿರುವ ಇವತ್ತಿನ ಸನ್ನಿವೇಶದಲ್ಲಿ, ಆರೋಗ್ಯ ಸೂತ್ರಗಳಾಗಿ ಮುನ್ನೆಲೆಗೆ ಬಂದ ಪದಗಳೆಂದರೆ 'ಸ್ವಚ್ಛತೆ' ಮತ್ತು 'ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು. ಬಸವಣ್ಣನವರು ಅಂದಿನ ಕಾಲದ ಅಗತ್ಯಕ್ಕೆ ಅನುಗುಣವಾಗಿ, ಆರೋಗ್ಯಪೂರ್ಣ ಬದುಕನ್ನು ಬಾಳುವುದಕ್ಕಾಗಿ ಹೇಳಿದಂಥ ಮಾತುಗಳು ಅವರ ಸಾವಿರಾರು ವಚನಗಳಲ್ಲಿ ಹರಡಿಕೊಂಡಿವೆ. ಅವು ಇಂದಿನ ಅಥವಾ ಯಾವುದೇ ಕಾಲದ ಬದುಕಿಗೂ ಅನ್ವಯಿಸುತ್ತವೆ. ಮುಖ್ಯವಾಗಿ ದೇಹದ ದೌರ್ಬಲ್ಯವನ್ನು, ಮನಸ್ಸಿನ ಚಂಚಲತೆಯನ್ನು ಹೇಗೆ ಗೆಲ್ಲಬೇಕು? ಸಾಮಾಜಿಕ ಶೋಷಣೆಯನ್ನು ಹೇಗೆ ತಡೆಯಬೇಕು? ಎಂದು ಹೇಳುವಾಗ : **"ಲೋಕದ ಡೊಂಕು ನೀವೇಕೆ ತಿದ್ದುವಿರಿ?, ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ, ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ, ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ, ಕೂಡಲಸಂಗಮದೇವಾ."** ವಚನವನ್ನು ನೆರೆಮನೆಯವರ ಕಷ್ಟಕ್ಕೆ, ಸಮಾಜದ ತೊಂದರೆಗೆ ಸ್ಪಂದಿಸಬಾರದು ಎಂದು ಅರ್ಥಯಿಸಿದರೆ ಬಸವಣ್ಣನವರ ಆಶಯಕ್ಕೆ ಧಕ್ಕೆ ಆಗುತ್ತದೆ. ಬಸವಣ್ಣನವರ ದೃಷ್ಟಿಯಲ್ಲಿ ಸಮಾಜದ ಬಿಂದು ಎಂದರೆ ವ್ಯಕ್ತಿ. ವ್ಯಕ್ತಿ-ವ್ಯಕ್ತಿಯ ಬದುಕು ಹಸನಾಗದ ಹೊರತು ಸಮಾಜದ ಪ್ರಗತಿಯಾಗಲಿ, ಸಮಾಜದ ಸೌಖ್ಯವಾಗಲಿ ಸಾಧ್ಯವಿಲ್ಲ. ವ್ಯಕ್ತಿಯೊಬ್ಬನ ಸೌಖ್ಯವೆಂಬುದು ಅವನ ಮನಸ್ಸು ಮತ್ತು ದೇಹದ ಚಟುವಟಿಕೆಗಳನ್ನು ಅವಲಂಬಿಸಿರುವಂತಹದ್ದು. ಮನುಷ್ಯನ ಒಳಿತು, ಕೆಡಕಿನ ಬೀಜಗಳು ಚಿಗುರುವ ಸ್ಥಾನವೆಂದರೆ ಮನಸ್ಸು. 'ಲೋಕದ ಚೇಷ್ಟೆಗೆ ರವಿ ಬೀಜವಾದಂತೆ, ಕರಣಂಗಳ ಚೇಷ್ಟೆಗೆ ಮನಸ್ಸೇ ಬೀಜ' ಎಂದು ಅಕ್ಕಮಹಾದೇವಿ ತನ್ನ ಒಂದು ವಚನದಲ್ಲಿ ಹೇಳಿದ್ದಾಳೆ. ಆಸೆ ಆಮಿಷಗಳನ್ನು, ಇಂದ್ರಿಯಗಳ ಚಪಲತೆಯನ್ನು ಗೆಲ್ಲುವ ಮೂಲಕ ಮನಸ್ಸನ್ನು ಸಂತೈಸಿಕೊಳ್ಳುವುದೇ ಅಂತರಂಗಶುದ್ಧಿ. ಹಾಗೆಯೇ ದೇಹದ ಕಳವಳ ಗೆಲ್ಲುವುದು, ನಡೆ-ನುಡಿಯಲ್ಲಿ ಸಾಮರಸ್ಯ ಸಾಧಿಸುವುದು ಬಹಿರಂಗಶುದ್ಧಿ, ವ್ಯಕ್ತಿಗಳ ಒಳ ಹೊರಗಿನ ಶುದ್ಧತೆಯಿಂದ ಸಮಾಜವು ಸಶಕ್ತವಾಗಿ, ಆರೋಗ್ಯಪೂರ್ಣವಾಗಿ ಬೆಳೆಯಬಲ್ಲುದು. ಬಸವಣ್ಣನವರ ಆಶಯದಂತೆ ನಾವಿಂದು ಈ ಒಳ ಹೊರಗಿನ ಶುದ್ಧಿ ಸಾಧಿಸುವುದು ಅಗತ್ಯ.

* * *

ಮುದ್ರಣಾಲಯಗಳು ಮುದ್ರಣಕಾರ್ಯವನ್ನು ಕೊರೋನಾ ಲಾಕ್‌ಡೌನ್ ನಿಮಿತ್ತ ಸ್ಥಗಿತಗೊಳಿಸಿದ್ದರಿಂದ ಕಳೆದ ತಿಂಗಳ ಪತ್ರಿಕೆ ಪ್ರಕಟವಾಗಲಿಲ್ಲ. ಈ ಅವಧಿಯಲ್ಲಿ ಅನೇಕ ಘಟನೆಗಳು ಜರುಗಿವೆ. ಭಾಲ್ಕಿ ಹಿರೇಮಠದ ಪೂಜ್ಯರಿಗೆ ರಾಷ್ಟ್ರೀಯ ಬಸವ ಪುರಸ್ಕಾರ ಲಭಿಸಿದೆ. ಈ ಕುರಿತು ಅವರ ಸಾಧನೆಯ ಬಗ್ಗೆ ಪ್ರಸ್ತುತ ಸಂಚಿಕೆಯಲ್ಲಿ ವಿಶೇಷ ಲೇಖನ ಪ್ರಕಟಿಸಿದ್ದೇವೆ. ಈ ಸಂದರ್ಭದಲ್ಲಿ ಅವರಿಗೆ ಭಕ್ತಿಪೂರ್ವಕ ಅಭಿನಂದನೆಗಳು.

ಕನ್ನಡದ ಕಟ್ಟಾಳು ಡಾ. ಪಾಟೀಲ ಪುಟ್ಟಪ್ಪ, ನಾಟಕಕಾರ, ಕಥೆಗಾರ, ಚಿತ್ರಕಲಾವಿದ ಚಂದ್ರಕಾಂತ ಕುಸನೂರ ಮತ್ತು ನಿತ್ಯೋತ್ಸವ ಕವಿ ನಿಸಾರ್ ಅಹಮ್ಮದ ಅವರು ನಮ್ಮನ್ನು ಅಗಲಿದ್ದಾರೆ. ನಾಡೋಜ ಡಾ. ಪಾಟೀಲ ಪುಟ್ಟಪ್ಪ ನಮ್ಮ ನಾಡಿನ ಧೀಮಂತ ಪತ್ರಕರ್ತರು. ಕನ್ನಡ ನಾಡು-ನುಡಿ, ನೆಲ-ಜಲ, ಭಾಷೆ-ಸಂಸ್ಕೃತಿಯ ರಕ್ಷಣೆಗಾಗಿ ತಮ್ಮ ಬದುಕನ್ನೇ ಸವೆಸಿದವರು. ಶ್ರೀ ಚಂದ್ರಕಾಂತ ಕುಸನೂರ ಅವರು ಬಹುಮುಖಿ ಪ್ರತಿಭೆಯ ಹಿರಿಯ ಸಾಹಿತಿಗಳು. ಅನೇಕ ಸಾಹಿತಿ-ಕಲಾವಿದರನ್ನು ಪ್ರೋತ್ಸಾಹಿಸಿ ಬೆಳೆಸಿದವರು. ಹಾಗೆಯೇ ಕವಿ ನಿಸ್ಸಾರ ಅಹಮ್ಮದ ಅವರೂ ಕೂಡ ತಮ್ಮ ನಿತ್ಯೋತ್ಸವ ಕವಿತೆಯ ಮೂಲಕ ಕನ್ನಡಿಗರಲ್ಲಿ ನವ ಚೈತನ್ಯವನ್ನು ತುಂಬಿದವರು. ವೃತ್ತಿಯಿಂದ ಭೂಗರ್ಭಶಾಸ್ತ್ರದ ಪ್ರಾಧ್ಯಾಪಕರಾಗಿದ್ದರೂ ಪ್ರವೃತ್ತಿಯಿಂದ ಕವಿ-ಸಾಹಿತಿಯಾಗಿ ಜನಮನ್ನಣೆಗೆ ಪಾತ್ರರಾದವರು. ಇವರೆಲ್ಲರ ಅಗಲುವಿಕೆ ನಮ್ಮ ನಾಡು-ನುಡಿಗೆ ತುಂಬಲಾಗದ ಹಾನಿ. ಅವರಿಗೆ ಗೌರವಪೂರ್ವಕ ಶ್ರದ್ಧಾಂಜಲಿ.

ಏಪ್ರಿಲ್ ತಿಂಗಳ ಸಂಚಿಕೆ ಪ್ರಕಟವಾಗದೇ ಇರುವುದರಿಂದ, ಇದನ್ನು ಅನಿವಾರ್ಯ ಕಾರಣಗಳಿಂದ ಸಂಯುಕ್ತ ಸಂಚಿಕೆಯಾಗಿ ಪ್ರಕಟಿಸಿ ಕಳಿಸಿದ್ದೇವೆ. ಓದುಗರು ಎಂದಿನಂತೆ ಸಹಕರಿಸಿ ಪ್ರೋತ್ಸಾಹಿಸಬೇಕೆಂದು ಕೋರುತ್ತೇವೆ. ಸಂಯುಕ್ತ ಸಂಚಿಕೆಯಲ್ಲಿ ಉಳಿತಾಯವಾದ ಒಂದು ಸಂಚಿಕೆಯ ಮುದ್ರಣ ವೆಚ್ಚವನ್ನು ಕೋವಿಡ್-೧೯ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಕಳಿಸಲಾಗಿದೆ.

■■

# ವಚನಾರ್ಥ–ಚಿಂತನ

● ಡಾ. ಸಿದ್ಧರಾಮ ಸ್ವಾಮಿಗಳು

**ಸುಪ್ರಭಾತ ಸಮಯದಲ್ಲಿ ಅರ್ತಿಯಲ್ಲಿ**
**ಲಿಂಗವ ನೆನೆದಡೆ**
**ತಪ್ಪುವವು ಅಪಮೃತ್ಯು ಕಾಲಕರ್ಮಂಗಳಯ್ಯ**
**ದೇವಪೂಜೆಯ ಮಾಟ, ದುರಿತ ಬಂಧನದೋಟ!**
**ಶಂಭು ನಿಮ್ಮಯ ನೋಟ, ಹಿಂಗದ ಕಣ್ಬೇಟ!**
**ಸದಾ ಸನ್ನಿಹಿತನಾಗಿ ಶರಣೆಂಬುವುದು, ನಂಬುವದು.**
**ಜಂಗಮಾರ್ಚನೆಯ ಮಾಟ ಕೂಡಲಸಂಗನ ಕೂಟ!**

ಲಿಂಗಾಯತ ಧರ್ಮದರ್ಶನದಲ್ಲಿ ಲಿಂಗ ಮತ್ತು ಜಂಗಮಕ್ಕೆ ವಿಶೇಷ ಸ್ಥಾನ ಕಲ್ಪಿಸಲಾಗಿದೆ. ಮನಮಗ್ನವಾಗಿ ಲಿಂಗಪೂಜೆಯನ್ನು ಮಾಡಬೇಕು. ಆ ಲಿಂಗದ ಮುಖ ಜಂಗಮವೆಂದರಿತು, ಆ ಜಂಗಮಕ್ಕೆ ಸಕಲ ಪದಾರ್ಥ–ಗಳನ್ನು ಸಮರ್ಪಿಸಿ ಸೇವೆ ಮಾಡುವ ಭಕ್ತನು ತನ್ನ ಸಾಧನೆಯ ಕೊನೆಯಲ್ಲಿ ಲಿಂಗಾಂಗ ಸಾಮರಸ್ಯವನ್ನು ಹೊಂದುವನು ಎಂದು ಹೇಳುವ ಅಣ್ಣ ಬಸವಣ್ಣನವರು ಲಿಂಗಪೂಜೆಯ ವಿಶೇಷ ಮಹತ್ವವನ್ನು ಈ ವಚನದಲ್ಲಿ ವಿವರಿಸುತ್ತಾರೆ.

ಪರಶಿವನ ನಾಮಸ್ಮರಣೆಯನ್ನು ಪ್ರತಿದಿನ ಪ್ರತಿಕ್ಷಣ ಮಾಡುವುದು ಎಲ್ಲರಿಗೂ ಸುಲಭ ಸಾಧ್ಯವಾದುದಲ್ಲ. ಕನಿಷ್ಟಪಕ್ಷ ಬೆಳಗಿನ ಸಮಯದಲ್ಲಾದರೂ ಲಿಂಗಪೂಜೆ ಲಿಂಗಧ್ಯಾನಗಳನ್ನು ಸಾಧಕರು ಕೈಕೊಳ್ಳಬೇಕು. ಪ್ರಾತಃಕಾಲ ಲಿಂಗಪೂಜೆಗೆ ತುಂಬ ಪ್ರಶಸ್ತವಾದುದು. ಬೆಳಗಾಗುವುದಕ್ಕೆ ಮುನ್ನವೆ ಎದ್ದು ಶುಚಿರ್ಭೂತನಾಗಿ ದೇವರನ್ನು ಸ್ಮರಿಸಬೇಕು. ಆಗ ಮನಸ್ಸು ಶಾಂತವಾಗಿರುವುದರಿಂದ, ಬಾಹ್ಯ ಪರಿಸರವೂ ಗೌಜು ಗದ್ದಲಗಳಿಂದ ಮುಕ್ತವಾಗಿರುವುದರಿಂದ ಬಹುಬೇಗನೇ ಏಕಾಗ್ರತೆ ಸಾಧ್ಯವಾಗಿ ಪರಮಾತ್ಮನಲ್ಲಿ ಮನಸ್ಸು ಲಿಪ್ತವಾಗುವುದು. ಮನಸ್ಸಿನಲ್ಲಿಯೂ ಪರಮಾತ್ಮನ ನೆನಹು ತುಂಬಿಕೊಳ್ಳುವುದು. ಇದರಿಂದ ಸಾಧಕನಿಗೆ ವಿಶಿಷ್ಟ ಸಿದ್ಧಿಗಳು ಅವನಿಗರಿವಿಲ್ಲದಂತೆಯೇ ಪ್ರಾಪ್ತವಾಗುವವು. ಸಾಧಕನು ದುರಿತಕರ್ಮದ ದುಷ್ಫಲಗಳಿಂದ ಮುಕ್ತನಾಗುವನು; ಕಾಲವನ್ನು ಜಯಿಸಿ ಕಾಲಾತೀತನೆನಿಸುವನು; ತನ್ನ ಬದುಕಿನಲ್ಲಿ ಬಂದೊದಗುವ ಆಪತ್ತು, ಅಪಮೃತ್ಯುಗಳನ್ನು ಜಯಿಸಿ ವಿಜಯಶಾಲಿ ಎನಿಸುವನು. ಅದುವರೆಗೆ ಅವನು ಮಾಡಿದ ಪಾಪಕರ್ಮಗಳೆಲ್ಲವೂ ಉರಿಗೆ ಒಡ್ಡಿದ (ತಾಗಿದ) ಅರಗಿನಂತೆ ಕರಗಿ ಹೋಗುವವು.

ಲಿಂಗವಂತ ಸಾಧಕರು ಸಾಂಸಾರಿಕ ವ್ಯಾಮೋಹವನ್ನು ತ್ಯಜಿಸಿ ಭಕ್ತಿಯಿಂದ ಲಿಂಗಪೂಜೆಯನ್ನು ಕೈಕೊಳ್ಳಬೇಕು. ಅಷ್ಟವಿಧಾರ್ಚನೆ ಹಾಗು ಷೋಡಶೋಪಚಾರಗಳ ಬಹಿರಂಗ ಪೂಜೆಯನ್ನು ಮೀರಿ ಅಂತರಂಗದ ಅರಿವು, ಆಚಾರ, ಸತ್ಯ, ಸದ್ವಿವೇಕ, ಪ್ರೀತಿ ವಿಶ್ವಾಸಗಳನ್ನು ಪರಮಾತ್ಮನಿಗೆ ಸಮರ್ಪಿಸಬೇಕು. ಅಜ್ಞಾನ, ಆಲಸ್ಯಗಳಿಂದ ಮೇಲೆದ್ದು ನಿರಂತರ ಜಾಗೃತನಾಗಿರಬೇಕಾದುದು ಅತ್ಯವಶ್ಯ. ಸಮಯವನ್ನು ನಿರರ್ಥಕಗೊಳಿಸದೆ ಲಿಂಗಪೂಜೆಯನ್ನು ಬದುಕಿನ ಅವಿಭಾಜ್ಯ ಅಂಗವಾಗಿಸಿಕೊಂಡ ಸಾಧಕನ ಕ್ರಿಯಾನಿಷ್ಠೆಯಿಂದ ಅವನ ಅಜ್ಞಾನದ ಪೊರೆ ಹರಿದು ಅವನಲ್ಲಿ ಜ್ಞಾನದ ಬೆಳಕು ಗೋಚರಿಸುವುದು. ಜ್ಞಾನಾಗ್ನಿಯಿಂದ ಅವನ ದುರಿತ ದುರ್ಗುಣಗಳೆಲ್ಲವೂ ನಾಶವಾಗಿ ಬಂಧನದಿಂದ ಅರ್ಥಾತ್ ಹುಟ್ಟು ಸಾವುಗಳೆಂಬ ಭವಚಕ್ರದಿಂದ ಅವನು ಮುಕ್ತನಾಗುವನು.

ಭಕ್ತಿಯಿಂದ ಲಿಂಗವನ್ನು ಪೂಜಿಸುವುದಷ್ಟೇ ಅಲ್ಲ ಮಾಡಿದ ಪೂಜೆಯನ್ನು ತದೇಕಚಿತ್ತದಿಂದ ನೋಡಬೇಕು. “ಅಷ್ಟವಿಧಾರ್ಚನೆ, ಷೋಡಶೋಪಚಾರವ ಮಾಡುವುದು; ಮಾಡಿದ ಪೂಜೆಯ ನೋಡುವುದಯ್ಯ” ಎಂದು ಬಸವಣ್ಣನವರು ಇನ್ನೊಂದೆಡೆ ಸ್ಪಷ್ಟಪಡಿಸಿದ್ದಾರೆ. ಪರಮಾತ್ಮನೊಡನೆ ಬೆರೆತು ಒಂದಾಗಲು ಲಿಂಗವನ್ನು ಭಕ್ತಿಯಿಂದ, ಶ್ರದ್ಧೆಯಿಂದ ಪೂಜಿಸುವುದು ಮತ್ತು ತದೇಕಚಿತ್ತದಿಂದ ನೋಡುವುದೂ ಕೂಡ ಅತ್ಯವಶ್ಯವಾದುದು. ಭಾವಪರವಶನಾಗಿ ಲಿಂಗನಿರೀಕ್ಷಣೆ ಮಾಡುವ ಸಾಧಕನಿಗೆ ಲಿಂಗವನ್ನು ಎಷ್ಟು ನೋಡಿದರೂ ತೃಪ್ತಿಯಿಲ್ಲ. ಮತ್ತೂ ನೋಡಬೇಕೆಂಬ, ಲಿಂಗದೊಡನೆ ಭಕ್ತಿ ಸಂಭಾಷಣೆಯ ಮಾಡಬೇಕೆಂಬ ಅವನ ಅಭೀಪ್ಸೆ ಹೆಚ್ಚುತ್ತಲೇ ಹೋಗುವುದು.

**ನಾಗನೂರು ಶ್ರೀ ರುದ್ರಾಕ್ಷಿಮಠ, ಬೆಳಗಾವಿ**

ಬಸವಣ್ಣನವರ ದೃಷ್ಟಿಯಲ್ಲಿ ಲಿಂಗನಿರೀಕ್ಷಣೆ ಎಂಬುದು ನಿಜಕ್ಕೂ ಸಾಧಕನಿಗೆ ಎಂದೆಂದೂ ತೃಪ್ತಿಯಾಗದ ಕಣ್ಣೇಟವೇ ಸರಿ.

ಕೂಡಲಸಂಗನಕೂಟ ಎಂದರೆ ಶಿವಯೋಗ. ಒಂದಕ್ಕಿಂತ ಹೆಚ್ಚು ವಸ್ತು ಅಥವಾ ವ್ಯಕ್ತಿಗಳ ಕೂಡುವಿಕೆಗೆ ಯೋಗವೆಂದು ಸ್ಥೂಲವಾಗಿ ಹೇಳುತ್ತೇವೆ. ಸಾಧಕನು ಪರಮಾತ್ಮನಲ್ಲಿ ಬೆರೆಯಲು ಅಥವಾ ಅಂಗ ಲಿಂಗಗಳ ಸಾಮರಸ್ಯ ಉಂಟಾಗಲು ಸಾಧಕನು ಸದಾ ಪರಮಾತ್ಮನ ಸಾನ್ನಿಧ್ಯದಲ್ಲಿರಬೇಕಾದುದು, ಪರಮಾತ್ಮನಲ್ಲಿ ಶ್ರದ್ಧೆ, ನಿಷ್ಠೆಗಳನ್ನು ಹೊಂದಿರಬೇಕಾದುದು ಬಹುಮುಖ್ಯ. ಪರಮಾತ್ಮನಲ್ಲಿ ವಿಶ್ವಾಸವನ್ನಿಟ್ಟು ಶರಣಾಗತನಾದ ಸಾಧಕನು ಜಂಗಮದಾಸೋಹದ ಮೂಲಕ ಶಿವಯೋಗವನ್ನು ಸಾಧಿಸುವನು. ಲಿಂಗಪೂಜೆಯಷ್ಟೇ ಜಂಗಮಾರ್ಚನೆಯೂ ಕೂಡ ಮಹತ್ವಪೂರ್ಣ–ವಾದುದು. ಲಿಂಗಪೂಜೆಯು ಸಾರ್ಥಕತೆಯನ್ನು ಪಡೆದುಕೊಳ್ಳುವುದೇ ಜಂಗಮಾರ್ಚನೆಯಿಂದ. ಅದಕ್ಕಾಗಿಯೇ ಬಸವಣ್ಣನವರು 'ನಾನು ಲಿಂಗಾರ್ಚನೆಯ ಮಾಡುವೆನಯ್ಯ ಜಂಗಮ ಮನೆಗೆ ಬರಲೆಂದು' ಎಂದು ಹೇಳುತ್ತಾರೆ. ಜಂಗಮ ಮನೆಗೆ ಬಂದಾಗ ಆ ಲಿಂಗಾರ್ಚನೆಯನ್ನು ಬಿಟ್ಟು ಜಂಗಮಾರ್ಚನೆಯನ್ನು ಮಾಡಬೇಕು. ಜಂಗಮವನ್ನು ಮರೆತು ಮಾಡುವ ಲಿಂಗಪೂಜೆ 'ಮರನೇರಿ ಕೈಯ ಬಿಟ್ಟಂತಾಗುವುದು' ಅಂದರೆ ಅಂಥ ಸಾಧಕನಿಗೆ ಅಧಃಪತನವೇ ಗತಿಯಾಗುವುದು. ಲಿಂಗದ ಮುಖವೇ ಜಂಗಮ. ಅವನು ಸಾಕ್ಷಾತ್ ಲಿಂಗಸ್ವರೂಪಿ ಎಂಬುದನ್ನು ಸಾಧಕನು ಅರಿಯಬೇಕು. ಜಂಗಮದಾಸೋಹ, ಜಂಗಮಸೇವೆ ಇಲ್ಲದ ಲಿಂಗಪೂಜೆ ಅರ್ಥಹೀನ. ನಮ್ಮ ಭಕ್ತಿಯನ್ನು ಪರಮಾತ್ಮನು ಸ್ವೀಕರಿಸುವುದೂ ಜಂಗಮದ ಮೂಲಕವೇ. ಆದ್ದರಿಂದ ಸಾಧಕನು ಜಂಗಮದಾಸೋಹದ ರಹಸ್ಯವನ್ನು, ಲಿಂಗ ಜಂಗಮ ಒಂದೇ ಎಂಬುದನ್ನು ಅರಿತು ಆಚರಿಸಿದಾಗ ಖಂಡಿತವಾಗಿಯೂ ಶಿವಯೋಗವನ್ನು ಸಾಧಿಸುತ್ತಾನೆ; ಲಿಂಗಾಂಗ ಸಾಮರಸ್ಯ ಸುಖವನ್ನು ಅನುಭವಿಸಲು ಸಮರ್ಥನಾಗುತ್ತಾನೆ ಎಂಬುದು ಬಸವಣ್ಣನವರ ಈ ವಚನದ ಸ್ಥೂಲ ಆಶಯ.

* * *

## ಬಸವಣ್ಣನವರು

ಹನ್ನೆರಡನೆಯ ಶತಮಾನದಲ್ಲಿ ಜರುಗಿದ ಸಮಾಜೋಧಾರ್ಮಿಕ ಚಳುವಳಿಯ ನೇತಾರರು ವಿಶ್ವಗುರು ಬಸವಣ್ಣನವರು. ಇಂದಿನ ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿ ಇವರ ಜನ್ಮಗ್ರಾಮ. ತಂದೆ ಮಾದರಸ, ತಾಯಿ ಮಾದಲಾಂಬಿಕೆ. ಕೂಡಲಸಂಗಮದಲ್ಲಿ ವಿದ್ಯಾಧ್ಯಯನ. ಕಳಚುರಿ ಬಿಜ್ಜಳನ ಮಂಗಳವೇಡೆಯಲ್ಲಿ ಕರಣಿಕ–ಗಣಕಾಧಿಕಾರಿಯಾಗಿ ವೃತ್ತಿ ಜೀವನದ ಪ್ರಾರಂಭ. ಬಿಜ್ಜಳನು ಕಲ್ಯಾಣದ ಚಕ್ರವರ್ತಿಯಾದ ಮೇಲೆ ಕಲ್ಯಾಣದಲ್ಲಿ ಅರ್ಥಮಂತ್ರಿಯಾಗಿ (ಭಂಡಾರಿ) ಕಾರ್ಯನಿರ್ವಹಣೆ. ವರ್ಗಭೇದ–ವರ್ಣಭೇದ ವ್ಯವಸ್ಥೆಯಿಂದ ಶೋಷಿತ ಸಮುದಾಯದ ಕಲ್ಯಾಣಕ್ಕಾಗಿ ನಿರಂತರ ಶ್ರಮಿಸಿದ ಅವರು ಸಮಾನತೆ, ಕಾಯಕ–ದಾಸೋಹದಂತಹ ಮೌಲ್ಯಗಳನ್ನು ಪ್ರತಿಪಾದಿಸಿದವರು, ಆಮೂಲಕ ಆರ್ಥಿಕ ಸಮಾನತೆ ಸಾಧಿಸಿದ ಭಾರತದ ಪ್ರಪ್ರಥಮ ಸಮಾಜವಾದಿ ಚಿಂತಕರು. ತಮ್ಮ ಚಿಂತನೆಗಳಿಗೆ ವಚನಗಳನ್ನು ಮಾಧ್ಯಮವಾಗಿಸಿಕೊಂಡವರು. ಜನಭಾಷೆಯಾದ ಕನ್ನಡದಲ್ಲಿ 'ಕೂಡಲಸಂಗಮದೇವ' ಎಂಬ ಅಂಕಿತದೊಂದಿಗೆ ರಚನೆಯಾದ ಅವರ ವಚನಗಳು ಇಂದಿನ ಭಾವಗೀತೆಗಳಂತಿದ್ದು, ನೋವು–ನಲಿವು, ಪ್ರೀತಿ–ಕರುಣೆ, ಶ್ರದ್ಧೆ–ಭಕ್ತಿ ಮತ್ತು ಆತ್ಮನಿರೀಕ್ಷಣೆಯ ಭಾವಗಳನ್ನು ಅಭಿವ್ಯಕ್ತಗೊಳಿಸುತ್ತವೆ. ವಚನಗಳ ಮೂಲಕ ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸಿದ ಅವರು ಮಹಾಮಾನವತಾವಾದಿ ಎಂದೇ ಇತಿಹಾಸದಲ್ಲಿ ಖ್ಯಾತನಾಮರು. ಅವರು ಬರೆದ ವಚನಗಳಲ್ಲಿ ಇದುವರೆಗೆ ೧೪೧೪ ವಚನಗಳು ಲಭ್ಯವಾಗಿವೆ. ಕೂಡಲಸಂಗಮದಲ್ಲಿ ಅವರು ಲಿಂಗೈಕ್ಯರಾದರು.

# ಬಸವಣ್ಣನವರ ವಿಶ್ವಸಂದೇಶ

● ಡಾ. ಗೊ. ರು. ಚನ್ನಬಸಪ್ಪ

*(೨೦-೪-೨೦೦೭ ರಂದು ಕರ್ನಾಟಕ ಸರ್ಕಾರ ವಿಧಾನ ಸೌಧದ ಮುಂದೆ ಆಚರಿಸಿದ ಪ್ರಥಮ 'ಬಸವಜಯಂತಿ' ಸಂಜರ್ಭದಲ್ಲಿ ಮಾಡಿದ ವಿಶೇಷೋಪನ್ಯಾಸ)*

"ಎನ್ನ ಮಡದಿ ಹಾಲು ಕಾಯಿಸುವಾಗ, ಹಾಲಿನ ಕುಡಿಕೆಯಲ್ಲಿ ಹಾವು ಬಿದ್ದು ಸತ್ತಿತ್ತು. ಮಡದಿಯ ಬಿಡುವಂತಿಲ್ಲ, ಹಾಲನ್ನು ಕುಡಿಯುವಂತಿಲ್ಲ, ಕುಡಿಕೆಯ ಒಡೆಯುವಂತಿಲ್ಲ, ಹಾವಿನ ವಿಷ ಹಾಲಿನಲ್ಲಿ ಸೇರಿತ್ತು. ಇದಕಿನ್ನಾವುದು ತೆರ" ಇದು ಹನ್ನೆರಡನೆಯ ಶತಮಾನದ ಶರಣ ಅರಿವಿನ ಮಾರಿತಂದೆ ಅನುಭವಿಸಿದ ಒಂದು ಅವಸ್ಥೆ. ಈ ಅವಸ್ಥೆಯನ್ನು ನಮ್ಮ ಇಂದಿನ ಧಾರ್ಮಿಕ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವ್ಯವಸ್ಥೆಗಳಿಗೆ ಅನ್ವಯಿಸಿದರೆ ನಮ್ಮದೂ ಅದೇ ಸ್ಥಿತಿ; ಅದೇ ಗತಿ.

ಬಸವ ಜಯಂತಿ ಆಚರಣೆ ಹೊಸದಲ್ಲವಾದರೂ ಇಂದು ಇಲ್ಲಿ ಹೊಸತು. ವ್ಯಕ್ತಿ ಸ್ವಾತಂತ್ರ್ಯ, ಸಮಾನತೆ, ವೈಚಾರಿಕತೆ ಮತ್ತು ಸಹಬಾಳ್ವೆಯ ಒಂದು ಸಭ್ಯ ಸಮಾಜ ನಿರ್ಮಾಣದ ಧ್ಯೇಯದಿಂದ ಕನ್ನಡದ ನೆಲದಲ್ಲಿ ಅಪೂರ್ವವಾದ ಆಂದೋಲನವನ್ನು ನಡೆಸಿ, ಬಸವಣ್ಣನವರು ಲೋಕಸೋಜಿಗದ ಒಂದು ದಾಖಲೆಯನ್ನು ಸ್ಥಾಪಿಸಿದ್ದರೆ, ಅವರ ಜಯಂತಿಯನ್ನು ಜನಪ್ರಭುತ್ವದ ಕೇಂದ್ರವಾಗಿರುವ ವಿಧಾನಸೌಧದ ಮುಂಬಯಲಿನಲ್ಲಿ ಆಚರಿಸುವ ಮೂಲಕ ನಮ್ಮ ಕರ್ನಾಟಕದ ಇಂದಿನ ಮೈತ್ರಿ ಸರ್ಕಾರ ಪ್ರಥಮ ದಾಖಲೆ ಸ್ಥಾಪಿಸಿದೆ. ಇದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಹೆಚ್. ಡಿ. ಕುಮಾರಸ್ವಾಮಿ, ಮಾನ್ಯ ಉಪಮುಖ್ಯಮಂತ್ರಿಗಳಾದ ಶ್ರೀ ಬಿ. ಎಸ್. ಯಡಿಯೂರಪ್ಪ, ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ಶ್ರೀ ಹೆಚ್. ಎಸ್. ಮಹದೇವಪ್ರಸಾದ್ ಮತ್ತು ಸಚಿವ ಸಂಪುಟದ ಸಮಸ್ತರನ್ನೂ ನಾಡಿನ ಜನತೆಯ ಪರವಾಗಿ ನಾನು ಅಭಿನಂದಿಸುತ್ತೇನೆ. ಈ ಆಚರಣೆ ನಮ್ಮ ನೆಲದ ಸಾಂಸ್ಕೃತಿಕ ಬದುಕಿನ ಬಗೆಗೆ ರಾಜ್ಯ ಸರ್ಕಾರಕ್ಕಿರುವ ಬದ್ಧತೆಯ ಸಂಕೇತವೆಂದು ನಾನು ಭಾವಿಸಿದ್ದೇನೆ.

ಮಾನವ ತನ್ನ ಆದಿಯಿಂದಲೂ ಎರಡು ಶಕ್ತಿಗಳ ವಿರುದ್ಧ ಹೋರಾಡುತ್ತಲೇ ಬಂದಿದ್ದಾನೆ. ಒಂದು ಪ್ರಕೃತಿ ವಿಕೋಪ; ಇನ್ನೊಂದು ತನ್ನದೇ ಆದ ಪಾಶವೀ ಕೃತ್ಯ. ಈ ಹೋರಾಟದಲ್ಲಿ ಅವನು ಸೋತು ಮತ್ತು ಗೆದ್ದ ಕಥೆಯೇ ಇತಿಹಾಸ. ಇತಿಹಾಸದ ಕಾಲಗರ್ಭ ತನ್ನಲ್ಲಿ ಅಡಗಿಸಿಕೊಂಡಿರುವ ಮಾನವನ ಆಗು-ಹೋಗುಗಳನ್ನು ಹುಡುಕಿ ನೋಡುವ ಕೆಲಸ ನಡೆದೇ ಇದೆ.

ಇತಿಹಾಸದ ಗರ್ಭದಲ್ಲಿ ಸೇರಿ ಹೋಗಿರುವ ಅಂತಹ ಒಂದು ಅಮೂಲ್ಯ ಜೀವರತ್ನ ಬಸವಣ್ಣನವರು. ಈ ಜೀವರತ್ನವನ್ನು ಹೊರಗೇನೋ ತೆಗೆದಿದ್ದೇವೆ. ಆದರೆ ಅದನ್ನು ಪೆಟ್ಟಿಗೆಯಲ್ಲಿಟ್ಟು ವರ್ಷಕ್ಕೊಮ್ಮೆ ನೋಡುವ ಶಾಸ್ತ್ರ ಮಾತ್ರ ನಡೆಯುತ್ತಿದೆ. ವರ್ಷಕ್ಕೊಮ್ಮೆ ಇಂತಹ ಜಯಂತಿಯ ರೂಪದಲ್ಲಿ ಬಸವಣ್ಣನವರನ್ನು ನೆನೆಯುವುದಾಗಿದೆಯೇ ಹೊರತು ಅವರಂತೆ ನಡೆಯಲು ನಮಗಿನ್ನೂ ಸಾಧ್ಯವಾಗಿಲ್ಲ.

ನೆನೆಯುವುದು ಎಂದರೆ ಒದ್ದೆಯಾಗುವುದು. ಒದ್ದೆಯಾಗುವುದು ಏಕೆ? ಶುದ್ಧವಾಗಲಿಕ್ಕಾಗಿ. ವಾಸ್ತವವಾಗಿ, ಬಸವಣ್ಣನವರ ವಿಚಾರಧಾರೆಯ ಮಡುವಿನಲ್ಲಿ ಮುಳುಗೆದ್ದು ಇಷ್ಟರಲ್ಲಿ ನಾವೆಲ್ಲ ಮಡಿಯಾಗಬೇಕಾಗಿತ್ತು. ಆದರೆ ದಡದಲ್ಲೇ ನಿಂತು ಸಡಗರಿಸುವ ಕೆಲಸ ನಡೆದಿದೆ. ಮುಳುಗಿದರೆ ಎಲ್ಲಿ ಚಳಿಯಾಗುವುದೋ ಎಂಬ ಭಯ ನಮಗೆ. ಹೀಗಾಗಿ, ಬಸವಣ್ಣನವರು ಕೇವಲ ಜಯಂತಿಯ ವಸ್ತುವಾಗಿದ್ದಾರೆಯೇ ವಿನಃ ಅವರ ಬದುಕಿನ ಶಿಸ್ತು ನಮಗೆ ಬಂದಿಲ್ಲ.

ನಿಜ ನಮಗೆ ಅತ್ಯಂತ ಪುರಾತನವಾದ ಪರಂಪರೆಯಿದೆ. ರೋಮಾಂಚಕಾರಿ ಇತಿಹಾಸವಿದೆ. ಆಧ್ಯಾತ್ಮಿಕ ಅನುಭಾವದ ಅದ್ವಿತೀಯ ಹಿನ್ನೆಲೆಯಿದೆ. ನಾಗರಿಕತೆಯ ಸುದೀರ್ಘ ಚರಿತ್ರೆಯಿದೆ. ಸಾಹಿತ್ಯ, ಸಂಸ್ಕೃತಿ, ಧರ್ಮ ಸಿದ್ಧಾಂತಗಳ

# ೪೦೬, ಪ್ರಣಾಮ, ಎಫ್ ರಸ್ತೆ, ೨ನೇ ಫೇಸ್ ಐಡಿಯಲ್ ಹೋಮ್ಸ್ ಟೌನ್‌ಶಿಪ್ ರಾಜರಾಜೇಶ್ವರಿ ನಗರ ಬೆಂಗಳೂರು

ಭಂಡಾರವಿದೆ. ಇಷ್ಟೆಲ್ಲ ಹಿನ್ನೆಲೆ ಇದ್ದರೂ ನೆಮ್ಮದಿಯಿಲ್ಲದ ವಾತಾವರಣದಲ್ಲಿ ಬದುಕಬೇಕಾದ ವಿಪರ್ಯಾಸವೂ ಇದೆ. ವಾಸ್ತವವಾಗಿ, ನಾವೆಲ್ಲ ಒಂದು ರೀತಿಯ ಮೂಕಹಿಂಸೆ ಅನುಭವಿಸುತ್ತಿದ್ದೇವೆ. ಭಯ-ಸಂಶಯಗಳ ಬೆಂಕಿಯಲ್ಲಿ ಬಿದ್ದು ಪರಿತಪಿಸುತ್ತಿದ್ದೇವೆ.

ಈ ಪರಿಸ್ಥಿತಿ ಕೇವಲ ನಮ್ಮ ದೇಶಕ್ಕೆ ಸೀಮಿತವಾಗಿದೆ ಎಂದೇನೂ ಅಲ್ಲ. ಇಡೀ ಜಗತ್ತಿನ ಎಲ್ಲ ಕಡೆ ಹೀಗೆ ಮಾನವ ಘನತೆ ಮತ್ತು ಮಾನವೀಯತೆಗಳೂ ಆಘಾತಕ್ಕೆ ಒಳಗಾಗಿರುವುದನ್ನು ಕಾಣುತ್ತೇವೆ. ಇದನ್ನು ಗಮನದಲ್ಲಿಟ್ಟುಕೊಂಡಾದರೂ ನಾವು ಬಸವಣ್ಣನವರಂತಹ ದಾರ್ಶನಿಕರ ಜೀವನ ಮತ್ತು ಸಂದೇಶಗಳ ಬಗೆಗೆ ಗಂಭೀರ ಚಿಂತನೆ ನಡೆಸುವ ಅಗತ್ಯವಿದೆ ಎಂದು ನಾನು ಭಾವಿಸಿದ್ದೇನೆ. ಬಸವಣ್ಣನವರು ನೀಡಿರುವ ಸಂದೇಶ ಯಾವುದೋ ಒಂದು ನಿರ್ದಿಷ್ಟ ಪ್ರದೇಶಕ್ಕೆ, ನಿರ್ದಿಷ್ಟ ಜನವರ್ಗಕ್ಕೆ, ನಿರ್ದಿಷ್ಟ ಕಾಲಮಾನಕ್ಕಾಗಿ ನೀಡಿದ ಸಂದೇಶವಲ್ಲ, ಅದು ಸಾರ್ವಕಾಲಿಕವಾದ ಮತ್ತು ಸಮಸ್ತ ಮಾನವ ಸಮುದಾಯಕ್ಕೆ ಅನ್ವಯವಾಗುವ ಜೀವನಸಂದೇಶ.

ನಮಗೆ ಬಸವಣ್ಣನವರ ಬದುಕಿನ ನೈಜ ದರ್ಶನವಾಗುವುದು ಅವರನ್ನು ಕುರಿತಂತೆ ಬಂದಿರುವ ಪುರಾಣಗಳಿಂದಲ್ಲ; ಅವರಿಂದಲೇ ಮತ್ತು ಅವರ ಸಮಕಾಲೀನರಿಂದಲೇ ರಚಿತವಾಗಿರುವ ವಚನಗಳಿಂದ. ಹನ್ನೆರಡನೆಯ ಶತಮಾನದ ಶರಣರು ಕನ್ನಡ ಸಾಹಿತ್ಯ ಭಂಡಾರಕ್ಕೆ ಕೊಟ್ಟಿರುವ ಅನನ್ಯ ಕೊಡುಗೆಯೆಂದರೆ, ಜನಸಾಮಾನ್ಯರಲ್ಲೂ ವೈಚಾರಿಕ ಪ್ರಜ್ಞೆ ಮೂಡಿಸಿದ ವಚನಸಾಹಿತ್ಯ. ಬಸವಣ್ಣನವರು ನಡೆಸಿದ ಸಮಾಜೋ-ಧಾರ್ಮಿಕ ಚಳುವಳಿ ಒಂದು ರೀತಿಯಲ್ಲಿ ಜನಪರ ಸಾಹಿತ್ಯ ಚಳುವಳಿಯೂ ಆಯಿತು. ಆ ಚಳುವಳಿ ವಿಶ್ವದ ಇತಿಹಾಸದಲ್ಲೇ ನಡೆದ ಒಂದು ಅದ್ಭುತ ಪ್ರಯೋಗ; ಅಪ್ರತಿಮ ಕ್ರಾಂತಿ.

ಮಡಿ-ಮೈಲಿಗೆಗಳ ಗಡಿ ದಾಟಿಸಿ, ಸಾಹಿತ್ಯವನ್ನು ನಿಜವಾದ ಅರ್ಥದಲ್ಲಿ ಜನದನಿಯನ್ನಾಗಿಸಿದ ಹಿರಿಮೆ ವಚನಕಾರರದು. ವಚನ ಸಾಹಿತ್ಯ ಆಕಾಶದ ಹೂವಲ್ಲ; ನೆಲದ ಹಣ್ಣು, ಅದು ಬುದ್ಧಿಕುಶಲತೆಯ ಸೃಷ್ಟಿಯಲ್ಲ; ಶುದ್ಧ ಬದುಕಿನ ಅನುಭಾವದ ಅಭಿವ್ಯಕ್ತಿ. ಅದು ಅನ್ಯರ ಮೆಚ್ಚುಗೆಗಾಗಿ ಮೈತಳೆದುದಲ್ಲ; ಆತ್ಮನಿರೀಕ್ಷೆ ಅದರ ಅಂತರಂಗ. ವಚನ ಸಾಹಿತ್ಯದ ಒಳಹೊರಗೆಲ್ಲ ಇರುವುದು ಮೌಲ್ಯಾದರ್ಶ; ಸಮಷ್ಟಿ ಹಿತಚಿಂತನ. ಅದು ಸಿರಿಯ ಶೃಂಗಾರವಲ್ಲ; ಬಯಲ ಬಂಗಾರ.

ವಚನ ಸಾಹಿತ್ಯ ಜನಪರ ಆಶಯಗಳಿಗೆ ಬದ್ಧವಾದ ಸಾಹಿತ್ಯ. ಅದನ್ನು ವಿದ್ವಾಂಸರು ಕನ್ನಡದ ಸ್ವಯಾರ್ಜಿತ ಆಸ್ತಿ ಎಂದು ಹೇಳಿದ್ದಾರೆ. ಅನುಭವವನ್ನು ಅನುಭಾವದೆತ್ತರಕ್ಕೆ, ಮಾತನ್ನು ಜ್ಯೋತಿರ್ಲಿಂಗದೆತ್ತರಕ್ಕೆ ಒಯ್ದ ಒಂದು ವಿಶಿಷ್ಟ ಪ್ರಕಾರ ವಚನಸಾಹಿತ್ಯ.

ಯಾವುದೇ ಸಾಹಿತ್ಯ ಸೃಷ್ಟಿಗೆ ಒಂದು ಪ್ರೇರಣೆ ಮತ್ತು ಕಾರಣ ಇರುತ್ತವೆ. ವಚನ ಸಾಹಿತ್ಯ ಸೃಷ್ಟಿಗೆ ಅಂತಹ ಪ್ರೇರಣೆ ಒದಗಿಸಿದ್ದು ಹನ್ನೆರಡನೆಯ ಶತಮಾನದಲ್ಲಿದ್ದ ಪರಿಸ್ಥಿತಿ.

ಅಂದಿನ ಧಾರ್ಮಿಕ ಕ್ಷೇತ್ರದಲ್ಲಿ ಪೂರ್ವಜನ್ಮ ಪುನರ್ಜನ್ಮ ಸಿದ್ಧಾಂತ, ಮಾಯಾ-ಮೋಕ್ಷ ಸಿದ್ಧಾಂತ, ಕರ್ಮ ಸಿದ್ಧಾಂತ, ಅವತಾರವಾದ, ಸ್ವರ್ಗ-ನರಕಗಳ ನಂಬಿಕೆ-ಇವುಗಳನ್ನು ಜನರ ತಲೆಯಲ್ಲಿ ತುಂಬಲಾಗುತ್ತಿತ್ತು. ಹೋಮ-ಹವನಗಳು, ಶಾಂತಿ ಸಮಾರಾಧನೆಗಳು ಮೇಲ್ವರ್ಗದರು ಎನ್ನುವವರ ಶಾಸ್ತ್ರಾಚರಣೆಗಳಾಗಿದ್ದರೆ, ಭೂತ-ಪ್ರೇತಗಳ ಕಲ್ಪನೆ, ಹರಕೆ-ಬಲಿ ಮೊದಲಾದವು ಕೆಳವರ್ಗದವರೆನಿಸಿದವರ ಆಚರಣೆಗಳಾಗಿದ್ದವು. ದೇವರು ಮತ್ತು ಧರ್ಮದ ಬಗೆಗೆ ಕೇವಲ ಅಂಧಶ್ರದ್ಧೆ ಮತ್ತು ಮೂಢನಂಬಿಕೆಗಳು ಜನರಲ್ಲಿ ಮನೆಮಾಡಿಕೊಂಡಿದ್ದವು.

ಸಾಮಾಜಿಕ ಕ್ಷೇತ್ರದಲ್ಲಿ ವರ್ಣಾಶ್ರಮ ವ್ಯವಸ್ಥೆ ವ್ಯಕ್ತಿಯ ಸ್ಥಾನಮಾನಗಳನ್ನು ನಿರ್ಧರಿಸುತ್ತಿತ್ತು. ಈ ವ್ಯವಸ್ಥೆಯಲ್ಲಿ ಮೇಲ್ವರ್ಗದವರಿಗಿದ್ದ ಯಾವ ಅವಕಾಶಗಳು, ಸ್ಥಾನಮಾನಗಳೂ ಕೆಳವರ್ಗದ ಜನರಿಗಿರಲಿಲ್ಲ. ಶೂದ್ರ ದಾಸ್ಯದಲ್ಲಿ ಹುಟ್ಟಿರುವ ಕಾರಣ ಅವನು ಎಂದೆಂದೂ ದಾಸ್ಯದಲ್ಲಿರಬೇಕೆಂಬ ಕಟ್ಟಳೆಯಿತ್ತು. ಶೂದ್ರಾತಿಶೂದ್ರರೆನಿಸಿದ್ದ ಪಂಚಮರ ಸ್ಥಿತಿಯಂತೂ ಚಿಂತಾಜನಕವಾಗಿತ್ತು. ಅಂತರ್ಜಾತಿ ವಿವಾಹ ಅಪರಾಧವೆನಿಸಿತ್ತು. ಬಾಲ್ಯ ವಿವಾಹ ಪ್ರತಿಷ್ಠೆಯ ವಿಷಯವಾಗಿತ್ತು. ವೃತ್ತಿಯಿಂದ ಜಾತಿ ನಿರ್ಣಯಿಸಲ್ಪಡುತ್ತಿತ್ತು. ದೇವಾಲಯಗಳಿಗೆ ಎಲ್ಲರಿಗೂ ಪ್ರವೇಶವಿರಲಿಲ್ಲ. ಕೆಳವರ್ಗದವರಿಗೆ ಅಕ್ಷರಜ್ಞಾನದ ಅವಕಾಶವೇ ಇರಲಿಲ್ಲ.

ಇನ್ನು ವೃತ್ತಿಗಳು ಅಷ್ಟೆ ವ್ಯಕ್ತಿಗೆ ತನ್ನ ಒಲವಿನ ವೃತ್ತಿಯನ್ನು ಆಯ್ಕೆಮಾಡಿಕೊಳ್ಳುವ ಸ್ವಾತಂತ್ರ್ಯವಿರಲಿಲ್ಲ. ಅದಕ್ಕೂ ವಂಶಪರಂಪರೆಯ ಅಂಕುಶವಿತ್ತು. ವೃತ್ತಿಗಳಲ್ಲೂ ಮೇಲು-ಕೀಳುಗಳ ಪರಿಗಣನೆ ಇತ್ತು. ದುಡಿಯದೆಯೇ ಒಡೆಯರೆನಿಸಿಕೊಳ್ಳುವ ಒಂದು ವರ್ಗವೇ ಇತ್ತು. ಶ್ರಮಜೀವಿಗಳಿಗೆ ಸಾಮಾಜಿಕ ಸ್ಥಾನ-ಮಾನಗಳು ಕನಸಾಗಿದ್ದವು. ಸಂಪತ್ತಿನ ಸಂಗ್ರಹ ಕೆಲವೇ ಜನರ ಹಕ್ಕಾಗಿತ್ತು. ಎಷ್ಟೇ ಭಾರವಾದರೂ ಕೆಳವರ್ಗದವರು ತೆರಿಗೆ ಸಲ್ಲಿಸಬೇಕಾಗಿತ್ತು.

ಹೀಗೆ ಮಾನವತ್ವವನ್ನೇ ಅಣಕಿಸುವ, ಮಾನವ ಘನತೆಯನ್ನೇ ಅಪಮೌಲ್ಯಗೊಳಿಸುವ ನೂರಾರು ಪದ್ಧತಿಗಳು ಮತ್ತು ಕಟ್ಟುಪಾಡುಗಳಿಂದ ಸಾಮಾನ್ಯ ಜನರು ಕ್ರೂರ

ಶೋಷಣೆಗೆ ಒಳಗಾಗಿದ್ದರು; ಅಸಹ್ಯ ಅವಮಾನಕ್ಕೆ ಈಡಾಗಿದ್ದರು. ಇದನ್ನೆಲ್ಲ ಸೂಕ್ಷ್ಮವಾಗಿ ಅಧ್ಯಯನ ಮಾಡಿದ ಬಸವಣ್ಣನವರು ಮೊದಲು ಧರ್ಮಶಾಸ್ತ್ರಗಳ ಟೊಳ್ಳನ್ನೆಲ್ಲ ಬಯಲಿಗೆಳೆದರು. ಜನ ಸಮುದಾಯದಲ್ಲಿ ವೈಚಾರಿಕ ಪ್ರಜ್ಞೆ ಮೂಡಿಸುವ ಮಹಾಮಣಿಹವನ್ನು ಕೈಗೊಂಡರು.

ಬಸವಣ್ಣನವರು ವೈದಿಕ ಧರ್ಮದ ಮತ್ತು ಜಾತಿ ಜಾಡ್ಯದ ಸಮಾಜ ವ್ಯವಸ್ಥೆಯನ್ನು ಧಿಕ್ಕರಿಸಿ, ಧಾರ್ಮಿಕ ಮತ್ತು ಸಾಮಾಜಿಕ ಸಮಾನತೆಯನ್ನು ಘೋಷಿಸಿದರು. ಶತಶತಮಾನಗಳ ಶಾಪದಂತಿದ್ದ ಅಸ್ಪೃಶ್ಯತೆಯ ಅನಿಷ್ಟವನ್ನು ತೊಡೆದುಹಾಕಲು ಶ್ರಮಿಸಿದರು. ಕಾಯಕಸೂತ್ರದ ಮೂಲಕ ಆರ್ಥಿಕ ಸಮಾನತೆ ಮತ್ತು ವೃತ್ತಿಗೌರವಕ್ಕೆ ಅವಕಾಶ ಕಲ್ಪಿಸಿದರು. ದಾಸೋಹ ಸೂತ್ರದ ಮೂಲಕ ಸಮಾನ ವಿತರಣೆ ಮತ್ತು ಸಹಬಾಳ್ವೆಗೆ ಅನುವು ಮಾಡಿಕೊಟ್ಟರು. ಮಹಿಳೆಯರಿಗೆ ಸಮಾನ ಸ್ಥಾನಮಾನ ಕಲ್ಪಿಸಿದರು.

ಅನುಭವ ಮಂಟಪದ ಮೂಲಕ ಯಾವುದೇ ವರ್ಗ–ವರ್ಣಭೇದವಿಲ್ಲದೆ ಸರ್ವರೂ ಪಾಲುಗೊಳ್ಳುವಂತಹ ಒಂದು ಮುಕ್ತ ಚರ್ಚಾವೇದಿಕೆಯನ್ನು ನಿರ್ಮಿಸಿದರು. ಬಹುಶಃ ಅದನ್ನು ವಿಶ್ವದ ಪ್ರಪ್ರಥಮ ಆಧ್ಯಾತ್ಮಿಕ ಸಂಸತ್ತು ಎಂದು ಹೇಳಬಹುದು. ಅನುಭವ ಮಂಟಪದ ಸಂಬಂಧದಿಂದಾಗಿ ಸಹಸ್ರಾರು ವರ್ಷಗಳ ಮೌನ ಮುರಿದು ದಲಿತರು ಮುಕ್ತವಾಗಿ ದನಿಮಾಡತೊಡಗಿದರು. ಕನ್ನಡದ ನೆಲದಲ್ಲಿ ದಲಿತರ ದನಿ ಮೊಟ್ಟಮೊದಲು ಕೇಳಿ ಬಂದದ್ದೇ ಬಸವಣ್ಣನವರಿಂದಾಗಿ. ದಲಿತರಲ್ಲಿ ಆತ್ಮವಿಶ್ವಾಸ ಸ್ವಾಭಿಮಾನಗಳು ಮೈಗೂಡುವಂತೆ ಮಾಡಲು ಬಸವಣ್ಣನವರು ಅವರನ್ನು ಅಪ್ಪ, ಅಣ್ಣ, ಅಯ್ಯಾ ಎಂದು ಕರೆದು ಆತ್ಮೀಯತೆಯಿಂದ ಅಪ್ಪಿಕೊಂಡರು. ಅವರಲ್ಲಿ ತಲೆಮಾರುಗಳಿಂದ ಮನೆಮಾಡಿಕೊಂಡಿದ್ದ ಕೀಳರಿಮೆಯನ್ನು ಕಿತ್ತುಹಾಕಿ, ಅವರಲ್ಲಿ ಜೀವನೋತ್ಸಾಹ ತುಂಬಿದರು. ಕುಲ–ಗೋತ್ರ ಕೇಳಿದವರಿಗೆ ದಲಿತರೆನಿಸಿದ ಕಕ್ಕಯ್ಯನ ಕುಲ, ಚೆನ್ನಯ್ಯನ ಗೋತ್ರ ಎಂದರು. ಮಾನವನ ಸಮಾನತೆಯೇ ಬಸವಣ್ಣನವರಿಗೆ ಆದ್ಯ ಗಮನವಾಗಿತ್ತು.

ನಮಗೆಲ್ಲ ತಿಳಿದಿರುವಂತೆ ಬಸವಣ್ಣನವರು ಹುಟ್ಟಿದ್ದು ಬ್ರಾಹ್ಮಣರ ಮನೆತನದಲ್ಲಿ; ವೈದಿಕ ಸಂಪ್ರದಾಯದ ಮಡಿಲಲ್ಲಿ. ಆದರೂ ಅಲ್ಲಿನ ಅರ್ಥಹೀನ ವ್ಯವಸ್ಥೆಯ ಬಗೆಗೆ ಅವರಿಗೆ ಅಸಹ್ಯವೆನಿಸಿತು. ವೈದಿಕ ಸಂಪ್ರದಾಯದ ಉಪನಯನ ಸಂಸ್ಕಾರವನ್ನೇ ಪ್ರಶ್ನಿಸಿದರು. ಅದರಲ್ಲಿದ್ದ ಪಕ್ಷಪಾತ ದೃಷ್ಟಿಗೆ ಸವಾಲೆಸೆದರು. ಅವರ ಸವಾಲಿಗೆ ಸಂಪ್ರದಾಯಸ್ಥರಿಂದ ಸಮರ್ಥ ಉತ್ತರ ದೊರೆಯದಿದ್ದಾಗ ಆ ಅಂಗಳವನ್ನೇ ಬಿಟ್ಟು ಹೊರಬಂದರು.

ಮುಂದೆ ಕೂಡಲಸಂಗಮ ಕ್ಷೇತ್ರಕ್ಕೆ ಬಂದು, ಅಲ್ಲಿ ವೇದ, ಉಪನಿಷತ್ತು, ಆಗಮ, ಸ್ಮೃತಿ, ಶಾಸ್ತ್ರ–ಪುರಾಣಗಳನ್ನೆಲ್ಲ ಆಳವಾಗಿ ಅಧ್ಯಯನ ಮಾಡಿದರು. ಅಲ್ಲಿನ ದೇವಾಲಯ ಸಂಸ್ಕೃತಿಯ ಅಸಂಗತಗಳನ್ನು, ಪುರೋಹಿತಶಾಹಿಯ ಶೋಷಕ ನೀತಿಯನ್ನು ಕಂಡು ಅವರಿಗೆ ಜಿಗುಪ್ಸೆಯೆನಿಸಿತು. ದೇವಾಲಯ ಸಂಸ್ಕೃತಿಗಿಂತ ಜೀವಾಲಯ ಅಗತ್ಯವನ್ನು ಮನಗಂಡು ಸಂಪ್ರದಾಯದ ಶಾಸ್ತ್ರವಿಧಿಗಳ ಅರ್ಥಹೀನತೆಯನ್ನು ಅನಾವರಣಗೊಳಿಸಿದರು.

ನಂತರ ಬಿಜ್ಜಳನ ಆಸ್ಥಾನ ಸೇರಿದಾಗ ರಾಜಶಾಹಿಯ ನಿಷ್ಕರುಣ ವ್ಯವಸ್ಥೆಯ ಪರಿಚಯವಾಗುತ್ತದೆ. ಇದೆಲ್ಲವನ್ನೂ ಕಂಡ ಬಸವಣ್ಣನವರಿಗೆ, ಜನಜಾಗೃತಿಯಾಗದಿದ್ದರೆ ಮಾನವ ಘನತೆ ಮಣ್ಣುಪಾಲಾಗುತ್ತದೆ ಎನ್ನುವುದು ಮನವರಿಕೆಯಾಗುತ್ತದೆ. ಈ ಎಲ್ಲ ಬಂಧನಗಳಿಂದ ಮತ್ತು ಅನಿಷ್ಟಗಳಿಂದ ಮುಕ್ತವಾದ ಒಂದು ಹೊಸ ಸಮಾಜ ನಿರ್ಮಾಣದ ಸಂಕಲ್ಪ ಮಾಡುತ್ತಾರೆ. ತಮ್ಮ ವಿಚಾರಧಾರೆಯ ಪ್ರಯೋಗಕ್ಕೆ ಕಲ್ಯಾಣವನ್ನು ಕೇಂದ್ರವನ್ನಾಗಿ ಮಾಡಿಕೊಳ್ಳುತ್ತಾರೆ.

ಬಸವಣ್ಣನವರು ಕಲ್ಪಿಸಿದ್ದು ಕಲ್ಯಾಣ ರಾಜ್ಯ. ಆ ಕಲ್ಯಾಣ ರಾಜ್ಯಕ್ಕಾಗಿ ರೂಪಿಸಿದ ಅಲಿಖಿತ ಸಂವಿಧಾನದ ಮೂರು ಮಹತ್ವದ ಅಧಿನಿಯಮಗಳೆಂದರೆ; ಕಾಯಕ, ದಾಸೋಹ, ಅನುಭಾವ. ಈ ಮೂರು ಶಬ್ದಗಳು ಹೊರಗಣ್ಣಿಗೆ ಬೇರೆ ಬೇರೆಯಾಗಿ ಕಂಡರೂ, ಈ ಮೂರರ ಕರುಳೂ ಒಂದೇ. ಅಕ್ಷರ ರೂಪದ ಈ ಶಬ್ದಗಳಿಗೆ ಬಸವಣ್ಣನವರು ಸಾಕ್ಷಾತ್ಕಾರ ರೂಪ ಕೊಟ್ಟರು.

ಬಸವಣ್ಣನವರ ಚಳುವಳಿಯಲ್ಲಿ ಸುಳಿಗಾಳಿಯಂತಿದ್ದ ಧರ್ಮ ಮನುಧರ್ಮವಲ್ಲ; ಮಾನವಧರ್ಮ. ಅವರ ಮುಖ್ಯ ಲಕ್ಷ್ಯವೆಲ್ಲ ಮಾನವನ ಇಹದ ಬದುಕಿನ ಸುಧಾರಣೆ. ಎಂತಲೇ, ಅವರು ಶ್ರಮದ ದುಡಿಮೆ ಮತ್ತು ಸಮಾನ ಹಂಚಿಕೆಗಳ ಆರ್ಥಿಕ ನೀತಿಗೆ ಮಹತ್ವ ಕೊಟ್ಟರು. ಆ ಶ್ರಮದ ದುಡಿಮೆಯನ್ನೇ 'ಕಾಯಕ' ಎಂದರು. (ಕಾಯ ಎಂದರೆ ದೇಹ; ಕಾಯಕ ಎಂದರೆ ದೈಹಿಕ ದುಡಿಮೆ). ಸಮಾನ ಹಂಚಿಕೆಯನ್ನೇ ದಾಸೋಹ ಎಂದರು. ಒಂದು ಶ್ರಮಗೌರವ, ಮತ್ತೊಂದು ಸಾಮಾಜಿಕ ನ್ಯಾಯ, ಸಾತ್ವಿಕ ಬದುಕಿಗೆ ಬೇಕಾದ ತಾತ್ವಿಕ ಚಿಂತನೆಯನ್ನೇ ಅನುಭಾವ ಎಂದರು.

ಶರಣರ ಪರಿಕಲ್ಪನೆಯಲ್ಲಿ ಕಾಯಕ ಕೇವಲ ಯಾಂತ್ರಿಕ ದುಡಿಮೆಯಾಗಿರಲಿಲ್ಲ ಅಥವಾ ಹೊಟ್ಟೆಯ ಪಾಡಿಗಾಗಿ ನಡೆಸುವ ಕಸುಬಾಗಿರಲಿಲ್ಲ. ಅದಕ್ಕೊಂದು ತಾತ್ವಿಕ ಹಿನ್ನೆಲೆಯಿತ್ತು. ಹಾಗೆಯೇ ದಾಸೋಹ ಎನ್ನುವುದು ಕೇವಲ ಉಳ್ಳವರು ಕೀರ್ತಿಗಾಗಿ ನಡೆಸುವ ಸಮಾರಾಧನೆಯಾಗಿರಲಿಲ್ಲ.

ಅದು ಸಾಮೂಹಿಕ ಪ್ರಸಾದದ ವ್ಯವಸ್ಥೆಯಾಗಿತ್ತು. ಈ ಕಾರಣದಿಂದಲೇ ವಿವಿಧ ಪ್ರದೇಶಗಳ, ವಿವಿಧ ವೃತ್ತಿಗಳ ಜನರೆಲ್ಲ ಕಲ್ಯಾಣದಲ್ಲಿ ಸೇರಿ ಒಂದು ಸಮುದಾಯವಾಗಿ ಬಾಳಲು ಸಾಧ್ಯವಾಯಿತು.

ಕಲ್ಯಾಣದ 'ಅನುಭವ ಮಂಟಪ' ಒಂದು ಶರಣ ವಿಶ್ವವಿದ್ಯಾನಿಲಯದಂತಿತ್ತು. ಆ ವಿಶ್ವವಿದ್ಯಾನಿಲಯದಲ್ಲಿ ಕಾಯಕ ದಾಸೋಹಗಳು ಪದವಿಗಳಾದರೆ, ಅನುಭಾವ ಸ್ನಾತಕೋತ್ತರ ಪದವಿಯಾಗಿತ್ತು. ಪ್ರಸ್ತುತ ಚಿಂತನೆಯ ಸಂದರ್ಭಕ್ಕಾಗಿ, ಅಂದಿನ ಕೆಲವು ಕಾಯಕಶೀಲರ ಹೆಸರುಗಳನ್ನಾದರೂ ಇಲ್ಲಿ ಉಲ್ಲೇಖಿಸಬಹುದೆಂದು ಕಾಣುತ್ತದೆ.

ಕಟ್ಟಿಗೆ ಕಾಯಕದ ಮೋಳಿಗೆ ಮಾರಯ್ಯ, ಬಟ್ಟೆ ತೊಳೆಯುವ ಮಡಿವಾಳ ಮಾಚಯ್ಯ, ಹಗ್ಗ ಹೊಸೆಯುವ ನುಲಿಯ ಚಂದ್ರಯ್ಯ, ತಾಂಬೂಲ ಒದಗಿಸುವ ಹಡಪದ ಅಪ್ಪಣ್ಣ, ಬರಹ ಕಾಯಕದ ಭಂಡಾರಿ ಶಾಂತಯ್ಯ, ಬಿದಿರಿನ ಕೆಲಸದ ಮೇದರ ಕೇತಯ್ಯ, ಕೃಷಿ ಕಾಯಕದ ಒಕ್ಕಲಿಗ ಮುದ್ದಣ್ಣ, ದೋಣಿ ನಡೆಸುವ ಅಂಬಿಗರ ಚೌಡಯ್ಯ, ದನ ಕಾಯುವ ತುರುಗಾಹಿ ರಾಮಣ್ಣ, ರೋಗ ಚಿಕಿತ್ಸೆಯ ವೈದ್ಯ ಸಂಗಣ್ಣ, ಎಣ್ಣೆ ತೆಗೆಯುವ ಗಾಣದ ಕನ್ನಯ್ಯ, ತೆರಿಗೆ ಸಂಗ್ರಹದ ಸುಂಕದ ಬಂಕಣ್ಣ, ಬಡಗಿ ಕೆಲಸದ ಬಾಚಿ ಬಸವಯ್ಯಾ, ತಳವಾರ ಸೇವೆಯ ಕಾಮಿದೇವ, ನೇಯ್ಗೆಯ ಕಾಯಕದ ಅಮುಗಿ ದೇವಯ್ಯ, ಚರ್ಮ ಹದಮಾಡುವ ಡೋಹರ ಕಕ್ಕಯ್ಯ, ಸಮಗಾರ ಹರಳಯ್ಯ, ಸೂಜಿ ಕಾಯಕದ ರೆಮ್ಮವ್ವೆ, ಬೆರಣಿ ಮಾರುವ ಅಣ್ಣಲದೇವಿ, ಹೊಲಿಗೆ ಕೆಲಸದ ಏಲೇರಿ ಎಮ್ಮವ್ವೆ, ನೀತಿ ಸಾರುವ ಸತ್ಯಕ್ಕ, ವೇದಿಕೆ ಸೇವೆಯ ಗೌರವ್ವ, ಕುಟ್ಟುವ ಕೆಲಸದ ಕೊಟ್ಟಣದ ಸೋಮವ್ವೆ, ಚಿಪ್ಪಿಗ ವೃತ್ತಿಯ ಶಂಕರ ದಾಸಿಮಯ್ಯ, ಅಕ್ಕಸಾಲಿ ಕೆಲಸದ ಹಾವಿನಾಳ ಕಲ್ಲಯ್ಯ, ಮನೆಕಟ್ಟುವ ಭೀಮಣ್ಣ, ಬೆಸ್ತರ ವೃತ್ತಿಯ ಮಾರಿತಂದೆ, ಗೊಲ್ಲರ ವೃತ್ತಿಯ ಮಸಣಯ್ಯ, ಕನ್ನಡಿ ಕಾಯಕದ ಅಮ್ಮಿದೇವ, ಮನರಂಜನೆಯ ಬಹುರೂಪಿ ಚೌಡಯ್ಯ, ಕಲಾವಿದ ಗಜೇಶ ಮಸಣಯ್ಯ, ನಗೆಮಾರಿತಂದೆ– ಹೀಗೆ ಸಾವಿರಾರು ಶರಣರು ಯಾವುದೇ ಕುಲ, ಜಾತಿ, ಲಿಂಗ, ವಯಸ್ಸು, ಮೇಲು–ಕೀಳುಗಳ ಭೇದವಿಲ್ಲದೆ ಪರಸ್ಪರ ಶರಣು ಎನ್ನುತ್ತ ಗೌರವಯುತವಾಗಿ ಬಾಳು ನಡೆಸಿದರೆಂದರೆ ಅದೇನು ಸಾಮಾನ್ಯ ಸಂಗತಿಯಲ್ಲ. ಕಲ್ಯಾಣದ ಆ ಸಹಬಾಳ್ವೆಯ ಕಾಲದ ನಂತರ ಇಂದಿಗೂ ಅಂತಹ ವಾತಾವರಣವನ್ನು ಮೂಡಿಸಲು ಸಾಧ್ಯವಾಗಿಲ್ಲ. ಕಲ್ಯಾಣ ವಾಸ್ತವವಾಗಿ ಕಾಯಕ–ದಾಸೋಹಗಳ ಒಂದು ಅನುಭಾವ ಕೇಂದ್ರವಾಗಿತ್ತು. ಸಮುದಾಯ ಶಿಕ್ಷಣ ಕೇಂದ್ರವಾಗಿತ್ತು.

ಒಟ್ಟಾರೆ, ಬಸವಣ್ಣನವರ ಜೀವನ ಸಂದೇಶದಲ್ಲಿ ಜಾತಿ–ಮತಗಳ ಜಂಜಾಟವಿಲ್ಲ, ಪಂಥಪಂಗಡಗಳ ಪ್ರಶ್ನೆಯಿಲ್ಲ, ಮೇಲುಕೀಳುಗಳ ಮಡಿವಂತಿಕೆಯಿಲ್ಲ; ವರ್ಣ–ವರ್ಗಗಳ ಭೇದವಿಲ್ಲ; ಪೂಜಾರಿ–ಪುರೋಹಿತರ ಪಾರುಪತ್ಯೆಯಿಲ್ಲ; ಅಂತಸ್ತು–ಅಧಿಕಾರಗಳ ಅವಾಂತರವಿಲ್ಲ; ಸ್ವರ್ಗ–ನರಕಗಳ ಸಂಕೀರ್ಣವಿಲ್ಲ; ಹೆದರಿಕೆ–ಬೆದರಿಕೆಗಳ ಹಿಂಸೆಯಿಲ್ಲ. ಗುಡಿ–ಗುಂಡಾರಗಳ ಗ್ರಹಣವಿಲ್ಲ; ಶಾಸ್ತ್ರ–ಸಂಪ್ರದಾಯಗಳ ಸಂಕೋಲೆಯಿಲ್ಲ. ಕಾಲ–ದೇಶಗಳ ಕಟ್ಟಳೆಯಿಲ್ಲ, ಪೂರ್ವಾಗ್ರಹದ ಪೀಡೆಯಿಲ್ಲ. ಅದು ಪೂರ್ಣ ಮುಕ್ತ ಸಂಪೂರ್ಣ ಪಾರದರ್ಶಕ; ಪ್ರಜಾಸತ್ತಾತ್ಮಕ.

ಇಂತಹ ಮೇರು ಸದೃಶ ದಾರ್ಶನಿಕನ ಸಂದೇಶ ಇಂದಿಗೂ ಇಷ್ಟು ಪ್ರಸ್ತುತವಾಗಿದೆ ಎನ್ನುವುದಕ್ಕೆ ನಾವು ಸ್ವತಂತ್ರ ಭಾರತವು ಅಂಗೀಕರಿಸಿರುವ ಸಂವಿಧಾನವನ್ನು ನೋಡಬೇಕು: "ಭಾರತದ ಪ್ರಜೆಗಳಾದ ನಾವು ಭಾರತವನ್ನು ಒಂದು ಸಾರ್ವಭೌಮ ಸಮಾಜವಾಗಿ, ಸರ್ವಧರ್ಮದ, ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ರಚಿಸಲು ಹಾಗೂ ಅದರ ಸಮಸ್ತ ನಾಗರಿಕರಿಗೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ, ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ ಸ್ವಾತಂತ್ರ್ಯ, ಸ್ಥಾನಮಾನ ಮತ್ತು ಅಖಂಡತೆಯನ್ನು ಭದ್ರಗೊಳಿಸಿ, ಅವರಲ್ಲಿ ಎಲ್ಲರಲ್ಲೂ ಭ್ರಾತೃಭಾವನೆಯನ್ನು ವೃದ್ಧಿಗೊಳಿಸುವುದಕ್ಕಾಗಿ, ಶ್ರದ್ಧಾಪೂರ್ವಕವಾಗಿ ದೃಢಸಂಕಲ್ಪ ಮಾಡಿದವರಾಗಿ, ನಮ್ಮ ಸಂವಿಧಾನ ಸಭೆಯಲ್ಲಿ ಇದೇ ೧೯೪೯ ನವೆಂಬರ್ ತಿಂಗಳು ೨೬ನೆಯ ದಿನದಂದು ಈ ಮೂಲಕ ನಮ್ಮನ್ನು ನಾವು ಅರ್ಪಿಸಿಕೊಂಡಿದ್ದೇವೆ, ಇದು ನಮ್ಮ ಸಂವಿಧಾನದ ಪ್ರಸ್ತಾವನೆಯ ಶಬ್ದಶಃ ಪೂರ್ಣಪಾಠ. ಇಲ್ಲಿ ಬಸವಣ್ಣನವರ ವಿಚಾರಧಾರೆಯ, ಅವರು ನಡೆಸಿದ ಚಳುವಳಿಯ ಮೂಲ ಆಧಾರಾಂಶಗಳೆಲ್ಲ ಇವೆ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ನಮಗೆ ಸ್ವಾತಂತ್ರ್ಯ ಬರುವ ೩೦ ವರ್ಷಗಳ ಹಿಂದೆಯೇ, ಅಂದರೆ ೧೯೧೮ರ ಏಪ್ರಿಲ್ ೧೭ರ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯಲ್ಲಿ ಬಸವಣ್ಣನವರನ್ನು ಕುರಿತಂತೆ, ''ಈಗ ಭರತಖಂಡದ ಎಲ್ಲ ಭಾಗಗಳಲ್ಲಿ ಕೂಡುತ್ತಿರುವ ಸಾಮಾಜಿಕ ಪರಿಷತ್ತುಗಳಾಗಲಿ ಇಲ್ಲವೆ ಈ ದೇಶದ ಸಮಾಜ ಸುಧಾರಕರಾಗಲಿ ಬಸವನ ಕಾರ್ಯಕ್ಕಿಂತ ಹೆಚ್ಚಿನದಾವುದನ್ನೂ ಮಾಡಲಾರರು. ಭರತಖಂಡದ ಇತಿಹಾಸ ಮತ್ತು ಭಾರತೀಯ ಆಚಾರಗಳನ್ನೂ ಪದ್ಧತಿಗಳನ್ನೂ ಬಹು ಚೆನ್ನಾಗಿ ಬಲ್ಲ ಸರ್ ಜೇಮ್ಸ ಕ್ಯಾಂಬೆಲ್ಲರು ಹೇಳಿರುವಂತೆ ಭಾರತದ ಈಗಿನ ಸಮಾಜ ಸುಧಾರಕರು ಬಸವನ ನುಡಿಯನ್ನೇ ನುಡಿಯುತ್ತಲೂ ಆತನ ತತ್ವಗಳನ್ನೇ ಪ್ರತಿಪಾದಿಸುತ್ತಲೂ ಇದ್ದಾರೆ'' ಎಂದಿರುವ

ಮಾತುಗಳು ಬಸವ ಸಂದೇಶದ ಸಾರ್ವಕಾಲಿಕತೆಗೆ ಸಾಕ್ಷಿಯಾಗಿವೆ.

ಆದರೆ ಇಂತಹ ಮಾನವೀಯ ಮೌಲ್ಯಗಳನ್ನು ಸಾರಿದ, ಅದರಂತೆ ನಡೆದು ತೋರಿದ ಬಸವಣ್ಣನವರ ಉಜ್ವಲ ಪರಂಪರೆಯಿರುವ ಈ ನಾಡು ಇಂದು ಏನಾಗಿದೆ ? ಕವಿಯೊಬ್ಬ ಹೇಳುವಂತೆ ಹೆಸರು ಲಿಂಗದೇವ, ಮಾತು ಮುಳ್ಳಿನ ಭಾವ, ಹೆಜ್ಜೆಹೆಜ್ಜೆಗೂ ಬಸವ ಮಂತ್ರ, ನಡೆ–ನುಡಿಯ ಮಧ್ಯೆ ನೂರೆಂಟು ಬೀಳು, ನಿನ್ನದೇ ವಿಭೂತಿ, ನಿನ್ನದೇ ರುದ್ರಾಕ್ಷಿ, ನಿನ್ನ ಹೆಸರಿಗೇ ಬಿಟ್ಟ ಹಾವು ಚೇಳು ಎನ್ನುವಂತಾಗಿದೆ.

ಸಂಪ್ರದಾಯದ ಕೆಲವೊಂದು ಪಟ್ಟಭದ್ರ ಹಿತಾಸಕ್ತಿಗಳ ಸಂಕುಚಿತ ದೃಷ್ಟಿಯಿಂದಾಗಿ, ಕೆಲವರ ಅಸಹನೆ ಮತ್ತು ಸ್ವಾರ್ಥದಿಂದಾಗಿ, ಶರಣ ಸಂಸ್ಕೃತಿಯಲ್ಲೇ ಬಂದ ಕೆಲವು ಅನುಯಾಯಿಗಳ ಅನಾಸಕ್ತಿಯಿಂದಾಗಿ, ಇನ್ನು ಕೆಲವು ಅತ್ಯಭಿಮಾನಿಗಳ ಅನಭಿಜ್ಞತೆಯಿಂದಾಗಿ, ಈ ಅನನ್ಯ ಹಾಗೂ ಜಾತ್ಯಾತೀತ ಬಸವದರ್ಶನಕ್ಕೆ ಜಾತಿಯ ಕಳಂಕದ ಕೆಸರು ತಾಗಿರುವುದೊಂದು ದುರಂತದ ಸಂಗತಿ. ವಿಚಾರವಂತರೆಲ್ಲ ಈ ಬಗೆಗೆ ಗಂಭೀರ ಚಿಂತನೆ ನಡೆಸಬೇಕು. ಬಸವತತ್ತ್ವಗಳ ವಸ್ತುನಿಷ್ಠತೆಯನ್ನು, ಸರ್ವಾನ್ವಯವನ್ನು ನಿರ್ಮಲ ಮನಸ್ಸಿನಿಂದ ಅರ್ಥಮಾಡಿಕೊಳ್ಳಬೇಕು.

ಬಸವಣ್ಣನವರ ದೂರದೃಷ್ಟಿಯ, ಲೋಕಪ್ರಜ್ಞೆಯ, ವಿಶ್ವವೈಶಾಲ್ಯದ ವಿಚಾರಗಳು ನಮ್ಮ ಮುಂದಿದ್ದರೂ ಒಂದು ಕಡೆ ಗೆದ್ದಲು ಹಿಡಿದ ಸಂಪ್ರದಾಯದ ಗೊಡ್ಡುಮರಕ್ಕೆ ತೆಕ್ಕೆಬಿದ್ದಿರುವ ಜಂಗುಳಿ, ಮತ್ತೊಂದು ಕಡೆ ಬಸವಣ್ಣನವರ ಹೆಸರನ್ನೇ ಬಂಡವಾಳ ಮಾಡಿಕೊಂಡು ಅಂಗಡಿ ನಡೆಸುತ್ತಿರುವ ವ್ಯಂಗ್ಯ. ಈ ಎರಡೂ ಬವಣೆಗಳಿಂದ ಬಸವಣ್ಣನವರನ್ನು ಬಿಡಿಸಿ, ಅವರನ್ನು ಎಲ್ಲರ ಸೊತ್ತನ್ನಾಗಿ ಮಾಡುವ ದಿಸೆಯಲ್ಲಿ ರಾಜ್ಯ ಸರ್ಕಾರ ಹೆಜ್ಜೆ ಇಟ್ಟಿರುವುದು ನಿಜಕ್ಕೂ ಆಶಾದಾಯಕ ಸಂಗತಿ. ಈ ಕೆಲಸ ಮತ್ತಷ್ಟು ವಿಸ್ತೃತವಾಗಿ, ವಿಧಾಯಕವಾಗಿ ನಡೆದು ಬಸವ ಸಂದೇಶವನ್ನು ಜಾಗತಿಕ ಮಟ್ಟಕ್ಕೂ ಒಯ್ಯುವಂತಾಗಬೇಕು.

ಕೊನೆಯದಾಗಿ, ಬಸವಣ್ಣನವರ ಒಂದು ವಚನದೊಂದಿಗೆ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

**ಭಕ್ತಿ ಸುಭಾಷೆಯ ನುಡಿಯ ನುಡಿವೆ, ನುಡಿದಂತೆ ನಡೆವೆ**
**ನಡೆಯೊಳಗೆ ನುಡಿಯ ಪೂರೈಸುವೆ.**
**ಮೇಲೆ ತೂಗುವ ತ್ರಾಸು ಕಟ್ಟಳೆ ನಿಮ್ಮ ಕೈಯಲ್ಲಿ**
**ಒಂದು ಜವೆ ಕೊರತೆಯಾದಡೆ ಎನ್ನನದ್ದಿ ನೀನೆದ್ದು ಹೋಗಾ,**
**ಕೂಡಲಸಂಗಮದೇವಾ.**

ಬಹುಶಃ ನಮ್ಮ ಬದುಕಿನ ಮಾರ್ಗದರ್ಶನಕ್ಕೆ ಇದೊಂದು ವಚನ ಸಾಕೆಂದು ಕಾಣುತ್ತದೆ. ಸಾರ್ವಜನಿಕ ಜೀವನದ ಪ್ರತಿಯೊಬ್ಬರಲ್ಲೂ ನುಡಿದಂತೆ ನಡೆಯುವ ಪ್ರಾಮಾಣಿಕತೆ ಮೂಡಿದರೆ ಸಾಕು.

ಆಡಳಿತ ನಡೆಸುವವರಿಗೆ ಇರಬೇಕಾದ ಅಗಾಧ ತಾಳ್ಮೆ, ಧರ್ಮಬೋಧಕರಿಗೆ ಇರಬೇಕಾದ ಆಳವಾದ ಆಧ್ಯಾತ್ಮಿಕ ಜ್ಞಾನ, ಸಮಾಜ ಸುಧಾರರರಿಗೆ ಇರಬೇಕಾದ ಸಾಮಾನ್ಯ ಪ್ರಜ್ಞೆ, ಕಾರ್ಯನಿರ್ವಾಹಕರಿಗೆ ಇರಬೇಕಾದ ಕರ್ತವ್ಯನಿಷ್ಠೆ, ಜನಪ್ರತಿನಿಧಿಗಿರಬೇಕಾದ ಜನಸಂಪರ್ಕ, ಸ್ವಯಂಸೇವಕರಿಗೆ ಇರಬೇಕಾದ ಅರ್ಪಣಾಭಾವ, ಇವೆಲ್ಲವುಗಳ ಒಟ್ಟು ಮೊತ್ತವಾಗಿದ್ದ ಬಸವಣ್ಣನವರು ರಾಷ್ಟ್ರಕವಿ ಜಿ. ಎಸ್. ಶಿವರುದ್ರಪ್ಪನವರು ಹೇಳುವಂತೆ 'ಪುರಾಣವಾದವರಲ್ಲ; ಚರಿತ್ರೆಯಾದವರು; ಇತಿಹಾಸವಾದವರು'.

ತತ್ತ್ವಜ್ಞಾನಿಯೊಬ್ಬ "ನಾವು ಈ ಜಗತ್ತಿನಲ್ಲಿ ಹಾದುಹೋಗುವುದು ಒಂದೇ ಸಲ. ಆದ್ದರಿಂದ ನಾವು ಮಾಡಬಲ್ಲ ಏನಾದರೂ ಒಳ್ಳೆಯ ಕೆಲಸವಿದ್ದರೆ ಈಗಲೇ ಮಾಡೋಣ. ಏಕೆಂದರೆ, ನಾವು ಮತ್ತೆ ಇತ್ತ ಬರುವುದಿಲ್ಲ ಎಂದಿದ್ದಾನೆ. ಅಂತೆಯೇ ನಾವು ಮಾಡಬಹುದಾದ ಒಳ್ಳೆಯ ಕೆಲಸವೆಂದರೆ, ಬಸವಣ್ಣನವರ ಸಂದೇಶದಂತೆ ನಡೆದು, ಸುತ್ತಣ ಪರಿಸರಕ್ಕೆ ಬೇಕಾಗಿ ಬದುಕುವುದು".

ಬಂಧುಗಳೇ, 'ಬಸವ ಜಯಂತಿಯನ್ನು ಸರ್ಕಾರದ ಅಧಿಕೃತ ಕಾರ್ಯಕ್ರಮವಾಗಿ ಅಂಗೀಕರಿಸಿ ಈ ಸಲದಿಂದ ವಿಧಾನಸೌಧದ ಮುಂದೆ ಇಷ್ಟು ಆಸಕ್ತಿಯಿಂದ ಆಚರಿಸುತ್ತಿರುವುದಕ್ಕಾಗಿ ರಾಜ್ಯ ಸರ್ಕಾರಕ್ಕೆ ಮತ್ತೊಮ್ಮೆ ಅಭಿನಂದನೆ ಸಲ್ಲಿಸಿ, ಈ ಮಹತ್ವಪೂರ್ಣ ಸಂದರ್ಭದಲ್ಲಿ ಬಸವಣ್ಣನವರಿಗೆ ನನ್ನ ನುಡಿ ಸೇವೆ ಸಲ್ಲಿಸಲು ಅವಕಾಶಮಾಡಿಕೊಟ್ಟ ಕನ್ನಡ ಮತ್ತು ಸಂಸ್ಕೃತಿ ಸಚಿವಾಲಯ ಮತ್ತು ನಿರ್ದೇಶನಾಲಯಗಳಿಗೆ ಕೃತಜ್ಞತೆ ಅರ್ಪಿಸುತ್ತೇನೆ. ಶರಣಾರ್ಥಿ.

■■

# ಬಸವ ಗುರುವಿನ ಅವತಾರ

● ಆರ್. ಪಿ. ಅಪರಾಜ

ಧರ್ಮಕ್ಕೆ ಜಡತ್ವ ಪ್ರಾಪ್ತವಾದಾಗ, ದ್ವೇಷ ಅಸೂಯೆ ಸ್ವಾರ್ಥ ಮುಂತಾದ ಮಲಿನತೆಗಳು ನಾಡಿನಲ್ಲಿ ಹರವಿಕೊಂಡಾಗ ಪರಮಾತ್ಮ ಮಾನವ ರೂಪ ತೊಟ್ಟು ಭೂಮಿಯ ಮೇಲೆ ಅವತರಿಸುತ್ತಾನೆ. ಅಧರ್ಮ ಅತ್ಯಾಚಾರ ಅನ್ಯಾಯಗಳ ಸುಳಿಯಲ್ಲಿ ಸಿಕ್ಕು ನರಳುತ್ತಿರುವ ಮಾನವನನ್ನು ಕಾಪಾಡುತ್ತಾನೆ. ನಾಡಿನಾದ್ಯಂತ ಮತ್ತೊಮ್ಮೆ ಜ್ಞಾನೋಪದೇಶದ ನುಡಿಗಳು ಕೇಳಿಬರುತ್ತವೆ; ಧರ್ಮ ಪುನರುತ್ಥಾನಗೊಳ್ಳುತ್ತದೆ.

**ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।**
**ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್ ॥**

ಇದು ಶ್ರೀಕೃಷ್ಣ ಪರಮಾತ್ಮನ ವಾಣಿ ಯಾವ ಯಾವ ಕಾಲಕ್ಕೆ ಧರ್ಮದ ಅವನತಿಯೂ, ಅಧರ್ಮದ ಉನ್ನತಿಯೂ ಆಗುತ್ತದೆಯೋ ಆಗ ನಾನು ನನ್ನನ್ನು ಅವತರಿಸಿಕೊಳ್ಳುತ್ತೇನೆ ಮತ್ತು ಧರ್ಮವನ್ನು ಪುನರುಜ್ಜೀವನಗೊಳಿಸುತ್ತೇನೆ ಎಂಬುದು ಪ್ರಸ್ತುತ ಗೀತಾ ಶ್ಲೋಕದ ಭಾವ.

ಶ್ರೀಕೃಷ್ಣ ತನ್ನ ಅವತಾರದ ಕುರಿತು ತನ್ನ ಭಕ್ತ ಹಾಗು ಗೆಳೆಯನಾಗಿದ್ದ ಅರ್ಜುನನನ್ನು ಕುರಿತು ಮನವರಿಕೆ ಮಾಡಿಕೊಡುತ್ತಾನೆ. ಶ್ರದ್ಧಾ ನಿಷ್ಠೆಯಿಂದ ಮಾಡಿದ ಕಾಯಕದ ಫಲವನ್ನು ತನ್ನ ಅವಶ್ಯಕತೆಗೆ ತಕ್ಕಷ್ಟು ಬಳಸಿ ಮಿಕ್ಕಿದ್ದನ್ನು ದಾಸೋಹ ಭಾವದಿಂದ ಗುರು ಲಿಂಗ ಜಂಗಮಾರ್ಪಣೆ ಮಾಡಿದಾಗ ಉಂಟಾಗುವ ಪರಿಶುದ್ಧ ಮನೋಗತ ಸಂಸ್ಕಾರ ವಿಶೇಷವೇ ಧರ್ಮ. ತ್ಯಾಗ ಧರ್ಮದ ಉಸಿರಾದರೆ ಧರ್ಮ ತ್ಯಾಗದ ಶಾಂತಿ. ಧರ್ಮ ಭೋಗ ಮೋಕ್ಷಗಳ ಸಮನ್ವಯ ಸೂತ್ರ. ಭೋಗದಲ್ಲಿ ಯೋಗಿಯಾಗಿ, ಯೋಗದಲ್ಲಿ ಭೋಗಿಯಾಗಿ ಬಾಳುವ ಕಲೆಯೇ ಧರ್ಮ. ದಯೆ ಧರ್ಮದ ಮೂಲ; ಸತ್ಯ ಪ್ರೇಮ, ಅಹಿಂಸೆ ನ್ಯಾಯ–ನೀತಿ ಅನುಕಂಪ, ಅಂತಃಕರಣ ಮುಂತಾದವು ಮಾನವ ಧರ್ಮದ ಸೂತ್ರಗಳು. ಮಾನವೀಯ ಮೌಲ್ಯಗಳನ್ನು ಬಿತ್ತಿ ಮಾನವೀಯತೆಯನ್ನು ಬೆಳೆಯುವದು ಮಾನವ ಧರ್ಮ. ಧರ್ಮಾಚರಣೆಯ ಪಥದಲ್ಲಿ ಸಾಗುವ ಮನುಷ್ಯನ ನಡೆ–ನುಡಿಗಳಲ್ಲಿ ಆತನ ಸಂಸ್ಕಾರದಲ್ಲಿ ಧರ್ಮ ಹುದುಗಿದೆ.

ವೈಚಾರಿಕ, ವೈಜ್ಞಾನಿಕ ಶಕ್ತಿಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಲು ಮಾರ್ಗದರ್ಶನ ಮಾಡುವುದು ಧರ್ಮ. ವಿಜ್ಞಾನ ಮತ್ತು ಧರ್ಮ ಒಂದನ್ನು ಬಿಟ್ಟು ಮತ್ತೊಂದಿಲ್ಲ. ಧರ್ಮವಿಲ್ಲದ ವಿಜ್ಞಾನ ಕುರುಡು, ವಿಜ್ಞಾನವಿಲ್ಲದ ಧರ್ಮ ಕುಂಟು ಎಂದು ಹೇಳುವುದುಂಟು.

ಕಬ್ಬಿಣದ ಕಡಲೆಯಾದ ಭಾಷೆಯಲ್ಲಿ ಅರ್ಥೈಸಲಾದ ಲಿಪಿಯಲ್ಲಿ ಸನಾತನ ಕಾಲದಲ್ಲಿ ಬರೆದಿಟ್ಟ ಹೆಬ್ಬೊತ್ತಿಗೆಗಳಲ್ಲಿ ಹುದುಗಿಸಿಟ್ಟ ಧರ್ಮವನ್ನು ಹುಡುಕುವದು ವ್ಯರ್ಥ. ಸಂತರು, ಶರಣರು–ಮಹಾತ್ಮರು ಸ್ಫುರಿಸುವ ತಮ್ಮ ಅಂತರಂಗದ ನುಡಿಮುತ್ತುಗಳಲ್ಲಿ ಧರ್ಮವಿದೆ. ದಾರ್ಶನಿಕರ ಅನುಭಾವಿಗಳ ಹಿತವಚನಗಳು ಮನುಷ್ಯನನ್ನು ಧರ್ಮ ಮಾರ್ಗದಲ್ಲಿ ಕೈಹಿಡಿದು ನಡೆಸುತ್ತವೆ.

ಒಂದು ಕೈಯಲ್ಲಿ ಕಮಂಡಲ ಮತ್ತೊಂದರಲ್ಲಿ ದಂಡ ಧಾರಿಯಾದ ಸರ್ವರೊಳು ಒಂದೊಂದು ನುಡಿಗಲಿತು ಸರ್ವಜ್ಞನಾದ, ಕನ್ನಡ ನಾಡಿನ ಸುಪ್ರಸಿದ್ಧ ಕವಿ ಧರ್ಮವನ್ನು ವ್ಯಾಖ್ಯಾನಿಸುತ್ತಾನೆ ನೋಡಿ;

**ಅನ್ನವನು ನೀಡುವುದು ನನ್ನಿಯನು ನುಡಿಯುವುದು**
**ತನ್ನಂತೆ ಪರರ ಬಗೆದಡೆ ಕೈಲಾಸ ಬಿನ್ನಾಣವಕ್ಕು ॥**

ಇಷ್ಟು ಸಾಕಲ್ಲವೆ ಧರ್ಮವಂತನಾಗಲು? ಇನ್ನೇನು ಬೇಕು! ಹಸಿದು ಬಂದ ಆಗುಂತಕನಿಗೆ ತುತ್ತು ಅನ್ನವನ್ನು ಉಣಬಡಿಸುವುದು; ನೀರಡಿಸಿ ಬಂದವನಿಗೆ ಒಂದು ಬೊಗಸೆ ನೀರು ಕೊಡುವುದು ಧರ್ಮ. ಸತ್ಯವನ್ನೇ ನುಡಿಯುವದು, ಕಷ್ಟದಲ್ಲಿದ್ದವರು ಮನೆಗೆ ಬಂದಾಗ ಅವರನ್ನು ನಗುಮೊಗದಿಂದ ಬರಮಾಡಿಕೊಂಡು ಕ್ಷೇಮ–ಸಮಾಚಾರ ವಿಚಾರಿಸಿ ಸಹಾಯ ಹಸ್ತ ಚಾಚುವುದು, ನೆರೆಮನೆಯವರ ಕಷ್ಟ ಸುಖಗಳಲ್ಲಿ ಭಾಗಿಯಾಗುವುದು ಧರ್ಮ. ಮೃದು ಮಧುರ ಮಾತುಗಳನ್ನಾಡುವುದು ಧರ್ಮ.

ಹನ್ನೆರಡನೆಯ ಶತಮಾನದಲ್ಲಿ ಮುಂದುವರಿದಿದ್ದ ವರ್ಣ ವ್ಯವಸ್ಥೆಯಿಂದಾಗಿ, ಶ್ರೇಷ್ಠ–ಕನಿಷ್ಠ, ಮೇಲ್ವರ್ಗ–ಕೆಳವರ್ಗ, ಸ್ಪೃಶ್ಯರು ಅಸ್ಪೃಶ್ಯರು, ಉಚ್ಚ–ನೀಚ ಎಂಬ ಭೇದ ಭಾವ ಬಲಿತು, ಸಮಾಜದ

'ಅಲ್ಲಮ' ಅಕ್ಕನ ಮಾರ್ಗ ಆಂಜನೇಯ ನಗರ, ಬೆಳಗಾವಿ–೫೯೦೦೧೬, ಮೊ–೯೨೪೩೨೨೦೨೬೦

ಸ್ವಾಸ್ಥ್ಯ ಹಾಳಾಗಿತ್ತು; ಧರ್ಮ ಹದಗೆಟ್ಟಿತ್ತು. ಪುರ-ಪಟ್ಟಣಗಳಿಂದ ಹೊರದಬ್ಬಿಸಿಕೊಂಡ, ಹೊಲೆಯ ಮಾದಿಗರಂಥ ನಿರ್ಗತಿಕರು, ಊರ ಹೊರಗಿನ ಕೇರಿ(ಹೊಲೆಗೇರಿ)ಗಳಲ್ಲಿ ತಲೆಯ ಸೂರು ಕಟ್ಟಿಕೊಂಡು ಜೀವನ ಸವೆಸುವ ಸ್ಥಿತಿ ಇತ್ತು.

ಇನ್ನೊಂದೆಡೆ ಸ್ತ್ರೀ ಸ್ವಾತಂತ್ರ್ಯ ವಂಚಿತಳಾಗಿ ಪುರುಷನ ಭೋಗವಸ್ತುವಾಗಿ ಗಂಡನ ಒತ್ತೆ ಆಳಾಗಿ ನಾಲ್ಕು ಗೋಡೆಗಳ ಮಧ್ಯೆ ಜೀವನ ನೂಕುವುದು ಅನಿವಾರ್ಯವಾಗಿತ್ತು; ಬಹಿಷ್ಠೆಯಾದ ಮಹಿಳೆ ಮನೆಯಿಂದ ಬಹಿಷ್ಕೃತಳಾಗಿ ಮನೆಬಿಟ್ಟು ಹೊರಗೆ ಇರಬೇಕಿತ್ತು. ವೈದಿಕ ಸಮಾಜದಲ್ಲಿ ಕೂಡ ಮಹಿಳೆಗೆ ಶಿಕ್ಷಣ ಸ್ವಾತಂತ್ರ್ಯವಿರಲಿಲ್ಲ; ವೇದಾಧ್ಯಯನ ಇರಲಿಲ್ಲ. ಆದ್ದರಿಂದ ಮಹಿಳೆಗೆ ಮೋಕ್ಷವಿರಲಿಲ್ಲ. ಅಲ್ಲಲ್ಲಿ ಸತಿಸಹಗಮನ ಪದ್ಧತಿ ಕೂಡ ಇತ್ತು.

ಊರು ಕೇರಿಗಳಲ್ಲಿ ಕಾಲಿಡಲಿಂಬಿಲ್ಲದಷ್ಟು ಅಪಾರ ಪ್ರಮಾಣದಲ್ಲಿ ಗುಡಿ-ಗುಂಡಾರಗಳು ಬೆಳೆದು ನಿಂತಿದ್ದವು. ಗುಡಿಗಳಲ್ಲಿ ಸ್ಥಾಪಿತವಾದ ದೇವ ವಿಗ್ರಹಗಳ ಪೂಜಾ ಕೈಂಕರ್ಯ ಬ್ರಾಹ್ಮಣ ಪುರೋಹಿತರ ವಂಶಪರಂಪರೆಯಾಗಿ ಮುಂದುವರಿದ ಕಾಯಕವಾಗಿತ್ತು. ಅದು ಪುರೋಹಿತ-ಪೂಜಾರಿಗಳ ಲಾಭದಾಯಕ ಉದ್ಯೋಗವಾಗಿ ಸಹ ಪರಿಣಮಿಸಿತ್ತು. ಪುರೋಹಿತಶಾಹಿಯ ದರ್ಪ ದಬ್ಬಾಳಿಕೆ ಉಪಟಳ ಸುಲಿಗೆಯಿಂದ ಮುಗ್ಧ ಭಕ್ತ ಸಮಾಜ ನಲುಗಿ ಹೋಗಿತ್ತು.

ನಶಿಸುವ ಹಂತ ತಲುಪಿದ್ದ ಧರ್ಮವನ್ನು ಪುನರುಜ್ಜೀವನಗೊಳಿಸಿ ಪುನರಪಿ ನಿರ್ಮಾಣ ಮಾಡಲೆಂದು ಪರಶಿವ, ಬಸವಣ್ಣನವರನ್ನು ಮಾನವ ಲೋಕಕ್ಕೆ ಕಳಿಸಿದ. ದ್ವಾಪರ ಯುಗದಲ್ಲಿ ಶ್ರೀಕೃಷ್ಣ ಪರಮಾತ್ಮ ಉದಯಿಸಿದಂತೆ ಕಲಿಯುಗದಲ್ಲಿ ಬಸವ ಭಾನುವಿನ ಅವತಾರವಾಯಿತು. ವೈದಿಕ ಪರಂಪರೆಯ ಅರ್ಥಹೀನ ಆಚರಣೆಗಳ ಹಿನ್ನೆಲೆಯಲ್ಲಿ ಮಾನವ ಸಮಾಜವೊಂದು ಅಜ್ಞಾನದ ಅಂಧಕಾರದಲ್ಲಿ ಮುಳುಗುತ್ತಿರುವಾಗ ಅಂತಹ ಸಮಾಜವನ್ನು ಮೇಲೆತ್ತಿ ಕೈಹಿಡಿದು ನಡೆಸಲು ಬಸವಣ್ಣನವರು ಅವತರಿಸಿದರು. (ಕುವೆಂಪು)

ಶೂನ್ಯಸಿಂಹಾಸನ ಪೀಠವನ್ನಲಂಕರಿಸಿದ ಜಂಗಮ ಶ್ರೇಷ್ಠ ಅಲ್ಲಮಪ್ರಭುಗಳು, ವೈರಾಗ್ಯನಿಧಿ ಅಕ್ಕಮಹಾದೇವಿ ಬಸವ ಗುರುವಿನ ಅವತಾರದ ಕುರಿತು ತಮ್ಮ ವಚನಗಳಲ್ಲಿ ಸ್ಪಷ್ಟಪಡಿಸಿದ್ದಾರೆ ನೋಡಿ;

**ಮರ್ತ್ಯಲೋಕದ ಮನೆ ಹಾಳಾಗಿ ಹೋಗಬಾರದೆಂದು ಕರ್ತನಟ್ಟಿದನಯ್ಯಾ ಒಬ್ಬ ಶರಣನ! ಆ ಶರಣ ಬಂದು ಕಲ್ಯಾಣವೆಂಬ ಶಿವಪುರವ ಕೈಲಾಸವ ಮಾಡಿ, ರುದ್ರಗಣ ಪ್ರಮಥಗಣಂಗಳೆಲ್ಲರ ಹಿಡಿ ತಂದು, ಅಮರ ಗಣಂಗಳೆಂದು ಹೆಸರಿಟ್ಟು ಕರೆದು, ಅಗಣಿತ ಗಣಂಗಳೆಲ್ಲರ ಹಿಡಿ ತಂದು ಅಸಂಖ್ಯಾತರೆಂಬ ಹೆಸರಿಟ್ಟು ಕರೆದು, ಭಕ್ತಿಸ್ಥಳವ, ಶ್ರುತದೃಷ್ಟ ಪವಾಡದಿಂದ ಮೆರೆದು ತೋರಿ, ಜಗವರಿಯಲು ಶಿವಾಚಾರ ಧ್ವಜವನೆತ್ತರಿಸಿ, ಮರ್ತ್ಯ ಶಿವಲೋಕವೆರಡಕ್ಕೆ ನಿಚ್ಚಣಿಕೆಯಾದನು. ಆ ಶಿವಶರಣನ ಮನೆಯೊಳಗಿಪ್ಪ ಶಿವಶರಣರ ತಿಂಥಣಿಯ ಕಂಡು, ಎನ್ನ ಮನ ಉಬ್ಬಿಕೊಬ್ಬಿ ಓಲಾಡುತ್ತಿದ್ದೆನಯ್ಯಾ! ನಮ್ಮ ಗುಹೇಶ್ವರ ಶರಣ ಸಂಗನ ಬಸವಣ್ಣನ ದಾಸೋಹದ ಘನವನೇನೆಂದೆನಬಹುದು, ನೋಡಾ ಸಿದ್ಧರಾಮಯ್ಯಾ**

ಅಳಿವಿನಂಚಿನಲ್ಲಿದ್ದ ಧರ್ಮವನ್ನು ಪುನರುತ್ಥಾನಗೊಳಿಸಲೆಂದು ಪರಶಿವ ಬಸವಣ್ಣನವರನ್ನು ಮಾನವ ಲೋಕಕ್ಕೆ ಕಳಿಸಿದ; ಭೂಲೋಕದಲ್ಲಿ ಅವತರಿಸಿ, ಆ ಮಹಾಮನೆ ನಿರ್ಮಿಸಿದ ಬಸವಣ್ಣನವರು, ಆ ಮಹಾಮನೆಗೆ ಏಳುನೂರೆಪ್ಪತ್ತೈದು ಅಮರ ಗಣಂಗಳನ್ನು, ಅಸಂಖ್ಯಾತ ಭಕ್ತ ಗಣವನ್ನು ಕರೆತಂದು ಧರ್ಮದ ಕುರಿತು ಚಿಂತನೆ ಮಾಡಿದರು. ಅನುಭವ ಮಂಟಪದಲ್ಲಿ ಅನುಭಾವ ಮಾಡಿ, ಆ ಅನುಭಾವದ ಕಂಪನ್ನು ನಾಡಿನಾದ್ಯಂತ ಹರಡಿಸಿ, ಭೂಲೋಕವನ್ನು ಶಿವಲೋಕವನ್ನಾಗಿಸಿದ. ಬಸವ ಸ್ಥಾಪಿತ ಶಿವಾನುಭವ ಮಂಟಪದಲ್ಲಿ ನಾಡಿನ ಮೂಲೆ ಮೂಲೆಗಳಿಂದ ಹರಿದು ಬಂದು ಸೇರಿದ್ದ ಶರಣ-ಶರಣೆಯರ ಕಂಡು ನಾನು ಸಂತೋಷದಿಂದ ಉಬ್ಬಿ ಕುಣಿದಾಡಿದೆ; ಇದು ಪ್ರಭುದೇವರು ಸೊನ್ನಲಿಗೆಯ ಸಿದ್ಧರಾಮಯ್ಯನವರಿಗೆ ಬಸವಣ್ಣನವರನ್ನು ಪರಿಚಯಿಸಿದ ಪರಿ ಪ್ರಸ್ತುತ ವಚನದ ಭಾವಸಿರಿ.

ಪರಮ ಗುರು ಬಸವಣ್ಣನವರ ಅವತಾರದ ಕುರಿತು ಮಹಾದೇವಿಯಕ್ಕಗಳ ಒಂದು ವಚನ ನೋಡಿ;

**ಶಿವ ಶಿವಾ, ಆದಿ ಅನಾದಿಗಳೆಂಬೆರಡಿಲ್ಲದ ನಿರವಯ ಶಿವ ನಿಮ್ಮ ನಿಜವನಾರಯ್ಯಾ ಬಲ್ಲರು ! ವೇದಂಗಳಿಗಭೇದ್ಯನು; ಶಾಸ್ತ್ರಂಗಳಿಗಸಾಧ್ಯನು ಪುರಾಣಕ್ಕೆ ಅಗಮ್ಯನು; ಆಗಮಕ್ಕೆ ಅಗೋಚರನು, ತರ್ಕಕ್ಕೆ ಅತರ್ಕ್ಯನು; ವಾಙ್ಮನಾತೀತವಾಗಿಪ್ಪ ಪರಶಿವಲಿಂಗವನು, ಕೆಲಂಬರು ಸಕಲನೆಂಬರು; ಕೆಲಂಬರು ನಿಃಕಲನೆಂಬರು; ಕೆಲಂಬರು ಸೂಕ್ಷ್ಮನೆಂಬರು; ಕೆಲಂಬರು ಸ್ಥೂಲನೆಂಬರು ಈ ಬಗೆಯ ಭಾವದಿಂದ, ಹರಿ ಬ್ರಹ್ಮ ಇಂದ್ರ ಚಂದ್ರ ರವಿ, ಕಾಲ ಕಾಮ ದಕ್ಷದೇವ ದಾನವರೆಲ್ಲರೂ ಕಾಣಲರಿಯದೆ ಅಜ್ಞಾನದಿಂದ ಭವಭಾರಿಗಳಾದರು ಈ ಪರಿಯಾಗಿ ಬಯಲಾಗಿ ಹೋಗಬಾರದೆಂದು ನಮ್ಮ ಬಸವನು, ಜಗದ್ಧಿತಾರ್ಥವಾಗಿ ಮರ್ತ್ಯಕ್ಕೆ ಅವತರಿಸಿದ...'**

ವೇದಾಗಮ ಶಾಸ್ತ್ರ ಪುರಾಣಗಳನ್ನು ಓದಿದ ಮಾತ್ರಕ್ಕೆ ಪರಶಿವನ ದರ್ಶನವಾಗದು; ಹರಿ ಬ್ರಹ್ಮ ಇಂದ್ರ ಚಂದ್ರಾದಿ ದೇವ ದೇವತೆಗಳಿಗೂ ಪರಶಿವ ಲಿಂಗದೇವರನ್ನು ಕಾಣಲು

ಅಸಾಧ್ಯವಾಗಿ ಅವರೆಲ್ಲರು ಕಲ್ಲು, ಮಣ್ಣು ಮಡಿಕೆಗಳನ್ನು ದೇವರೆಂದು ಪೂಜಿಸಲುದ್ಯುಕ್ತರಾದರು. ಹೀಗಾಗಬಾರದೆಂದು ಮತ್ತು ಅವರ ಮೌಢ್ಯತೆಯನ್ನು ನಿವಾರಣೆ ಮಾಡಲೆಂದು ಬಸವಣ್ಣನವರು ಭೂಲೋಕಕ್ಕೆ ಅವತರಿಸಿದರು ಮತ್ತು ಶಿವಭಕ್ತರಲ್ಲಿ ಪರಾತ್ಪರ ಪರತತ್ತ್ವದ ಕುರಿತು ಅರಿವು ಮೂಡಿಸಿದರು ಎಂಬುದು ಪ್ರಸ್ತುತ ವಚನದ ಭಾವ.

ಭೂಮಿಯ ಮೇಲೆ ಶಿವಭಕ್ತಿಯನ್ನು ವ್ಯಾಪಕವಾಗಿ ಹರಡಲು ಬಸವಣ್ಣನವರು ಅವತರಿಸಿದರು; ಅವರು ಏಳು ನೂರಯೆಪ್ಪತ್ತು ಅಮರ ಗಣಂಗಳಿಗೆ ದಣ್ಣಾಯಕರಾಗಿ, ಗುರು–ಲಿಂಗ ಜಂಗಮಕ್ಕೆ ತನುಮನಧನ ಸವೆಸುತ್ತ ಮಹಾಮನೆಯ ಭಕ್ತಗಣಂಗಳ ಸಮೂಹದಲ್ಲಿ ಓಲಾಡುತ್ತ ಒಂದು ಲಕ್ಷದಾ ತೊಂಭತ್ತಾರು ಸಹಸ್ರ ಜಂಗಮರ ಸೇವೆಯಲ್ಲಿ ನಿರತರಾಗಿದ್ದರು ಎಂಬ ಸಂಗತಿಯನ್ನು ಹಿರಿಯ ಶರಣರಾದ ಮಡಿವಾಳ ಮಾಚಿ ತಂದೆಯವರು ತಮ್ಮ ಈ ಕೆಳಗಿನ ವಚನದಲ್ಲಿ ನಿರೂಪಿಸಿದ್ದನ್ನು ಗಮನಿಸಬಹುದು ವಚನ;

> **ಕಲಿಯುಗದಲ್ಲಿ ಶಿವಭಕ್ತಿಯನು ಪ್ರಬಲವ ಮಾಡಬೇಕೆಂದು, ಮರ್ತ್ಯಲೋಕಕ್ಕೆ ಇಳಿದು, ಶೈವ ಮಾರ್ಗಾಚಾರ್ಯ ಮಂಡಿಗೆಯ ಮಾದಿರಾಜನ ಸತಿ, ಮಾದಾಂಬೆಯ ಗರ್ಭದಿಂದ ಅವತರಿಸಿದ ಬಸವಣ್ಣನೆಂಬ ನಾಮಕರಣವಂಧರಿಸಿ, ಕೂಡಲಸಂಗಮದೇವರ ದಿವ್ಯ ಪಾದಪದ್ಮಾರಾಧಕನಾಗಿ ಮರ್ತ್ಯಕ್ಕೆ ಪ್ರತಿ ಕೈಲಾಸವೆಂಬ ಕಲ್ಯಾಣಮಂ ಮಾಡಿ ಶೈವ ಬ್ರಾಹ್ಮಣ ಕಮ್ಮೆ ಕುಲದ ಅಗ್ರಹಾರದ ಅಗ್ರೇಸರ ಮಂಡಿಗೆಯ ಮಾದಿರಾಜ ಮತ್ತು ಆತನ ಧರ್ಮ ಪತ್ನಿ ಮಾದಲಾಂಬಿಕೆ ಬಸವ ಗುರುವಿನ ಅವತಾರಕ್ಕೆ ನಿಮಿತ್ತರಾದರು.**

ಬಸವಣ್ಣನವರ ಅವತಾರದ ಅನಿವಾರ್ಯತೆಯ ಕುರಿತು ರಾಷ್ಟ್ರಕವಿ ಕುವೆಂಪು ಹೇಳುವುದನ್ನು ಕೇಳಿ;

**ಕಾರ್ತಿಕದ ಕತ್ತಲಲಿ, ಆಕಾಶ ದೀಪವಾಗಿ ನೀ ಬಂದೆ**
**ಬಟ್ಟೆಗೆಟ್ಟವರಿಗೊಂದು ದೊಂದಿ ದಿಕ್ಕಾಗಿ**
**ಎಂಟು ಶತಮಾನಗಳ ಹಿಂದೆ, ಅಗ್ನಿ ಖಡ್ಗವನಾಂತ**
**ಓ ಅಧ್ಯಾತ್ಮ ಕ್ರಾಂತಿ ವೀರ, ದೇವ ದಯೆಯೊಂದು**
**ಹೇ ಧೀರಾವತಾರ, ಶ್ರೀ ಬಸವೇಶ್ವರ !**

ವೈದಿಕ ಪರಂಪರೆಯ ಅರ್ಥಹೀನ ಆಚರಣೆಗಳ ಹಿನ್ನೆಲೆಯಲ್ಲಿ ಮಾನವ ಸಮಾಜವೊಂದು ಅಜ್ಞಾನದ ಅಂಧಃಕಾರದಲ್ಲಿ ಮುಳುಗುತ್ತಿರುವಾಗ, ಅಂತಹ ಸಮಾಜವನ್ನು ಮೇಲೆತ್ತಿ ಕೈಹಿಡಿದು ನಡೆಸುವ ಹಿತ ಚಿಂತಕರಾಗಿ ಬಸವಣ್ಣನವರು ಅವತರಿಸಿದರು ಎಂದು ಕುವೆಂಪು ಅವರು ಅಪೂರ್ವ ಪ್ರತಿಮೆಯೊಂದಿಗೆ ಕವನದಲ್ಲಿ ಚಿತ್ರಿಸಿದ್ದನ್ನು ಕಾಣಬಹುದು.

ಬಸವ ಯೇಸು ಪೈಗಂಬರ ಮುಂತಾದವರು ಆಯಾ ದೇಶ ಕಾಲದಲ್ಲಿ ಅವತರಿಸದೆ ಹೋಗಿದ್ದರೆ, ಮಾನವ ಲೋಕ ಹಾಳಾಗುವುದು ತಪ್ಪುತ್ತಿರಲಿಲ್ಲ. ನೇಮ ನೀತಿ ಪ್ರೇಮ ಸತ್ಯ ಅಹಿಂಸೆ ಸಹಾಯ ಸಹಕಾರ ಸೌಹಾರ್ದತೆ ಆಚಾರ ವಿಚಾರಗಳ ಬೀಜವನ್ನು ಈ ಭೂಲೋಕದಲ್ಲಿ ಬಿತ್ತದೆ ಇದ್ದಿದ್ದರೆ, ಪ್ರಾಯಶಃ ಮಾನವ ಇತಿಹಾಸ ಸುಟ್ಟು ಬೂದಿಯಾಗಬಹುದಿತ್ತು.

ಬಸವಣ್ಣ ಭೂಲೋಕದಲ್ಲಿ ಅವತರಿಸಿ ಕಲ್ಯಾಣದಲ್ಲಿ ಕೈಲಾಸವನ್ನು ನೆಲೆಗೊಳಿಸಿದ. ಆದಿಯ ಲಿಂಗವನು ಮೇದಿನಿಗೆ ತಂದು ಮಹಾಮನೆಯ ಕಟ್ಟಿದ.

■■

---

**ಆವಗೆಯಲೊದಗಿದ ಕಪ್ಪಿನಂತೆ**
**ಅಮೃತದೊಳಗಿರ್ದ ಸರ್ಪನ ತನುವಿನಂತೆ**
**ಇರ್ದೆನಯ್ಯಾ ಹೊರಗೆ ನುಂಪಾಗಿ**
**ಸಿಂಹಕ್ಕೊಲಿದ ಮದಕರಿಯಂತೆ**
**ಆನು ಜಂಗಮಕ್ಕೊಲಿದೆನಯ್ಯಾ, ಕೂಡಲಸಂಗಮದೇವಾ.**

**–ಬಸವಣ್ಣ**

ಕುಂಬಾರನು ಮಡಕೆಯನ್ನು ಸುಡುವಾಗ ಆವಗೆಯ ಒಳಗೆ ಕೆಂಪಾದ ಬೆಂಕಿ ಉರಿದರೂ ಹೊರಗೆ ಕಪ್ಪು ಹೊಗೆ ಆವರಿಸಿರುತ್ತದೆ, ಹಾಲು ಕುಡಿದ ಸರ್ಪವು ವಿಷಭರಿತವಾಗಿದ್ದರೂ ಹೊರಗೆ ನುಣುಪಾಗಿರುವಂತೆ ನಾನೂ ಕೂಡ ಒಳಗೊಂದು ರೀತಿ ಹೊರಗೊಂದು ರೀತಿ ಇದ್ದೇನೆ. ಸಿಂಹದಿಂದ ಪ್ರಾಣಕ್ಕೆ ಹಾನಿ ಎಂಬುದು ತಿಳಿದೂ ಮದಭರಿತ ಆನೆ ಸಿಂಹದ ಬಳಿಸಾರುವಂತೆ ಜಂಗಮನು ಶಿಕ್ಷಿಸುವನೆಂಬುದನ್ನು ಅರಿತೂ ನಾನು ಜಂಗಮಸೇವೆ ಮಾಡುವೆ ಎಂದು ಹೇಳುವ ಬಸವಣ್ಣನವರು ಭಕ್ತನು ಒಳಹೊರಗೊಂದಾಗಿ ಭಕ್ತಿಯಿಂದ ಜಂಗಮಸೇವೆ ಮಾಡಬೇಕೆಂಬ ಭಾವವನ್ನು ಅಭಿವ್ಯಕ್ತಗೊಳಿಸಿದ್ದಾರೆ.

## ಅನ್ನ ಮತ್ತು ಅಕ್ಷರ ದಾಸೋಹಗಳ

# ಮಹಾಯೋಗಿ

● ಮಲ್ಲೇಪುರಂ ಜಿ. ವೆಂಕಟೇಶ

ನಲ್ವತ್ತೈದು ವರ್ಷಗಳ ಹಿಂದೆ ಆಗ 'ಕನ್ನಡಪಂಡಿತ್' ಮಾಡಬೇಕೆಂದು ಅಪೇಕ್ಷೆ ನನ್ನದಾಗಿತ್ತು. ಆಗ 'ಕನ್ನಡಪಂಡಿತ್' ಪದವಿ ಶಾಲೆಗಳು ಸಿದ್ಧಗಂಗಾಮಠ ಮತ್ತು ಮೈಸೂರಿನಲ್ಲಿದ್ದವು. ಮೈಸೂರಿನಲ್ಲಿದ್ದು ಓದುವುದು ಕಷ್ಟಸಾಧ್ಯವೆಂದು ತಿಳಿದು ಸಿದ್ಧಗಂಗಾಮಠಕ್ಕೆ ಹೋಗುವುದೆಂದು ನಿಶ್ಚಯಿಸಿದೆ. ಆಗ ಅಲ್ಲಿ 'ಕನ್ನಡಪಂಡಿತ್' ಮಾಡುತ್ತಿದ್ದ ಶಾಂತಿಕುಮಾರ್ ಎನ್ನುವವರ ಪರಿಚಯ ನನ್ನೊಬ್ಬ ಗೆಳೆಯನಿಂದ ಆಗಿತ್ತು. ಆ ನೆಪದಲ್ಲಿ ಒಂದೆರಡು ಬಾರಿ ಶ್ರೀಕ್ಷೇತ್ರಕ್ಕೂ ಹೋಗಿದ್ದೆ.

ವಿಶಾಲವಾದ ಆವರಣ, ದೊಡ್ಡಬೆಟ್ಟದ ಬುಡದಲ್ಲಿ ಸಂಸ್ಕೃತ ಕಾಲೇಜು, ಅಕ್ಕಪಕ್ಕ ಹಿರಿಯ ಸ್ವಾಮಿಗಳ ಗದ್ದುಗೆಗಳು, ಬೆಳೆದು ನಿಂತಿದ್ದ ಅರಳಿಮರ, ಮಠದ ಸುತ್ತ ರಾಗಿ ಹೊಲಗಳು, ಪೂರ್ವದಿಕ್ಕಿಗೆ ಒಂದು ದೊಡ್ಡ ಆಲದಮರ ಇತ್ತು. ಸರಳತೆಯೇ ಭವ್ಯತೆಯ ಸಂಗಮವಾಗಿ ಮೈದಾಳಿತ್ತು. ಇದು ನನ್ನನ್ನು ತುಂಬಾ ಆಕರ್ಷಿಸಿತು. ಪ್ರತಿ ವಿದ್ಯಾರ್ಥಿಯೂ ಕಾವಿವಸ್ತ್ರ ಹೊದ್ದು ಅಲ್ಲಲ್ಲಿ ಓಡಾಡುತ್ತಿದ್ದರು. ಪ್ರತಿಯೊಬ್ಬರ ಹಣೆಯಲ್ಲೂ ವಿಭೂತಿ ವಿರಾಜಿಸುತ್ತಿತ್ತು. ಏಳು ವರ್ಷದ ಹುಡುಗರಿಂದ ಹಿಡಿದು ಇಪ್ಪತ್ನಾಲ್ಕು ವರ್ಷದ ವರೆಗಿನವರೆಲ್ಲರೂ ಪಂಚೆಯುಟ್ಟು ಓಡಾಡುತ್ತಿದ್ದುದೇ ಒಂದು ಸೊಗಸಾಗಿ ಕಾಣುತ್ತಿತ್ತು. ಮಠದ ಆವರಣದಲ್ಲೂ ಹೊರಗೂ ವಿದ್ಯಾರ್ಥಿಗಳು ಪುಸ್ತಕ ಹಿಡಿದೇ ಓಡಾಡುತ್ತಿದ್ದರು.

ಇದು ೧೯೭೦ ರಲ್ಲಿ ನನಗೆ ಕಂಡ ದೃಶ್ಯ. ಈ ದೃಶ್ಯವು ನನ್ನ ಮನಸ್ಸಿನಿಂದ ಈವರೆಗೂ ಮರೆಯಾಗಿಲ್ಲ. ಶ್ರೀ ಸಿದ್ಧಗಂಗಾ ಮಠಕ್ಕೆ ೧೯೭೧ ರಲ್ಲಿ ಕನ್ನಡಪಂಡಿತ್‌ಗೆ ಸೇರಿಕೊಂಡೆ. ನಾನು ಸ್ವಾಮಿಗಳ ಬಳಿ ಹೋಗುವ ಮೊದಲು ಕನ್ನಡಪಂಡಿತ್ ಡಿ. ಗಂಗರಾಜು ಅವರನ್ನು ಮೊದಲೇ ಕಂಡಿದ್ದೆ. ಅವರು ಸ್ವಾಮಿಗಳ ಬಳಿ ನನ್ನನ್ನು ಕರೆದುಕೊಂಡು ಹೋಗಿ ಕನ್ನಡಪಂಡಿತ್ ತರಗತಿಗೆ ಪ್ರವೇಶ ಕೊಡಿಸುವ ಮಾತನಾಡಿದರು. ಆಗಲೇ ಸ್ವಾಮಿಗಳನ್ನು ನಾನು ಮೊದಲು ಕಂಡದ್ದು. ನನ್ನನ್ನು ನೋಡಿ ಒಂದು ಕ್ಷಣ ನಸು ನಕ್ಕು ಗಂಗರಾಜು ಅವರ ಮುಖ ನೋಡಿ 'ಆಗಲಿ' ಎಂದರು. ನನಗೆ ಸ್ವರ್ಗವೇ ಸಿಕ್ಕಷ್ಟು ಸಂತೋಷ. ಆಕಾಶದಲ್ಲಿ ವಿಹಾರ ಮಾಡಿದ ಭಾವ ಮನಸ್ಸೆಲ್ಲಾ ತುಂಬಿತು. ಸ್ವಾಮಿಗಳಿಗೆ ನಮಸ್ಕಾರ ಮಾಡಿ ಹೊರಬಂದೆ.

ಸ್ವಾಮಿಗಳನ್ನು ನಾನು ಪ್ರತಿನಿತ್ಯ ನೋಡುತ್ತಿದ್ದೆ. ಅವರು ಬರುತ್ತಿದ್ದರೆ ಜಡವು ಜಂಗಮವಾಗಿ ಮಾರ್ಪಾಡು ಆಗುತ್ತಿತ್ತು. ಅವರು ದಾಪುಗಾಲು ಇಡುತ್ತ ಓಡಾಡುತ್ತಿದ್ದರೆ ಹೆಳವನೂ ಓಡಾಡಬೇಕೆಂದೆನಿಸುತ್ತಿತ್ತು. ಚೈತನ್ಯದ ಮಂಗಳಮೂರ್ತಿಯೇ ನಮ್ಮ ಮುಂದೆ ಓಡಾಡುತ್ತಿದೆಯೆಂಬ ಭಾವ ಬಹುಕಾಲ ನನ್ನ ಮನಸ್ಸನ್ನು ಆವರಿಸಿತ್ತು. ಎರಡು ವರ್ಷ ಮಾತ್ರ ಮಠದಲ್ಲಿದ್ದೆ. ಅನಂತರ ಕ್ಯಾತ್ಸಂದ್ರದಲ್ಲಿ ಸಣ್ಣ ಕೊಠಡಿಯನ್ನು ಬಾಡಿಗೆಗೆ ಹಿಡಿದೆ. ಕನ್ನಡಪಂಡಿತ್ ಮುಗಿಸಿದ ಮೇಲೆ ಶ್ರೀಮಠದ ಸಂಪರ್ಕ ನನಗೆ ಕಡಿಮೆಯಾಯಿತು.

ನಾನು ಮಠದಲ್ಲಿ ಮೊದಲೆರಡು ವರ್ಷ ಇದ್ದೆನಷ್ಟೆ. ನಾನು ಮಠಕ್ಕೆ ಸೇರಿದ ಮೊದಲ ದಿನ ತಟ್ಟೆ ಹಿಡಿದುಕೊಂಡು ಊಟ ಕೊಡುತ್ತಿದ್ದ ವಿಶಾಲವಾದ ಸಭಾಂಗಣಕ್ಕೆ ಹೋದೆ. ವಿದ್ಯಾರ್ಥಿಗಳು ತಂಡೋಪತಂಡವಾಗಿ ಕೈಯಲ್ಲಿ ಊಟದ ತಟ್ಟೆ ಹಿಡಿದುಕೊಂಡು ಹೋಗುತ್ತಿದ್ದರು. ನನಗೆ ಇದು ತುಂಬಾ ಅಪರಿಚಿತವಾಗಿತ್ತು. ಊಟಕ್ಕೆ ಎಲ್ಲ ವಿದ್ಯಾರ್ಥಿಗಳು ಸಾಲುಸಾಲಾಗಿ ಕುಳಿತಿದ್ದರು. ಬಡಿಸುವುದಕ್ಕೆ ಮಠದ ಹಿರಿಯ ವಿದ್ಯಾರ್ಥಿಗಳು ರಾಗಿಮುದ್ದೆ ಹೊತ್ತು ತಂದರು. ಅವರ ಹಿಂದೆ ಸಾಂಬಾರನ್ನು ಬಕೆಟ್‌ನಲ್ಲಿ ಹಿಡಿದು ಬಂದರು. ಅವರು ತಟ್ಟೆಗೆ ಮುದ್ದೆ ಹಾಕಿ, ಎರಡೆರಡು ಸೌಟು ಸಾಂಬಾರನ್ನು ಹಾಕಿದರು. ನಾನು ಮೊಟ್ಟಮೊದಲ ಬಾರಿಗೆ ಮಠದ ಊಟಮಾಡಿದ್ದು ಆಗಲೇ.

ಶ್ರೀ ಕ್ಷೇತ್ರದಲ್ಲಿ ಪ್ರತಿನಿತ್ಯ ಕನಿಷ್ಟಪಕ್ಷ ಆರನೂರರಿಂದ ಎಂಟುನೂರು ಜನ ಊಟ ಮಾಡುತ್ತಿದ್ದರು. ಇದು ನಲವತ್ತೈದು ವರ್ಷಗಳ ಹಿಂದಿನ ಮಾತು ! ಆಗ ಶ್ರೀಕ್ಷೇತ್ರ ಇನ್ನೂ ಪ್ರವರ್ಧಮಾನಕ್ಕೆ ಬರುತ್ತಿತ್ತು. ತುಮಕೂರು ಜಿಲ್ಲೆಯ ಗ್ರಾಮೀಣ

# ೨೯೬, ಪೂರ್ಣ ಪ್ರೀತಿ, ೧೧ನೇ ಮೇನ್ ಎಂ. ಇ. ಐ. ಲೇಔಟ್, ಬಾಗಲಕುಂಟೆ, ದಾಸರಹಳ್ಳಿ, ಬೆಂಗಳೂರು–೫೬೦೦೫೭

ಭಾಗಗಳಿಂದ ಅನೇಕ ರೈತರು ತಾವು ಬೆಳೆದ ರಾಗಿ, ಅಕ್ಕಿ, ಕಾಳು, ತರಕಾರಿ ಮುಂತಾದವುಗಳನ್ನು ಸ್ವಇಚ್ಛೆಯಿಂದ ತಂದುಕೊಡುತ್ತಿದ್ದರು. ನಾನು ಮಠದ ಆವರಣದಲ್ಲಿ ತಿರುಗಾಡುತ್ತಿರುವಾಗ ರೈತರು, ಭಕ್ತರು ಬಂದು ಯಥಾಶಕ್ತಿ ತಮ್ಮ ಕಾಣಿಕೆ ಒಪ್ಪಿಸುತ್ತಿದ್ದುದನ್ನು ಕಾಣುತ್ತಿದ್ದೆ. ಶ್ರೀ ಕ್ಷೇತ್ರಕ್ಕೆ ಹಣ ಒದಗಿ ಬರುತ್ತಿದ್ದದ್ದು ಕಡಿಮೆಯೆಂದೇ ಹೇಳಬೇಕು. ಆದರೆ ದವಸ–ಧಾನ್ಯಾದಿಗಳನ್ನು ಒಂದೆಡೆ ಸಂರಕ್ಷಿಸುವ ಕೆಲಸ ಮತ್ತು ಬಂದ ದಾಸ್ತಾನನ್ನು ಲೆಡ್ಜರ್‌ನಲ್ಲಿ ಬರೆದುಕೊಂಡು ಚೀಟಿ ಕೊಡುವ ಪರಿಪಾಠವೂ ಇರುತ್ತಿತ್ತು. ಭಕ್ತಾದಿಗಳಿಂದ ಬಂದ ಪ್ರತಿ ವಸ್ತುವಿಗೂ ಮಠದ ಪಾರುಪತ್ಯೆಗಾರರು ಲೆಕ್ಕ ಇಡುತ್ತಿದ್ದರು. ರಾಗಿಯನ್ನು ಮಿಲ್ಲಿಗೆ ಹಾಕುವ ಮೊದಲು ಹತ್ತಾರು ಹೆಂಗಸರು ಅದನ್ನು ಕೇರಿ ಶುದ್ಧಿಗೊಳಿಸುತ್ತಿದ್ದರು. ಮಠದ ಆವರಣದಲ್ಲಿಯೇ ರಾಗಿಮಿಷನ್ ಇತ್ತು. ಅಲ್ಲಿ ಹಿಟ್ಟು ಮಾಡಿಕೊಳ್ಳುತ್ತಿದ್ದರು.

ಪೂಜ್ಯ ಶ್ರೀಗಳು ಪ್ರತಿನಿತ್ಯ ಆರೇಳು ಸಲವಾದರೂ ಅಡುಗೆ ಮನೆಗೆ ಹೋಗಿ ತಪಶೀಲು ನಡೆಸುತ್ತಿದ್ದದ್ದುಂಟು. ಅಲ್ಲಿ ಮುದ್ದೆ ತೊಳೆಸುತ್ತಿದ್ದವರನ್ನು ಕಂಡು ಕಿರುನಗೆ ಬೀರಿದರೆ ಸಾಕು ಅಡುಗೆ ಕೆಲಸ ಮಾಡುತ್ತಿದ್ದವರ ಉತ್ಸಾಹ ಹೆಚ್ಚಾಗುತ್ತಿತ್ತು. ರಾಗಿಮುದ್ದೆ ಮಾಡುವುದೂ ಅದನ್ನು ತೊಳೆಸಿ–ತಿರುಗಿಸಿ ಮುದ್ದೆ ಕಟ್ಟುವುದು ಸುಲಭದ ಕೆಲಸವಲ್ಲ. ಆಕಾಲಕ್ಕೆ ಕನಿಷ್ಠ ಹೊರಗಿನ ಭಕ್ತರ ಸಂಖ್ಯೆಯೇ ಕೆಲವೊಮ್ಮೆ ಐದುನೂರು ದಾಟುತ್ತಿತ್ತು. ಆದರೆ ಶ್ರೀ ಕ್ಷೇತ್ರಕ್ಕೆ ಬಂದ ಪ್ರತಿಯೊಬ್ಬರೂ ಊಟ ಮಾಡಿಯೇ ಹೋಗುತ್ತಿದ್ದರು. ಅದು 'ಊಟ' ಎನಿಸದೆ 'ಪ್ರಸಾದ' ಎಂದು ಜನ ಭಾವಿಸುತ್ತಿದ್ದರು. ನಿಜಕ್ಕೂ ಅದು ಪ್ರಸಾದವೇ. ಶ್ರೀಮಠದ ಅಡುಗೆ ಮನೆಯ ಬೆಂಕಿ ಎಂದೂ ಆರುತ್ತಿರಲಿಲ್ಲ. ಒಮ್ಮೊಮ್ಮೆ ಸ್ವಾಮಿಗಳು ಸಾರನ್ನು ಸೌಟಿನಲ್ಲಿ ಹಿಡಿದು ಪರಿಶೀಲಿಸುತ್ತಿದ್ದದ್ದುಂಟು. ಅವರು ಊಟ ಮಾಡುತ್ತಿದ್ದ ಸಭಾಂಗಣಕ್ಕೂ ಬರುತ್ತಿದ್ದರು. ಅವರು ಬರುವ ಹೆಜ್ಜೆಯ ಸಪ್ಪಳಕ್ಕೆ ಸಭಾಂಗಣವೂ ಮೌನದಲ್ಲಿ ಅದ್ದಿ ಹೋಗುತ್ತಿತ್ತು ! ಪ್ರತಿ ಸಾಲಿನ ಮುಂದೆ ನಿಂತು 'ಪ್ರಸಾದ' ಬಡಿಸುತ್ತಿದ್ದುದನ್ನು ನೋಡುತ್ತಿದ್ದರು. ಇದು ಪ್ರತಿನಿತ್ಯದ ಕಾಯಕಯೋಗಿಯ ಮಹಾಕಾಯಕವೇ ಆಗಿರುತ್ತಿತ್ತು !

ಶ್ರೀ ಸಿದ್ಧಗಂಗಾಮಠ ದಾಸೋಹಕ್ಕೂ ವಿದ್ಯಾದಾನಕ್ಕೂ ಹೆಸರಾಗಿತ್ತು. ಅತ್ತ ಉತ್ತರಕರ್ನಾಟಕ ಇತ್ತ ದಕ್ಷಿಣಕರ್ನಾಟಕ ಇವುಗಳ ನಡುವಣ ಪ್ರದೇಶ ತುಮಕೂರು, ಇಲ್ಲಿ ಸಹಜವಾಗಿ ಲಿಂಗಾಯತ ಸಮುದಾಯದವರೇ ಹೆಚ್ಚು. ಗುಬ್ಬಿ, ಗೂಳೂರು ಮುಂತಾದ ಪ್ರದೇಶಗಳು ಲಿಂಗಾಯತ ಸಾಂಸ್ಕೃತಿಕ ಕೇಂದ್ರಗಳಾಗಿದ್ದವು. ಆದರೆ ಇಲ್ಲಿದ್ದ ಹಲವು ಜಾತಿಜನಗಳು ತಮ್ಮ ಆಚಾರ–ವಿಚಾರಗಳನ್ನು ಮನೆಯಲ್ಲಿ ಇಟ್ಟುಕೊಳ್ಳುತ್ತಿದ್ದರೆ ವಿನಾ ಹೊರಗಡೆ ಅದನ್ನು ತರುತ್ತಿರಲಿಲ್ಲ. ಶ್ರೀಕ್ಷೇತ್ರದ ಭಕ್ತರಲ್ಲಿ ಲಿಂಗಾಯತರೇ ಹೆಚ್ಚು ! ಅವರು ಶ್ರೀಮಠಕ್ಕೆ ದವಸ–ಧಾನ್ಯಗಳನ್ನು ತಂದುಕೊಡುತ್ತಿದ್ದರು. ಇಲ್ಲಿ ಜಾತಿ ಭಾವನೆಗೆ ಅವಕಾಶ ಇರುತ್ತಿರಲಿಲ್ಲ. ಬಸವಣ್ಣ, ಸಿದ್ಧರಾಮ, ಅಲ್ಲಮಪ್ರಭು ಹಾಗು ನಿಜಗುಣ ಶಿವಯೋಗಿಗಳ ವಚನಗಳನ್ನು ಹೇಳಿ ವ್ಯಾಖ್ಯಾನ ಮಾಡುತ್ತಿದ್ದುದುಂಟು ! ಸಂಸ್ಕೃತ ಸುಭಾಷಿತಗಳನ್ನು ಹೇಳಿ ತಮ್ಮ ಮಾತನ್ನು ಮುಗಿಸುತ್ತಿದ್ದರು. ಹೀಗೆ ಶ್ರೀಕ್ಷೇತ್ರವು ಅಕ್ಷರದಾಸೋಹಕ್ಕೆ ಪ್ರಾಧಾನ್ಯ ನೀಡುತ್ತಿತ್ತು. ಸ್ವಾಮಿಗಳು ಅಕ್ಷರ ಮತ್ತು ಅನ್ನ ಎರಡನ್ನೂ ಸಮಾನವಾಗಿಯೇ ಭಾವಿಸಿದ್ದರು. ಶ್ರೀ ಸಿದ್ಧಗಂಗಾಕ್ಷೇತ್ರ ಇವೆರಡಕ್ಕೂ ಪ್ರಾಧಾನ್ಯತೆ ನೀಡಿತ್ತು. ಅವರ ಅನ್ನದ ಋಣ ಮತ್ತು ವಿದ್ಯೆಯ ಋಣದಲ್ಲಿ ಲಕ್ಷಾಂತರ ಜನರು ಬದುಕಿದ್ದಾರೆ. ಅವರ ಹೆಸರಲ್ಲಿ ತಮ್ಮ ಮನೆಗಳನ್ನು ಬೆಳಗಿಸಿಕೊಂಡಿದ್ದಾರೆ. ಅವರು ಮಹಾಯೋಗಿಗಳಾಗಿ ಸದಾ ನಮ್ಮನ್ನು ಹರಸುತ್ತಲೇ ಇರುತ್ತಾರೆ.

**ಭಿಕ್ಷೆ ಹೊರಟಿದೆ ಜಂಗಮದ ಜೋಳಿಗೆ ಲಕ್ಷ ಜನಗಳ ಪೊರೆದಿದೆ।**
**ತೀರ್ಥವಾಗಿದೆ ಭಕ್ತರಿಗೆ, ಚಿರಸ್ಫೂರ್ತಿಯಾಗಿದೆ ಬುದ್ಧಿಗೆ।**
**ಬಂದ ಹಣತೆಗೆ ಎಣ್ಣೆ ಬತ್ತಿಯ ದೀಪ್ತಿದಾನವ ಮಾಡಿದೆ।**
**ರಕ್ಷೆಯಾಗಿದೆ ಮುಗಿಲನೇರಿದ ಎಷ್ಟೊ ರೆಕ್ಕೆಯ ಹಾದಿಗೆ॥**
**ಸದ್ದುಗದ್ದಲವಿರದ ಸಾಧನೆ ಇಲ್ಲಿ ಗದ್ದುಗೆಯೇರಿದೆ।**
**ಕಾಯಕವೆ ಕೈಲಾಸವೆನ್ನುವ ಮಾತು ಕೃತಿಯೊಳು ಮೂಡಿದೆ।**
**ಕಾವಿಯುಡುಗೆಯನುಟ್ಟು ನಭವೇ ಕಿರಣ ಹಸ್ತವ ಚಾಚಿದೆ**
**ಎಲ್ಲ ನನ್ನವರೆನುವ ಭಾವದ ಕರುಣೆಯೇ ಕಣ್ತೆರೆದಿದೆ॥**

ರಾಷ್ಟ್ರಕವಿ ಜಿ. ಎಸ್. ಶಿವರುದ್ರಪ್ಪ

■■

# ಚಿರಂತನ ಚೇತನ ಸಿದ್ಧಗಂಗಾ ಶ್ರೀಗಳು

● ಶ್ರೀ ಆರ್. ಎಸ್. ಚಾಪಗಾವಿ

ಮಾಗಿದ ಕಾಯ ಬಾಗಿದ ತಲೆ
ಕಾಂತಿ ತುಂಬಿದ ಕಣ್ಣುಗಳು
ದೈವೀ ಕಳೆ ಧೀರ ನಡೆ
ಎಂಥ ಸುಂದರ ವ್ಯಕ್ತಿತ್ವವು !

ಮಾಗಡಿ ತಾಲೂಕಿನ ವೀರಾಪುರವು
ನಿಮ್ಮ ಪುಣ್ಯ ಜನ್ಮಸ್ಥಳವು
ತಂದೆ ಹೊನ್ನಯ್ಯ ತಾಯಿ ಗಂಗಮ್ಮ
ಶಿವಣ್ಣನೆಂಬುದು ಪೂರ್ವದ ಹೆಸರು

ಗೋಸಲ ಸಿದ್ಧೇಶ್ವರರ
ಸಿದ್ಧಗಂಗಾ ಶ್ರೀ ಕ್ಷೇತ್ರವು
ಲೋಕ ಪ್ರಖ್ಯಾತಿ ಪಡೆದ
ಪಾವನ ಸುಕ್ಷೇತ್ರವು

ಸಾವಿರ ಸಾವಿರ ಮಕ್ಕಳಿಗೆ
ಆಶ್ರಯ ಸ್ಥಾನವಿದು
ಲಕ್ಷ ಲಕ್ಷ ಭಕ್ತ ಜನಕೆ
ದಾಸೋಹದ ಮಹಾಮನೆಯು

ಕಾಯಕಯೋಗಿ ತ್ರಿವಿಧ ದಾಸೋಹಿ
ಶತಮಾನದ ಮಹಾಯೋಗಿ
ಮಕ್ಕಳ ಮಮತೆಯ ಮಹಾಮಾಯಿ
ಭಕ್ತರ ಪೊರೆವ ಕರುಣಾಮಯಿ

ಸಿದ್ಧಗಂಗೆಯ ಭಾಗ್ಯನಿಧಿಯೆ
ಗುರುಬಸವನ ಅಪರಾವತಾರವೆ
ಚಿರಂತನ ಚೇತನವಾಗಿ
ಜನಮನದಲಿ ನೆಲೆಸಿರುವೆ.

■■

೬೪೪ 'ಬಸವ ಚೇತನ' ರಾಮತೀರ್ಥ ನಗರ ಬೆಳಗಾವಿ-೧೫ ಮೊ-೯೪೪೮೦೪೫೫೧೪೬

## ಬಸವತತ್ತ್ವ ಪ್ರಸಾರವೇ ಪ್ರಾಣ ಜೀವಾಳವಾಗಿಸಿಕೊಂಡಿರುವ

# ಪೂಜ್ಯಶ್ರೀ ಡಾ. ಬಸವಲಿಂಗ ಪಟ್ಟದ್ದೇವರು

• ಶ್ರೀ ರಾಜು ಜುಬರೆ

ಬೀದರ ಜಿಲ್ಲೆಯು ಕರ್ನಾಟಕಕ್ಕೆ ಕೀರಿಟಪ್ರಾಯವಾಗಿದ್ದರೆ ಬೀದರ ಜಿಲ್ಲೆಯ ಭಾಲ್ಕಿ ಹಿರೇಮಠ ಸಂಸ್ಥಾನವು ಬಸವತತ್ವಕ್ಕೆ ಕೀರಿಟವಾಗಿದೆ. ಈ ಮಠದ ಹಿಂದಿನ ಗುರುಗಳಾದ ಪೂಜ್ಯ ಶ್ರೀ ಡಾ.ಚನ್ನಬಸವ ಪಟ್ಟದ್ದೇವರು ಸ್ಥಾವರವಾಗಿರುವ ಮಠ ಪರಂಪರೆಗೆ ಬಸವಾದಿ ಶರಣರ ತತ್ವಾಧಾರಿತ ಜೀವಕಳೆತುಂಬಿ ಜಂಗಮಗೊಳಿಸಿದರು. ಅವರ ಕರಸಂಜಾತರಾದ ಡಾ. ಬಸವಲಿಂಗ ಪಟ್ಟದ್ದೇವರು ಬಸವತತ್ವವನ್ನೇ ಪ್ರಾಣಜೀವಾಳವಾಗಿಸಿಕೊಂಡಿದ್ದಾರೆ. ಬಸವಾದಿ ಶರಣರ ವಿಶ್ವಮಾನ್ಯ ತತ್ವಗಳನ್ನು ಕರ್ನಾಟಕದ ಆಚೆಗೆ ಮಹಾರಾಷ್ಟ್ರ ಹಾಗೂ ತೆಲಂಗಾಣದಲ್ಲಿ ತಲುಪಿಸಿದ ಕೀರ್ತಿ ಅವರದು. ತಮ್ಮ ಶ್ರೀಮಠದ ಆಶ್ರಯದಲ್ಲಿ ೨೦೦೭ ರಲ್ಲಿ ಮಹಾರಾಷ್ಟ್ರ ಬಸವ ಪರಿಷತ್ತು ಹಾಗೂ ತೆಲಂಗಾಣ ಬಸವ ಪರಿಷತ್ತು ಸ್ಥಾಪಿಸಿ, ಬಸವಕ್ರಾಂತಿಗೆ ನಾಂದಿ ಹಾಡಿದ್ದಾರೆ. ಇಲ್ಲಿಯವರೆಗೆ ಮರಾಠಿ ಭಾಷೆಯಲ್ಲಿ ೧೫೦ ಗ್ರಂಥಗಳನ್ನು ಪ್ರಕಟಿಸಿ, ಮಹಾರಾಷ್ಟ್ರದ ೩೬ ಜಿಲ್ಲೆಗಳಲ್ಲಿ ಬಸವಸಂದೇಶ ಯಾತ್ರೆ ಕೈಗೊಂಡು ಮಹಾರಾಷ್ಟ್ರದಾದ್ಯಂತ ಶರಣಸಾಹಿತ್ಯ ಮನೆ ಮನೆಗೆ ತಲುಪಿಸಿದ್ದಾರೆ.

ಪೂಜ್ಯರು ಹೊರರಾಜ್ಯಗಳಲ್ಲಿ ಮಾಡಿರುವ ಬಸವತತ್ವ ಪ್ರಸಾರ ಕಾರ್ಯವನ್ನು ಮನಗಂಡು ನಾಡಿನ ಖ್ಯಾತ ಸಂಶೋಧಕರಾದ ಡಾ. ಎಂ. ಎಂ. ಕಲಬುರಗಿಯವರು ಹೀಗೆ ಹೇಳುತ್ತಾರೆ– "ಲಿಂಗಾಯತ ಗುರುಪೀಠ (ವಿರಕ್ತಪೀಠ) ದವರು ತಮ್ಮ ಕಾರ್ಯವ್ಯಾಪ್ತಿಯನ್ನು ಕರ್ನಾಟಕಕ್ಕೆ ಸೀಮಿತಗೊಳಿಸುತ್ತಾ ಬಂದರು ಇದನ್ನು ಗಮನಿಸಿ ಆಚಾರ್ಯ ಪೀಠದವರು ಹೊರರಾಜ್ಯಗಳಾದ ಮಹಾರಾಷ್ಟ್ರ, ತೆಲಂಗಾಣದಲ್ಲಿ ಅಲ್ಲಿಯ ಜನರು ಮೊದಲಿನಿಂತಲೂ ಅನುಸರಿಸುತ್ತಿದ್ದ ಬಸವ ಸಿದ್ಧಾಂತದ ದಾರಿ ಬಿಡಿಸಿದರು. ಈ ತಪ್ಪನ್ನು ತಿದ್ದುವ ದೃಷ್ಟಿಯಿಂದ ಶ್ರೀ ಡಾ. ಬಸವಲಿಂಗ ಪಟ್ಟದ್ದೇವರು ಮಹಾರಾಷ್ಟ್ರ ಬಸವ ಪರಿಷತ್ತು ಮತ್ತು ತೆಲಂಗಾಣ ಬಸವ ಪರಿಷತ್ತು ಸ್ಥಾಪಿಸಿದ್ದು ಐತಿಹಾಸಿಕ ಸಾಧನೆಗಳಾಗಿವೆ. ಇತ್ತೀಚೆಗೆ ಅವರು ಕೈಗೊಂಡ ಸಮಗ್ರ ಮಹಾರಾಷ್ಟ್ರ ಬಸವ ಸಂದೇಶ ಯಾತ್ರೆ "ನ ಭೂತೋ ನ ಭವಿಷ್ಯತೀ" ಎಂದು ಹೇಳಬೇಕು.

ಪೂಜ್ಯರು ಬಸವತತ್ವ ಪ್ರಸಾರದ ಜೊತೆಗೆ ಕಲ್ಯಾಣ ಕರ್ನಾಟಕದ ಭಾಗದಲ್ಲಿ ಶೈಕ್ಷಣಿಕ ಕ್ರಾಂತಿಗೆ ಅಡಿಪಾಯ ಹಾಕಿದ್ದಾರೆ. ೧೯೯೨ ರಲ್ಲಿ ಹಿರೇಮಠ ಸಂಸ್ಥಾನ ವಿದ್ಯಾಪೀಠ ಟ್ರಸ್ಟನ್ನು ಸ್ಥಾಪಿಸುವ ಮೂಲಕ ಗಡಿಭಾಗದ ಹಳ್ಳಿಗಳಲ್ಲಿ ಕನ್ನಡ ಶಾಲೆಗಳನ್ನು ಪ್ರಾರಂಭಿಸಿ ಕನ್ನಡ ಪಟ್ಟದ್ದೇವರೆಂದೇ ಖ್ಯಾತರಾದರು. ಶ್ರೀಮಠದಲ್ಲಿ ೪೦೦ ಬಡಮಕ್ಕಳಿಗೆ ವಸತಿ, ಸಹಿತ ಅನ್ನ ಮತ್ತು ಜ್ಞಾನದಾಸೋಹಗೈದು ತ್ರಿವಿಧ ದಾಸೋಹ ಮೂರ್ತಿಗಳಾಗಿದ್ದಾರೆ. ಹೆತ್ತವರಿಗೆ ಬೇಡವಾದ ಶಿಶುಗಳನ್ನು ಅಪ್ಪಿಕೊಂಡು ಅವರ ಜೀವನಕ್ಕೆ ಹೊಸ ಕಳೆತುಂಬಿದ ಮಾತೃಹೃದಯಿಗಳು. ಸಮಾಜ ಮತ್ತು ಸರ್ಕಾರದಿಂದ ನಿರ್ಲಕ್ಷಿತವಾದ ಅನೇಕ ತಳ ಸಮುದಾಯಗಳು ಇನ್ನೂ ಜೀವಂತವಾಗಿವೆ. ಅವರು ಅಭಿವೃದ್ಧಿಯ ಪ್ರವಾಹದಿಂದ ಸಾವಿರಾರೂ ಕಿ. ಮೀ. ದೂರವಿದ್ದಾರೆ. ಅಂತಹ ತಳಸಮುದಾಯವಾಗಿರುವ ಕೋರವಾ ಹಾಗೂ ಡೊಂಬರಾಟದ ಜನಾಂಗದ ಮಕ್ಕಳ ಬಾಳಿನಲ್ಲಿ ಜ್ಞಾನದೀವಿಗೆಯನ್ನು ಹೊತ್ತಿಸಿದ್ದಾರೆ. ಲಂಬಾಣಿ ಥಾಂಡಾದ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸವನ್ನು ಕೊಡುತ್ತಿದ್ದಾರೆ. ಪೂಜ್ಯರು ದೀನ, ದಲಿತ, ನಿರ್ಗತಿಕ, ವಿಧವೆಯರ ವೃದ್ಧರ ಸೇವೆಯಲ್ಲಿಯೇ ಬಸವದರ್ಶನ ಪಡೆಯುತ್ತಾರೆ.

ಕಲೆ, ಸಾಹಿತ್ಯ, ಶಿಕ್ಷಣ, ಧರ್ಮ ಸಮ ಸಮಾಜದ ಏಳಿಗೆಗೆ ಅವರು ಅವಿಶ್ರಾಂತವಾಗಿ ಶ್ರಮಿಸುತ್ತಿದ್ದಾರೆ. ಸರ್ವಜನಾಂಗದ ಅಭಿವೃದ್ಧಿಯೇ ಅವರ ಕನಸಾಗಿದೆ. ಸಕಲ ಜೀವಾತ್ಮರಿಗೆ ಲೇಸನ್ನೆ ಬಯಸಿದ ಇವರು ಶರಣ ಪರಂಪರೆಯ ಅಚ್ಚ ವಾರಸದಾರರಾಗಿದ್ದಾರೆ. ಪೂಜ್ಯರು ಬಸವತತ್ವನ್ನೇ ಹಾಸಿಕೊಂಡು ಬಸವತತ್ವವನ್ನೇ ಹೊದ್ದುಕೊಂಡಿದ್ದಾರೆ. ಬಸವಸಂತತಿಗಳಾದ ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರಿಗೆ ಕರ್ನಾಟಕ ಘನ ಸರಕಾರ "ಬಸವ ರಾಷ್ಟ್ರೀಯ ಪುರಸ್ಕಾರ"ಕ್ಕೆ ಆಯ್ಕೆ ಮಾಡಿರುವುದು ಪುರಸ್ಕಾರದ ಹಿರಿಮೆಯನ್ನು ಹೆಚ್ಚಿಸಿದೆ. ಬಸವರಾಷ್ಟ್ರೀಯ ಪ್ರಶಸ್ತಿಗೆ ಆಯ್ಕೆಯಾದ ಪೂಜ್ಯರ ಶ್ರೀಚರಣಗಳಿಗೆ ಅನಂತ ಶರಣು ಶರಣಾರ್ಥಿಗಳು ಹಾಗೂ ಕರ್ನಾಟಕ ಸರಕಾರಕ್ಕೆ ಕೃತಜ್ಞತೆಗಳು.

■■

## ಕಲ್ಯಾಣ ನಾಡಿನ ಶ್ರೇಷ್ಠ ಕಾಯಕ ಮೂರ್ತಿ

# ಪೂಜ್ಯಶ್ರೀ ಡಾ. ಬಸವಲಿಂಗ ಪಟ್ಟದ್ದೇವರು

● ಸಂಗಮೇಶ ಎನ್. ಜವಾದಿ

ಕಲ್ಯಾಣ ನಾಡಿನ ಭಾಲ್ಕಿ ಹಿರೇಮಠ ಸಂಸ್ಥಾನ ಕರುನಾಡಿನ ಕನ್ನಡದ ಮಠ; ಬಸವಾದಿ ಪ್ರಮಥರ ತತ್ತ್ವದ ಮಠ; ಜನಸಾಮಾನ್ಯರ ಪ್ರೀತಿಯ-ಸ್ನೇಹದ, ಸಕಲ ಜೀವಾತ್ಮರ ಮಠ. ಬಸವಣ್ಣನವರು ಆದಿಯಾಗಿ ಇಡೀ ಶರಣ ಸಂಕುಲದ ಸಂದೇಶಗಳನ್ನು ಹಾಸಿಕೊಂಡು, ಹೊದ್ದುಕೊಂಡಿರುವಂಥ ಮಠ. ಇವನಾರವ, ಇವನಾರವ ಎನ್ನದೆ, ಎಲ್ಲರೂ ನಮ್ಮವರೆನ್ನುವ ಮೌಲ್ಯಾಧಾರಿತ ಸಮಾನತೆಯ ಸಿದ್ಧಾಂತ ಸಾರುವ ಮಠ. ಬಡವರಿಗೆ, ದೀನರಿಗೆ, ದಲಿತರಿಗೆ, ಅಂಗವಿಕಲರಿಗೆ, ಅಬಲೆಯರಿಗೆ, ವಿಧವೆಯರಿಗೆ, ಅನಾಥರಿಗೆ, ಕಲಾವಿದರಿಗೆ ಆಶ್ರಯ ನೀಡಿರುವಂಥ ವಿಶ್ವ ಶ್ರೇಷ್ಠ ಶ್ರೀ ಮಠ. ಇಂತಹ ವೈಚಾರಿಕ ಮಠದ ಪೀಠಾಧಿಪತಿಯಾಗಿ ಕಾರ್ಯನಿರ್ವಹಣೆ ಮಾಡುತ್ತಿರುವ, ನಮ್ಮೆಲ್ಲರ ಬೆಳಕಾಗಿರುವ ಮಾತೃ ಹೃದಯದ ಸೃಜನಶೀಲ, ವೈಚಾರಿಕ ಬರಹಗಾರರು ಹಿರೇಮಠ ಸಂಸ್ಥಾನ ವಿದ್ಯಾಪೀಠ ಟ್ರಸ್ಟ್ ಸ್ಥಾಪಿಸಿ ಪ್ರತಿವರ್ಷ ಸಾವಿರಾರು ಮಕ್ಕಳಿಗೆ ಬಸವಾದಿ ಶಿವಶರಣರ ಸಂಸ್ಕಾರಯುತ ಶಿಕ್ಷಣ ನೀಡುತ್ತಿರುವ, ಪ್ರಗತಿಪರ ಶಿಕ್ಷಣ ಚಿಂತಕರು; ನೂರಾರು ಅನಾಥ ಮಕ್ಕಳ ಸಂರಕ್ಷಕರು; ಲಿಂಗಾಯತ-ವಚನ ವಿಶ್ವವಿದ್ಯಾಲಯದ ರೂವಾರಿಗಳು, ಆಧುನಿಕ ಅನುಭವ ಮಂಟಪದ ಅಧ್ಯಕ್ಷರು; ಕಲೆ, ಸಾಹಿತ್ಯ, ಶಿಕ್ಷಣ, ಧರ್ಮ, ಸಮಸಮಾಜದ ಏಳಿಗೆಗೆ ದುಡಿಯುತ್ತಿರುವ ಸಾಮಾಜಿಕ ಸಾಮರಸ್ಯದ ಹರಿಕಾರರು; ಧರ್ಮ ಸಮನ್ವಯತೆಯ ಪ್ರತಿಪಾದಕರು; ಬಸವತತ್ತ್ವವನ್ನು ನಾಡಿನಾಚೆಗೂ ಪಸರಿಸಲು, ಪ್ರಚುರ ಪಡಿಸಲು ಮಹಾರಾಷ್ಟ್ರ ಹಾಗು ಆಂಧ್ರಪ್ರದೇಶಗಳಲ್ಲಿ ಬಸವ ಪರಿಷತ್ತು ಸ್ಥಾಪಿಸಿದ ಬಸವತತ್ತ್ವದ ಸಾಂಸ್ಕೃತಿಕ ರಾಯಭಾರಿಗಳು; ನಾಡಿನ ವಿದ್ವಾಂಸರ ಕೃತಿಗಳನ್ನು ಪ್ರಕಟಿಸಿ ಅಕ್ಷರ ಪ್ರೀತಿ ಮೆರೆದವರು, ನಮ್ಮ ಕಲ್ಯಾಣ ನಾಡಿನ ಹೆಮ್ಮೆಯ ಕನ್ನಡಮಠದ ಕನ್ನಡ ಜಂಗಮ ಮೂರ್ತಿಗಳಾದ ಪೂಜ್ಯಶ್ರೀ ಡಾ. ಬಸವಲಿಂಗ ಪಟ್ಟದ್ದೇವರು. ಶರಣ ಬಂಧುಗಳೆ ಪೂಜ್ಯಶ್ರೀ ಡಾ. ಬಸವಲಿಂಗ ಪಟ್ಟದ್ದೇವರು ಪಟ್ಟಾಧಿಕಾರ ವಹಿಸಿಕೊಂಡ ಕೂಡಲೇ ಮಠದ ಸರ್ವಾಂಗೀಣ ಅಭಿವೃದ್ಧಿ ಸೇರಿ ಎಲ್ಲಾ ಶಾಖಾ ಮಠಗಳ ಜೀರ್ಣೋದ್ಧಾರ ಕಾರ್ಯ ಯಶಸ್ವಿಯಾಗಿ ಮಾಡಿದ್ದಾರೆ. ಹೀಗಾಗಿ ಶ್ರೀಗಳ ಕುರಿತು ಅವರ ಕೈಗೊಂಡ ಸಾಮಾಜಿಕ ಹಾಗು ಧಾರ್ಮಿಕ ಸೇವೆಯನ್ನು ಗುರುತಿಸಿ ಕರ್ನಾಟಕ ಸರಕಾರ ಬಸವ ರಾಷ್ಟ್ರೀಯ ಪ್ರಶಸ್ತಿಗೆ ಆಯ್ಕೆ ಮಾಡಿದೆ ಹಾಗು ಪ್ರಶಸ್ತಿಗೆ ಭಾಜನರಾಗಿದ್ದ ಶ್ರೀಗಳು ಇನ್ನಷ್ಟು ಸಮಾಜಮುಖಿ ಸೇವೆಯನ್ನು ಈ ನಾಡಿಗೆ ಸಲ್ಲಿಸುವಂತಾಗಲಿ ಎಂದು ಹಾರೈಸುತ್ತಾ ಅವರು ವಿವಿಧ ರಂಗಗಳಲ್ಲಿ ಮಾಡಿರುವ ಅಪ್ರತಿಮ ಸಾಧನೆ-ಸೇವೆ ನಾಡಿನ ಜನರಿಗೆ ತಿಳಿಸುವ ಪುಟ್ಟ ಪ್ರಯತ್ನ ಮಾಡಲಾಗಿದೆ.

### ಕೃಷಿ ಕಾಯಕದ ಶ್ರೀಗಳು :

ರೈತರ ಕಷ್ಟದ ಜೀವನವನ್ನು ಅರಿತು ಅವರ ಬಾಳು ನಂದನವನವಾಗಲು 'ಕೋಟಿ ವಿದ್ಯೆಗಿಂತ ಮೇಟಿ ವಿದ್ಯೆ ಮೇಲು' ಎಂಬ ಗಾದೆಯಂತೆ ಕೃಷಿ ರೈತ ಸ್ನೇಹಿ ಕೆಲಸಗಳನ್ನು ಜಾರಿಗೆ ತರುವ ಮೂಲಕ ಆಚರಣೆಯಲ್ಲಿ ತಂದು ತೋರಿದವರು ಪೂಜ್ಯಶ್ರೀ ಡಾ. ಬಸವಲಿಂಗ ಪಟ್ಟದ್ದೇವರು ಎನ್ನುವುದು ನಾವ್ಯಾರು ಮರೆಯಬಾರದು ಮತ್ತೆ ಪೂಜ್ಯರು ಮಠಾಧೀಶರಾದರೂ ಸಹ ಧರ್ಮದಷ್ಟೆ ವ್ಯವಸಾಯ ಮುಖ್ಯವೆಂದವರು. ಹಾಗಾಗಿ ಶಾಖಾ ಮಠಗಳ ಅಡಿಯಲ್ಲಿ ಬರುವ ಹಾಳು ಹೊಲಗಳನ್ನು ಹಸನುಗೊಳಿಸಿ ಅವುಗಳೆಲ್ಲವನ್ನು ವ್ಯವಸಾಯಕ್ಕೆ ಅಣಿಗೊಳಿಸಿ ಕೃಷಿಯಲ್ಲಿ ಕ್ರಾಂತಿಕಾರಿ ಬದಲಾವಣೆಗೆ ಸಾಕ್ಷಿಯಾಗಿ ಕೃಷಿಯಲ್ಲಿ ಉತ್ತಮ ಇಳುವರಿ ಪಡೆಯುವ ಮೂಲಕ ರೈತರಿಗೆ ಮಾರ್ಗದರ್ಶಕರಾದರು. ಹಾಗೆಯೇ ನಿರಾಶರಾದ ರೈತರು ಆತ್ಮಹತ್ಯೆಗೆ ಶರಣಾಗುತ್ತಿರುವ ಸಂದರ್ಭದಲ್ಲಿ ಮಾದರಿ ಕೃಷಿ ಅಭಿವೃದ್ಧಿ ಪಡಿಸಿ ರೈತರಿಗೆ ಆತ್ಮಸ್ಥೈರ್ಯ ನೀಡಿ ಅವರ ಬಾಳಿಗೆ ಬೆಳಕಾಗುವ ಕಾಯಕ ಮಾಡಿ ಸೈ ಎನಿಸಿಕೊಂಡಿದ್ದಾರೆ ಮತ್ತು ಪ್ರತಿ ವರ್ಷ ಬೃಹತ್ ಕೃಷಿ ಸಮಾವೇಶಗಳನ್ನು ಮಾಡುವ ಮೂಲಕ ಚಿಂತನೆ ನಡೆಸುವರು ನಮ್ಮ ಕೃಷಿ ಕಾಯಕದ ಶ್ರೀಗಳು.

ಜಿಲ್ಲಾಧ್ಯಕ್ಷರು, ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತು, ಕೂಡಂಬಲ, ಬೀದರ ಜಿಲ್ಲೆ

### ಶ್ರೀಗಳ ಪರಿಸರ ಪ್ರೀತಿ :

ಇನ್ನೂ ಶ್ರೀಗಳ ಪರಿಸರ ಪ್ರೀತಿಯನ್ನು ನಾವು ಅವರ ನಡೆ–ನುಡಿಗಳಲ್ಲಿ ಹೆಚ್ಚಾಗಿ ಕಾಣಬಹುದಾಗಿದೆ. ಆದ್ದರಿಂದ ಹಿಂದಿಗಿಂತಲೂ ಇಂದು ಪರಿಸರ ಸಂರಕ್ಷಣೆ ಹೆಚ್ಚು ಅಗತ್ಯವಿದೆ ಎಂಬುದು ಶ್ರೀಗಳ ಅಭಿಪ್ರಾಯ. ಹಾಗಾಗಿ ಪ್ರಕೃತಿಗೆ ಮನುಷ್ಯರ ಎಲ್ಲಾ ಆಸೆಗಳನ್ನು ಪೂರೈಸುವ ಸಾಮರ್ಥ್ಯವಿದೆ. ಆದರೆ ಒಂದೇ ಒಂದು ದುರಾಸೆಯನ್ನಲ್ಲಾ, ಆದ್ದರಿಂದ ನಾವು ಪರಿಸರ ಸಂರಕ್ಷಿಸಿ ನಿಸರ್ಗದೊಂದಿಗೆ ಸಹಜ ಬದುಕನ್ನು ಸಾಗಿಸಬೇಕು. ಶುದ್ಧವಾದ ಗಾಳಿ, ನೀರು ಜನರಿಗೆ ಸಿಗಬೇಕಾದರೆ ಮತ್ತು ಸಕಾಲಿಕವಾಗಿ ಮಳೆ ಬರಬೇಕಾದರೆ ಹೆಚ್ಚಿನ ಪ್ರಮಾಣದಲ್ಲಿ ಗಿಡಗಳನ್ನು ಬೆಳೆಸಬೇಕಾಗುತ್ತದೆ ಎಂದು ಶ್ರೀಗಳು ಎಲ್ಲಾ ಕಡೆ ತಮ್ಮ ಉಪನ್ಯಾಸದಲ್ಲಿ ಜನಸಾಮಾನ್ಯರಿಗೆ ಹೇಳುತ್ತಿದ್ದಾರೆ. ಈ ನಿಟ್ಟಿನಲ್ಲಿ ಹಿರೇಮಠ ಸಂಸ್ಥಾನ ಭಾಲ್ಕಿ ವತಿಯಿಂದ ನಡೆಯುತ್ತಿರುವ ಕಾರ್ಯಕ್ರಮಗಳಲ್ಲಿ ಜೂನ, ಜುಲೈ, ಅಗಸ್ಟ್ ತಿಂಗಳುಗಳಲ್ಲಿ ಸಸಿಗಳನ್ನು ಪ್ರತಿ ವರ್ಷ ಜನರಿಗೆ ಉಚಿತವಾಗಿ ವಿತರಿಸಲಾಗುತ್ತದೆ. ಸಸಿಗಳ ಈ ವಿತರಣೆ ಕಾರ್ಯದಲ್ಲಿ ಸ್ಥಳೀಯ ತೋಟಗಾರಿಕೆ ಇಲಾಖೆ, ಅರಣ್ಯ ಇಲಾಖೆ ಮತ್ತು ಸಂಘ ಸಂಸ್ಥೆಗಳು ಸಹಕರಿಸುತ್ತಿವೆ.

### ಪೂಜ್ಯರ ಶೈಕ್ಷಣಿಕ ಸೇವೆ :

ನಿನ್ನೊಡವೆ ಎಂಬುದು ಜ್ಞಾನರತ್ನ, ಜ್ಞಾನವೇ ಶಕ್ತಿ ಎಂಬ ವಾಕ್ಯದಂತೆ ಪೂಜ್ಯಶ್ರೀ ಡಾ. ಬಸವಲಿಂಗ ಪಟ್ಟದ್ದೇವರು ಶಿಕ್ಷಣ ರಂಗದಲ್ಲಿ ಮಹತ್ವದ ಕ್ರಾಂತಿಕಾರಿ ಬದಲಾವಣೆ ಮಾಡಿದ್ದಾರೆ ಎನ್ನಬಹುದು. ಅಲ್ಪ ಸಮಯದಲ್ಲಿ ಶಿಕ್ಷಣ ಕ್ಷೇತ್ರವನ್ನು ಬೃಹತ್ತಾಗಿ ಬೆಳೆಸಿದ್ದು ಬಸವಲಿಂಗ ಪಟ್ಟದ್ದೇವರ ಪರಿಶ್ರಮ ಪ್ರಯತ್ನದ ಫಲ ಎಂಬುದು ನಾವು ಅರ್ಥಮಾಡಿಕೊಳ್ಳಬೇಕು. ಬೀದರ ಜಿಲ್ಲೆಯ ಎಲ್ಲ ತಾಲೂಕಿನಲ್ಲಿಯೂ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ, ಅಷ್ಟೇ ಏಕೆ ಕಲಬುರಗಿ ಜಿಲ್ಲೆಯಲ್ಲಿಯೂ ಪ್ರವೇಶ ಮಾಡುವ ಮೂಲಕ ಶಿಕ್ಷಣ ರಂಗದಲ್ಲಿ ಅತ್ಯುತ್ತಮ ಗುಣಮಟ್ಟದ ಶಿಕ್ಷಣ ವ್ಯವಸ್ಥೆ ಮತ್ತು ಮಕ್ಕಳ ಬೌದ್ಧಿಕ ಚಿಂತನೆಗೆ ನಿಲುಕುವ ಶಿಕ್ಷಣವನ್ನು ಜಾರಿಗೆ ತರುವ ಮೂಲಕ ಕಲ್ಯಾಣ ನಾಡಿನಲ್ಲಿ ಶ್ರೇಷ್ಠ ಶಿಕ್ಷಣ ತಜ್ಞರಾಗಿ ಮಿನುಗುತ್ತಿದ್ದಾರೆಂದು ಹೇಳಲು ಸಂತಸವಾಗುತ್ತಿದೆ. ೧೯೯೨ ರಲ್ಲಿ ಹಿರೇಮಠ ಸಂಸ್ಥಾನ ವಿದ್ಯಾಪೀಠ ಟ್ರಸ್ಟನ್ನು ಸ್ಥಾಪಿಸಿದ್ದಾರೆ. ನಲವತ್ತು ಮಕ್ಕಳಿಂದ ಪ್ರಾರಂಭವಾದ ಸಂಸ್ಥೆಯಲ್ಲಿ ಹತ್ತು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಓದುತ್ತಾರೆ ಎನ್ನುವುದು ಸುಳ್ಳಲ್ಲ. ಒಂದು ಸಾವಿರಕ್ಕೂ ಹೆಚ್ಚು ಶಿಕ್ಷಕರು ಹಾಗು ಸಿಬ್ಬಂದಿಯವರು ಕಾರ್ಯ ಮಾಡುತ್ತಾರೆ ಎಂದು ಹೇಳಲು ಹೆಮ್ಮೆ ಅನಿಸುತ್ತದೆ. ಪೂಜ್ಯರ ಸಂಸ್ಥೆಯಲ್ಲಿ ಗುಣಮಟ್ಟದ ಶಿಕ್ಷಣ ಜೊತೆ ಮಕ್ಕಳಲ್ಲಿ ಬಸವ ಧರ್ಮ ಸಂಸ್ಕಾರ ಸಂಸ್ಕೃತಿ ಬೆಳೆಸುವುದು ಈ ಸಂಸ್ಥೆಯ ವೈಶಿಷ್ಟ್ಯವಾಗಿದೆ. ಮನುಷ್ಯರ ಸತತ ಪ್ರಯತ್ನ ಹಾಗು ಪರಿಶ್ರಮದಿಂದ ಏನೆಲ್ಲಾ ಸಾಧನೆ ಮಾಡಬಹುದು ಏನೆಲ್ಲಾ ಸಾಧಿಸಬಹುದು ಎಂಬುದಕ್ಕೆ ನಿದರ್ಶನ ನಮ್ಮ ಪೂಜ್ಯಶ್ರೀ ಡಾ. ಬಸವಲಿಂಗ ಪಟ್ಟದ್ದೇವರು.

### ಗುರುಕುಲ ವಸತಿ ಶಾಲೆ, ಉಚಿತ ಪ್ರಸಾದನಿಲಯ, ಸಂಗೀತ ಶಾಲೆ :

ಪೂಜ್ಯಶ್ರೀ ಬಸವಲಿಂಗ ಪಟ್ಟದ್ದೇವರ ಕನಸಿನ ಕೂಸು ಇಂದು ಕರ್ನಾಟಕ ರಾಜ್ಯದಲ್ಲಿಯೇ ಮಾದರಿ ಶಾಲೆ ಎನಿಸಿಕೊಂಡಿದೆ. ರಾಜ್ಯಮಟ್ಟದ ರ್‍ಯಾಂಕ್ ಪಡೆದು ಮುಖ್ಯಮಂತ್ರಿ ಪ್ರಶಸ್ತಿ ಪದಕ ಪಡೆದುಕೊಂಡಿವೆ. ಎಲ್. ಕೆ. ಜಿ. ಯಿಂದ ಪಿ. ಯು. ಸಿ. ವರೆಗೆ ಶಿಕ್ಷಣ ನೀಡಲಾಗುತ್ತದೆ. ಕನ್ನಡ ಮಾಧ್ಯಮದಲ್ಲಿದ್ದರೂ ಇಂಗ್ಲಿಷ್ ಕಲಿಯುವಲ್ಲಿ ಹಿಂದೆ ಬಿದ್ದಿಲ್ಲ ಎಂಬುದು ಸಾಬೀತು ಮಾಡಿ ತೋರಿಸಿದೆ. ಇಲ್ಲಿ ಪಾಸಾದ ವಿದ್ಯಾರ್ಥಿಗಳು ದೊಡ್ಡ ದೊಡ್ಡ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಯಶಸ್ವಿಯಾಗಿದ್ದಾರೆ. ಅಷ್ಟೇ ಅಲ್ಲ ಇತರೆ ಸಂಸ್ಥೆಯಲ್ಲಿ ಪ್ರವೇಶ ಪಡೆದು ಅಲ್ಲಿ ಗುರುಕುಲ ವಿದ್ಯಾರ್ಥಿಗಳೇ ಪ್ರಥಮ ರ್‍ಯಾಂಕ್ ಸ್ಥಾನದಲ್ಲಿದ್ದಾರೆಂದು ಹೇಳಲು ಹೆಮ್ಮೆ ಅನಿಸುತ್ತದೆ. ಸಂಸ್ಕಾರ ಸಹಿತವಾದ ಈ ಸಂಸ್ಥೆ ಕಲ್ಯಾಣ ನಾಡಿಗೆ ಹೆಮ್ಮೆ ಎನಿಸದೆ ಇರಲಾರದು. ಆದ್ದರಿಂದ ಇಂಥ ಆದರ್ಶ ಸಂಸ್ಕಾರಯುತವಾದ ವಸತಿ ಶಾಲೆ ಸ್ಥಾಪನೆ ಮಾಡಿದ ಶ್ರೇಯಸ್ಸು ಮತ್ತು ಕೀರ್ತಿ ಬಸವಲಿಂಗ ಪಟ್ಟದ್ದೇವರಿಗೆ ಸಲ್ಲುತ್ತದೆ. ಇಲ್ಲಿ ಡಿಪ್ಲೊಮಾ, ಇಂಜಿನಿಯರಿಂಗ್, ಬಿ. ಎಡ್, ಡಿ. ಎಡ್ ಮುಂತಾದ ಉನ್ನತ ಶಿಕ್ಷಣ ಪಡೆಯುವವರಿಗೆ ಈ ಪ್ರಸಾದನಿಲಯ ಆಶ್ರಯ ತಾಣವಾಗಿದೆ. ಇಲ್ಲಿ ಐವತ್ತು ವಿದ್ಯಾರ್ಥಿಗಳು ಇರುತ್ತಾರೆ. ಹಾಗೆ ಬಡವರಿಗೆ ಅನಾಥರಿಗೆ ಆಶ್ರಯ ನೀಡುವ ಪ್ರಸಾದ ನಿಲಯ ಸಹ ಸ್ಥಾಪನೆ ಮಾಡಿದ್ದಾರೆ. ಎಲ್ಲಾ ಜಾತಿ, ಮತ–ಪಂಥ ಭೇದವಿಲ್ಲದೆ ಎಲ್ಲರಿಗೂ ಮುಕ್ತ ಮನಸ್ಸಿನಿಂದ ಪ್ರವೇಶವಿದೆ. ಬಸವ ಸಂಸ್ಕಾರದೊಂದಿಗೆ ಇಲ್ಲಿನ ಮಕ್ಕಳು ಒಳ್ಳೆಯ ಶಿಕ್ಷಣ ಪಡೆದು ದೇಶ ವಿದೇಶಗಳಲ್ಲಿ ದೊಡ್ಡ ಸ್ಥಾನದಲ್ಲಿದ್ದಾರೆ. ಕೇವಲ ಇಪ್ಪತ್ತೈದು ವಿದ್ಯಾರ್ಥಿಗಳಿಂದ ಪ್ರಾರಂಭವಾದ ಪ್ರಸಾದನಿಲಯ ಇಂದು ಐದುನೂರಕ್ಕೂ ಹೆಚ್ಚು ಮಕ್ಕಳು ಈ ಪ್ರಸಾದನಿಲಯದಲ್ಲಿದ್ದಾರೆಂದು ಹೇಳಲು ಹೆಮ್ಮೆ ಎನಿಸುತ್ತದೆ. ಹಾಗಾಗಿ ಈ ಪ್ರಸಾದನಿಲಯ ಕಲ್ಯಾಣ ಕರ್ನಾಟದಲ್ಲಿಯೇ ಇದೊಂದು ಅಪರೂಪ ಏಕೈಕ ಪ್ರಸಾದನಿಲಯ ಎಂದು ಸಂತಸದಿಂದ ಹೇಳಬೇಕಾಗುತ್ತದೆ. ಜೊತೆಗೆ ಡಾ. ಚನ್ನಬಸವ ಪಟ್ಟದ್ದೇವರ ಪ್ರಸಾದನಿಲಯ, ಬೀದರ ನಗರದ ಮಧ್ಯಭಾಗದಲ್ಲಿ ಭಕ್ತರ ಸಹಕಾರದಿಂದ ಸಂಗ್ರಹಿತ ಮೂವತ್ತು ಲಕ್ಷ ರೂಪಾಯಿ ವೆಚ್ಚದಲ್ಲಿ ಸ್ವತಂತ್ರ

ಕಟ್ಟಡ ಖರೀದಿಸಲಾಗಿದೆ. ಮುಂದೆ ಒಂದು ಸಾವಿರ ವಿದ್ಯಾರ್ಥಿಗಳಿಗೆ ಆಶ್ರಯ ನೀಡುವ ಪೂಜ್ಯರ ಕನಸು ನನಸಾಗಲಿ ಎಂದು ನಾವು ಆಶಿಸೋಣ ಹಾಗು ಕನ್ನಡಿಗರು ಬಹುಸಂಖ್ಯೆಯಲ್ಲಿ ಇದ್ದರೂ ಆಂಧ್ರಕ್ಕೆ ಸೇರಿದ ಮೇಡಕ ಜಿಲ್ಲೆಯ ನಾರಾಯಣಖೇಡ ತಾಲೂಕಿನಲ್ಲಿ ಕಾರಾಮುಂಗಿ ಮತ್ತು ಮೋರ್ಗಿಗಳಲ್ಲಿ ಕನ್ನಡ ಶಾಲೆಗಳನ್ನು ಆರಂಭಿಸಿದ್ದ ಕೀರ್ತಿ ಪೂಜ್ಯರಿಗೆ ಸಲ್ಲುತ್ತದೆ. ಔರಾದ ತಾಲೂಕಿನ ಖೇಡ ಗ್ರಾಮದಲ್ಲಿ ನೀಲಾಂಬಿಕಾ ಅಂಗವಿಕಲ ವಸತಿ ಸಂಗೀತ ಪಾಠಶಾಲೆಯನ್ನು ೧೯೯೪ ರಲ್ಲಿ ಆರಂಭಿಸಿದರು. ಈ ಭಾಗದ ಮಹಿಳೆಯರಿಗೆ ಇದು ಆಶಾ ಕಿರಣವಾಗಿದೆ. ಅಂಗವಿಕಲರ ಬಾಳಿನ ಬೆಳಕಾಗಿದೆ. ಹಾಗೆಯೇ ೧೯೯೬ ರಲ್ಲಿ ಭಾಲ್ಕಿಯ ಹಿರೇಮಠದ ಸಂಸ್ಥಾನದಲ್ಲಿಯೇ ನೀಲಾಂಬಿಕಾ ಸಂಗೀತ ಪಾಠಶಾಲೆ ಆರಂಭಿಸಲಾಯಿತು.

**ದಾಸೋಹ ಸೇವೆ :**

ಸೋಹಂ ಎಂದೆನಿಸದೆ ದಾಸೋಹಂ ಎಂದೆನಿಸಯ್ಯಾ ಎಂಬ ಬಸವ ವಾಣಿಯಂತೆ ಪೂಜ್ಯಶ್ರೀ ಬಸವಲಿಂಗ ಪಟ್ಟದ್ದೇವರು ದಾಸೋಹವನ್ನು ವಿಸ್ತರಿಸಿದ್ದಾರೆ. ಮಠಕ್ಕೆ ಯಾರೇ ಬರಲಿ ನಿರಂತರ ದಾಸೋಹ ನಡೆಯುತ್ತದೆ. ಮಠದ ಒಲೆಯಲ್ಲಿ ಬೆಂಕಿ ನಂದುವುದೇ ಇಲ್ಲ. ಸದಾಕಾಲ ನಿರಂತರವಾಗಿ ದಾಸೋಹ ಇದ್ದೇ ಇರುತ್ತದೆ. ಪ್ರತಿ ತಿಂಗಳ ನಡೆಯುವ ಶರಣ ಸಂಗಮ ಸಮಾರಂಭ ಮುಗಿದ ಬಳಿಕ ಸಾವಿರ ಸಾವಿರ ಸಂಖ್ಯೆಯಲ್ಲಿ ದಾಸೋಹ ನಡೆಯುತ್ತದೆ. ಪೂಜ್ಯರ ಸ್ಮರಣೋತ್ಸವ, ಪೂಜ್ಯರ ಜಯಂತಿಯಲ್ಲಿ ಲಕ್ಷ ಲಕ್ಷ ಜನ ದಾಸೋಹ ನಡೆಯುತ್ತದೆ. ಅನ್ನದೇವರ ಮುಂದೆ ಇನ್ನು ದೇವರುಂಟೆ? ಎಂಬ ಶರಣ ವಾಣಿಯಂತೆ ದಾಸೋಹ ಎಂದರೇನು? ಎಂಬುದು ಬಸವಲಿಂಗ ಪಟ್ಟದ್ದೇವರು ಪ್ರಾಯೋಗಿಕವಾಗಿ ನಿಜ ಆಚರಣೆಯಲ್ಲಿ ತಂದಿದ್ದಾರೆ.

**ಅನಾಥ ಮಕ್ಕಳ ಕೇಂದ್ರ :**

ಅನೈತಿಕದಿಂದಲೋ ಮತ್ತಾವ ಕಾರಣದಿಂದಲೋ ಹೆರಿಗೆಯಾದ ಕೂಡಲೇ ತಿಪ್ಪೆಯಲ್ಲಿ, ಬೇಲಿಯಲ್ಲಿ, ಚರಂಡಿಯಲ್ಲಿ ಬೀಸಾಡಿದ ಮಕ್ಕಳನ್ನು ಎತ್ತಿಕೊಂಡು ಬಂದು ಸಾಕುತ್ತಿರುವುದು ನಿಜಕ್ಕೂ ಪೂಜ್ಯರ ಅಂತಃಕರಣ, ಮಾನವೀಯ ಪ್ರೇಮ ಏನೆಂದು ಕೊಂಡಾಡುವುದು; ಮನದಲ್ಲಿ ನಮಿಸುವುದು ಮಾತ್ರ ನಮ್ಮ ಕರ್ತವ್ಯ. ಸುಮಾರು ೧೫ ಮಕ್ಕಳು ಇದ್ದಾರೆ. ಅವರಿಗೆ ಯಾವುದೇ ಕೊರತೆ ಇಲ್ಲದಂತೆ ನಿಜವಾಗಿಯೂ ಬಸವ ಮಕ್ಕಳು ಎಂದು ಭಾವಿಸಿ ಪೂಜ್ಯರು ಅಂತಃಕರಣದಲ್ಲಿ ಬೆಳೆಸುತ್ತಿದ್ದಾರೆ.

**ಚನ್ನಬಸವ ಪಟ್ಟದ್ದೇವರ ಸ್ಮಾರಕ :**

ಈ ಭಾಗದ ನಡೆದಾಡುವ ದೇವರಾಗಿದ್ದ ಡಾ. ಚನ್ನಬಸವ ಪಟ್ಟದ್ದೇವರ ಸ್ಮಾರಕವನ್ನು ಕಮಲ ನಗರದಲ್ಲಿ ಪೂಜ್ಯ ಬಸವಲಿಂಗ ಪಟ್ಟದ್ದೇವರು ನಿರಂತರ ಶ್ರಮಿಸಿ ಚಾಲನೆ ನೀಡಿದ್ದಾರೆ. ಮಾನ್ಯ ಮುಖ್ಯಮಂತ್ರಿ ಶ್ರೀ ಬಿ. ಎಸ್. ಯಡಿಯೂರಪ್ಪ ಅವರಿಂದ ಸ್ಮಾರಕಕ್ಕೆ ರೂಪಾಯಿ ಐವತ್ತು ಲಕ್ಷ ಮಂಜೂರಾಗಿದ್ದು ನಿರ್ಮಾಣ ಕಾರ್ಯ ತ್ವರಿತಗತಿಯಲ್ಲಿದೆ.

**ಸಾಮಾಜಿಕ ಕಾರ್ಯ :**

ಪೂಜ್ಯ ಶ್ರೀಗಳ ಆಲೋಚನೆಗಳು ಅತ್ಯಂತ ಜನಪರ ಜೀವಪರ ಆಗಿವೆ. ಸರಳತೆ ಅವರ ಮೂಲ ಸಿದ್ಧಾಂತವಾಗಿದೆ. ಅದಕ್ಕಾಗಿ ತಿಂಗಳ ಶರಣ ಸಂಗಮ, ವಾರ್ಷಿಕ ಸ್ಮರಣೋತ್ಸವ, ಜಯಂತ್ಯುತ್ಸವ ಸಂದರ್ಭದಲ್ಲಿ ಸಾಮಾಜಿಕ ಅಸಮಾನತೆ ತೊಡೆಯಲು ಅಂತರ್ ಜಾತಿ ವಿವಾಹಗಳನ್ನು ಏರ್ಪಡಿಸಿ ದುಂದು ವೆಚ್ಚ ಕಡಿವಾಣಕ್ಕೆ ಸಾಮೂಹಿಕ ಉಚಿತ ವಿವಾಹಗಳನ್ನು ಸ್ವತಃ ತಾವೇ ಎದುರು ನಿಂತು ನಡೆಸಿಕೊಡುತ್ತಾರೆ. ದಯವೇ ಧರ್ಮದ ಮೂಲವೆಂದು ಬಸವಣ್ಣನವರು ಹೇಳಿದಂತೆ, ದಯಾಪರರಾದ ಪೂಜ್ಯ ಶ್ರೀಗಳು ಅಂತಃಕರಣವುಳ್ಳ ಮಾತೃ ಹೃದಯಿಗಳಾಗಿದ್ದಾರೆ. ನಿರಾಶ್ರಿತರಾದ ಅನೇಕ ವೃದ್ಧರಿಗೆ ಹಿರೇಮಠದಲ್ಲಿ ಆಶ್ರಯ ನೀಡಿದ್ದಾರೆ. ಜೊತೆಗೆ ಅನೇಕ ವಿಧವೆಯರಿಗೆ, ನಿರಾಶ್ರಿತ ಮಹಿಳೆಯರಿಗೆ ಆಶ್ರಯ ನೀಡಿದ ಅವರು ಸಮಾಜದಲ್ಲಿ ಗೌರವದ ಬದುಕು ನಡೆಸುವಂತೆ ಅವಕಾಶ ಮಾಡಿಕೊಟ್ಟಿದ್ದಾರೆ.

**ಶ್ರೀಗಳ ಸಾಹಿತ್ಯ ರಚನೆ:**

ಶ್ರೀಗಳು ಸಹೃದಯಿಗಳಾಗಿರುವಂತೆ ಸೃಜನಶೀಲ ಬರಹಗಾರರು ಹೌದು. ಹಾಗಾಗಿ ಹತ್ತಾರು ಪುಸ್ತಕಗಳನ್ನು ಬರೆದು ಆ ಮೂಲಕ ಜನರಲ್ಲಿ ಬಸವತತ್ತ್ವದ ವೈಚಾರಿಕತೆಯನ್ನು ಬೆಳೆಸುತ್ತಿದ್ದಾರೆ. ಅವರ ಅನೇಕ ಕೃತಿಗಳು ಮರಾಠಿ, ತೆಲಗು ಹಾಗು ಹಿಂದಿ ಭಾಷೆಗಳಿಗೆ ಅನುವಾದವಾಗಿರುವುದನ್ನು ನೋಡಿದರೆ ಅವರ ಸಾಹಿತ್ಯದ ಜನಪ್ರಿಯತೆ ಅರ್ಥವಾಗುತ್ತದೆ. ಇಷ್ಟಲಿಂಗ ಪೂಜಾ ವಿಧಾನ, ಬಸವಜ್ಯೋತಿ, ಶಿವಶರಣೆಯರ ವಚನಗಳು, ಬಸವ ನೈವೇದ್ಯ, ಶರಣ ಸಾಹಿತ್ಯ ದರ್ಪಣ, ಧರ್ಮಗುರು ಬಸವಣ್ಣ ಮತ್ತು ಅಷ್ಟಾವರಣ, ಬಸವ ಸಿಂಚನ, ಚನ್ನಬಸವ ಪಟ್ಟದ್ದೇವರು, ಬಸವ ಚಿಂತನ ಹೀಗೆ ಹಲವಾರು ಪುಸ್ತಕಗಳನ್ನು ಬರೆಯುವ ಮೂಲಕ ಸಾಹಿತ್ಯ ಸೇವೆಯಲ್ಲಿ ತೊಡಗಿದ್ದಾರೆ. ನಮ್ಮ ಸಂಸ್ಕೃತಿಯನ್ನು ಪಸರಿಸುವ ಮತ್ತು ಜ್ಞಾನವನ್ನು ಹೆಚ್ಚಿಸುವ ಉತ್ತಮ ವಿಚಾರಗಳನ್ನು ಉತ್ತಮ ಲೇಖಕರಿಂದ ಬರೆಸಿ

ಪುಸ್ತಕಗಳನ್ನು ಪ್ರಕಟಿಸುವುದರೊಂದಿಗೆ ಅಕ್ಷರ ಸಂಸ್ಕೃತಿಯನ್ನು ಬೆಳೆಸುವ ಸದುದ್ದೇಶದಿಂದ ಬಸವ ಧರ್ಮ ಪ್ರಸಾರ ಸಂಸ್ಥೆ ಹಿರೇಮಠ ಸಂಸ್ಥಾನ, ಭಾಲ್ಕಿ ಎಂಬ ಹೆಸರಿನಲ್ಲಿ ಪ್ರಕಾಶನ ಸಂಸ್ಥೆ ತೆರೆದು ನೂರಾರು ಪುಸ್ತಕಗಳನ್ನು ಪ್ರಕಟಿಸುವ ಮೂಲಕ ಹೊಸ ಪ್ರತಿಭೆಗಳಿಗೆ ಅವಕಾಶ ಕೊಡುವುದು ಮತ್ತು ಬಸವ ತತ್ತ್ವವನ್ನು ಪುಸ್ತಕ ಸಂಸ್ಕೃತಿಯ ಮೂಲಕ ಪ್ರಚಾರ ಮಾಡುತ್ತಿರುವುದು ಶ್ರೀಗಳ ಗಮನಾರ್ಹ ಸಾಧನೆಗಳಾಗಿವೆ. ಪ್ರಕಟಣೆಯ ವಿವರ ಕನ್ನಡದಲ್ಲಿ ೪೩, ಹಿಂದಿಯಲ್ಲಿ ೪, ಇಂಗ್ಲೀಷನಲ್ಲಿ ೧ ಪುಸ್ತಕ ಪ್ರಕಟಿಸಿರುವುದಲ್ಲದೆ ಡಾ. ಚನ್ನಬಸವ ಪಟ್ಟದ್ದೇವರ ಪ್ರತಿಷ್ಠಾನ ೨, ಮಹಾರಾಷ್ಟ್ರ ಬಸವ ಪರಿಷತ್ತಿನಿಂದ ೩೪, ಆಂಧ್ರದ ಬಸವ ಪರಿಷತ್ತಿನಿಂದ ೭ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಹಾಗೆ ಇಂದಿನ ಆಧುನಿಕತೆಯಿಂದ ಕೂಡಿದ ಮಕ್ಕಳು ನಮ್ಮ ಸಂಸ್ಕೃತಿಯಿಂದ ವಿಮುಖರಾಗುತ್ತಿದ್ದಾರೆ. ಅದಕ್ಕಾಗಿ ಅವರಲ್ಲಿ ಓದಿನ ಆಸಕ್ತಿ, ಬಸವ ತತ್ತ್ವದ ಅರಿವು ಮೂಡಿಸುವುದಕ್ಕಾಗಿ ಪೂಜ್ಯ ಡಾ. ಬಸವಲಿಂಗ ಪಟ್ಟದ್ದೇವರು ವಚನ ಕಂಠಪಾಠ ಸ್ಪರ್ಧೆ ಏರ್ಪಡಿಸಿ ಅತಿ ಹೆಚ್ಚು ವಚನ ಹೇಳುವವರಿಗೆ ಹತ್ತು ಸಾವಿರ ನಗದು ಬಹುಮಾನ ನೀಡುತ್ತಾರೆ. ವಚನ ಕಂಠಪಾಠ ಸ್ಪರ್ಧೆಗಾಗಿ ಕರ್ನಾಟಕದಲ್ಲಿ ಇದು ಬಹುದೊಡ್ಡ ಮೊತ್ತವಾಗಿದೆ ಎಂದು ಹೇಳಬಹುದು ಮತ್ತು ಗೌರವ ಪ್ರಶಸ್ತಿಗಳು ಸಾಹಿತ್ಯ ಸೇರಿ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದವರನ್ನು ಗುರುತಿಸಿ ಹಿರೇಮಠ ಸಂಸ್ಥಾನ ಭಾಲ್ಕಿ ವತಿಯಿಂದ ಪ್ರತಿ ವರ್ಷ ಸನ್ಮಾನಿಸಿ ಪ್ರೋತ್ಸಾಹಿಸಲಾಗುತ್ತಿದೆ. ಅಂತಹವರಿಗೆ ಡಾ. ಚನ್ನಬಸವ ಪಟ್ಟದ್ದೇವರು ಪ್ರಶಸ್ತಿ ಪತ್ರ ರೂ. ೧೦,೦೦೦ ನಗದು ಪುರಸ್ಕಾರ ನೀಡಿ ಗೌರವಿಸಲಾಗುತ್ತದೆ. ಶ್ರೀಗಳು ಇಂತಹ ಅನೇಕ ಸಾಹಿತ್ಯ ಪರ ಕಾಯಕ ಮಾಡಿಕೊಂಡು ಬರುತ್ತಿದ್ದಾರೆ.

**ಶ್ರೀಗಳ ಕಾರ್ಯಕ್ಕೆ ಸಂದ ಪ್ರಶಸ್ತಿಗಳು :**

ಗುಲ್ಬರ್ಗಾ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪದವಿ, ರಮಣಶ್ರೀ ಶರಣ ಪ್ರಶಸ್ತಿ, ಸುವರ್ಣ ಕರ್ನಾಟಕ ಏಕೀಕರಣ ಪುರಸ್ಕಾರ, ಶ್ರೀ ಅಲ್ಲಮಪ್ರಭು ಸಿದ್ಧಸಂಸ್ಥಾನ ಮಠದಿಂದ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ೨೦೦೩, ಕನ್ನಡ ಪತ್ರಿಕೆ ವತಿಯಿಂದ ಸುವರ್ಣ ಕರ್ನಾಟಕ ರತ್ನ ಪ್ರಶಸ್ತಿ ೨೦೦೬, ಸುರಭಿ ಪ್ರಶಸ್ತಿ, ಬೀದರ ಜಿಲ್ಲೆಯ ನಾಗರಿಕ ಸಮಿತಿ ವತಿಯಿಂದ ಕಲ್ಯಾಣ ಬಸವಣ್ಣ ಪ್ರಶಸ್ತಿ, ಕರ್ನಾಟಕ ಸರಕಾರದ ವತಿಯಿಂದ ನೀಡುವ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಸೇರಿ ಹಲವು ಪ್ರಶಸ್ತಿಗಳು ದೊರಕಿವೆ ಹಾಗು ಇನ್ನೂ ಅನೇಕ ಸಂಘ–ಸಂಸ್ಥೆ, ಮಠಗಳಿಂದ ಪ್ರಶಸ್ತಿ, ಸನ್ಮಾನಗಳು ಶ್ರೀಗಳ ಕಾರ್ಯಕ್ಕೆ ಸಂದಿವೆ.

**ಅಭಿನಂದನೀಯ ನುಡಿ :**

ಮಠಗಳೆಂದರೆ ಕೇವಲ ಧರ್ಮ ಪ್ರಚಾರಕ್ಕೆ ಮೀಸಲು ಎನ್ನುವ ಇಂದಿನ ದಿನಗಳಲ್ಲಿ ಪೂಜ್ಯಶ್ರೀ ಡಾ. ಬಸವಲಿಂಗ ಪಟ್ಟದ್ದೇವರು ಸಾಹಿತ್ಯಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕವಾಗಿ ಹಾಗು ಕನ್ನಡ ನಾಡು–ನುಡಿಯ ಸೇವೆ ಸಲ್ಲಿಸುವ ಜೊತೆಗೆ ಬಸವಧರ್ಮ ಪ್ರಸಾರ, ಪ್ರಚಾರ ಮಾಡುವ ಮೂಲಕ ಸಂಸ್ಥೆ ಅಡಿಯಲ್ಲಿ ಸುಮಾರು ಒಂದು ನೂರಕ್ಕೂ ಅಧಿಕವಾಗಿ ಗ್ರಂಥಗಳನ್ನು ಪ್ರಕಟಣೆ ಮಾಡಿ ಹೊರ ತಂದಿದ್ದಾರೆ. ಅನೇಕ ಶಾಲೆಗಳನ್ನು ಆರಂಭಿಸಿ ಕನ್ನಡ ಭಾಷೆಯನ್ನು ಗಟ್ಟಿಯಾಗಿ ಉಳಿಯಲು ಮತ್ತು ಹಳ್ಳಿಗಳಲ್ಲಿ ಕನ್ನಡ ಶಾಲೆಗಳನ್ನು ತೆರೆದು ಶೈಕ್ಷಣಿಕ ಅಭಿವೃದ್ಧಿಗೆ ಬದ್ರ ಬುನಾದಿಯನ್ನು ಹಾಕಿ ನೆರವಾಗಿದ್ದಾರೆ, ನೆರವಾಗುತ್ತಿದ್ದಾರೆ. ಹಾಗೆ ಹಿಂದುಳಿದ ಈ ಭಾಗದಲ್ಲಿ ಶಿಕ್ಷಣಕ್ಕೆ ಆದ್ಯತೆಯನ್ನು ನೀಡುತ್ತ ಶೈಕ್ಷಣಿಕ ಕ್ರಾಂತಿಯ ಮೂಲಕ ಈ ನಾಡಿನಲ್ಲಿ ಬದಲಾವಣೆ ಮಾಡುತ್ತಿದ್ದಾರೆ.

ಡಾ. ಬಸವಲಿಂಗ ಪಟ್ಟದ್ದೇವರ ಶೈಕ್ಷಣಿಕ, ಸಾಮಾಜಿಕ, ಸಾಹಿತ್ಯಿಕ ಸೇವೆಗಳನ್ನು ಗೌರವಿಸಿ ಮತ್ತು ಶ್ರೀಮಠದ ಎಲ್ಲಾ ಸಮಾನತೆ, ಸೌಹಾರ್ದತೆ ಸಂಕೇತದ ಪ್ರತಿಫಲದಿಂದ ಹಾಗು ಬಸವತತ್ತ್ವ ಪ್ರಸಾರ ಸೇವೆ ಸಾಧನೆಯ ಹಿನ್ನೆಲೆಯಲ್ಲಿ ಕರ್ನಾಟಕ ಘನ ಸರಕಾರ ೨೦೧೯–೨೦ ಸಾಲಿನ ಬಸವ ರಾಷ್ಟ್ರೀಯ ಪ್ರಶಸ್ತಿಗೆ ಪರಮ ಪೂಜ್ಯ ಬಸವಲಿಂಗ ಪಟ್ಟದ್ದೇವರನ್ನು ಆಯ್ಕೆ ಮಾಡಿರುವುದು ಸಮಸ್ತ ನಾಡಿನ ಬಸವ ಭಕ್ತರಿಗೆ ಹರ್ಷ ಉಂಟುಮಾಡಿದೆ. ಹಾಗಾಗಿ ಬಸವ ರಾಷ್ಟ್ರೀಯ ಪ್ರಶಸ್ತಿಗೆ ಭಾಜನರಾದ ಕನ್ನಡ ಜಂಗಮರು ಮಾತೃ ಹೃದಯಿಗಳು ಕಲ್ಯಾಣ ನಾಡಿನ ಬಸವ ಚೇತನರು ನಮ್ಮೆಲ್ಲರ ಬಾಳಿನ ಬೆಳಕಾಗಿರುವ ಪರಮಪೂಜ್ಯರು ಪಾವನ ಮೂರ್ತಿಗಳಾದ ಡಾ. ಬಸವಲಿಂಗ ಪಟ್ಟದ್ದೇವರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತಾ ಇವರ ಅನನ್ಯ ಸೇವೆ ಗುರುತಿಸಿ ಪ್ರಶಸ್ತಿ ನೀಡಿದ್ದಕ್ಕೆ ನಾಡಿನ ಮಹಾ ಜನತೆಯ ಪರವಾಗಿ ಕರ್ನಾಟಕ ಘನ ಸರಕಾರಕ್ಕೂ ಹಾರ್ದಿಕ ಅಭಿನಂದನೆಗಳು.

■■

# ಜೋಗುಳ ಪದಗಳಲ್ಲಿ ಚೆನ್ನಬಸವಣ್ಣನವರು

**● ಎಂ. ಎಂ. ಗೊರಚಿಕ್ಕನ್ನವರ**

ಶರಣರನ್ನು ನೆನೆಯುವ ಜನಪದರ ಆಚರಣೆಗಳನ್ನು ಗಮನಿಸುವಾಗ ಮಗುವಿಗೆ ನಾಮಕರಣ ಮಾಡುವ ಸಂದರ್ಭದಲ್ಲಿ ಹೇಳಲಾಗುವ ಜೋಗುಳ ಪದಗಳು ತಮ್ಮದೇಯಾದಂತಹ ಮಹತ್ವವನ್ನು ಹೊಂದಿರುವದನ್ನು ಕಾಣುತ್ತೇವೆ.ಇಲ್ಲಿ ಶರಣರ ಜೀವನ ವೃತ್ತಾಂತಗಳನ್ನು, ಅಪರೂಪದ ಘಟನೆಗಳನ್ನು ನೆನೆಯುವದನ್ನು ಕಾಣುತ್ತೇವೆ. ಈ ಬಗೆಯಲ್ಲಿ ಚೆನ್ನಬಸವಣ್ಣನವರಿಗೆ ಸಂಬಂಧಿಸಿದಂತೆ ಅನೇಕ ಜೋಗುಳಪದಗಳು ಪ್ರಚಲಿತದಲ್ಲಿರುವದನ್ನು ಗಮನಿಸಿದಾಗ ಶರಣ ಪರಂಪರೆಯ ಅನೇಕ ಸಂಗತಿಗಳು ಕಂಡುಬರುತ್ತವೆ. ಸಾಮಾನ್ಯವಾಗಿ ಜೋಗುಳಪದಗಳನ್ನು ದಿನನಿತ್ಯಹಾಡುವ ಸಂಪ್ರದಾಯ ಇಲ್ಲವೆನ್ನಬಹುದು. ಆದರೆ ಅದರಲ್ಲಿನ ಆಯ್ದ ನುಡಿಗಳನ್ನು ಜನಪದರು ಕುಟ್ಟುವಾಗ, ಬೀಸುವಾಗ, ಹಂತಿ ಹೊಡೆಯುವಾಗ ಹಾಡುಗಳ ರೂಪದಲ್ಲಿ ಹೇಳುತ್ತಿದ್ದರು. ಬದಲಾದ ಕಾಲಘಟ್ಟದಲ್ಲಿ ಇಂದು ಜನಪದ ಹಾಡುಗಳು ನೇಪಥ್ಯಕ್ಕೆ ಸರಿಯುತ್ತಿವೆ. ಜೋಗುಳ ಪದಗಳು ಗ್ರಾಮೀಣ ಭಾಗದಲ್ಲಿ ಇಂದು ಈ ಹಿಂದೆ ಕೇಳಿ ಬರುವಂತೆ ಸುದೀರ್ಘರೂಪದಲ್ಲಿ ಕೇಳಿಬರುತ್ತಿಲ್ಲ; ಅದಾಗ್ಯೂ ಕೂಡಾ ಜೋಗುಳ ಪದಗಳ ಅಸ್ತಿತ್ವವನ್ನು ಇಂದಿಗೂ ಕಾಣಬಹುದಾಗಿದೆ. ಈ ನೆಲೆಯಲ್ಲಿ ಶರಣರ ಬದುಕಿನ ಅನೇಕ ಸಂಗತಿಗಳನ್ನು ಜೋಗುಳ ಪದಗಳಿಂದ ತಿಳಿಯಬಹುದಾಗಿದೆ. ಶರಣರಿಗೆ ಸಂಭಂದಿಸಿದ ಅನೇಕ ಜೋಗುಳಪದಗಳಲ್ಲಿ ಅಕ್ಕನಾಗಮ್ಮ, ಚೆನ್ನಬಸವಣ್ಣನವರಿಗೆ ಸಂಬಂದಿಸಿದಂತೆ ಇರಲಾದ ಜೋಗುಳ ಪದಗಳ ಬಗ್ಗೆ ಗಮನಹರಿಸುವಾಗ ಇಲ್ಲಿನ ಸಂಗತಿಗಳನ್ನು ಕೇವಲ ಧಾರ್ಮಿಕ ಸಂಗತಿಗಳಾಗಿ, ಪವಾಡಗಳಾಗಿ, ವರ್ಣನೆಯ ಸಾಲುಗಳಾಗಿ, ಮೌಖಿಕ ಪರಂಪರೆಯ ನಂಬಿಕೆಗಳಾಗಿ ಅಷ್ಟೇ ಗಮನಹರಿಸದೆ ಹನ್ನೆರಡನೇ ಶತಮಾನದ ಕಾಲಗಟ್ಟದ ಶರಣರ ತತ್ವ ಆದರ್ಶಗಳಿಗೆ, ಅಂದಿನ ಸಮಾಜಮುಖಿ ಚಿಂತನೆಗಳಿಗೆ ಪೂರಕವಾಗಿ, ವಚನ ಸಾಹಿತ್ಯ ಹೇಳುವ ವೈಚಾರಿಕ ಅಂಶಗಳಿಗೆ ಪೂರಕವಾಗಿ ಗ್ರಹಿಸಿ ವಿಶ್ಲೇಷಿಸುವದು ಔಚಿತ್ಯಪೂರ್ಣವೆನಿಸುತ್ತದೆ.

**ಪ್ರಸಾದದ ಘಟನೆಗಳು**

ಚೆನ್ನಬಸವಣ್ಣನವರ ಜನನಕ್ಕೆ ಸಂಬಂಧಿಸಿದಂತೆ ಇರಲಾದ ಅನೇಕ ಐತಿಹ್ಯ, ದಂತಕಥೆ, ಪವಾಡಗಳನ್ನು ಗಮನಿಸುವಾಗ ನೈಜ ಘಟನೆಗಳಿಗಿಂತಲೂ ಅನೇಕ ಕಾಲ್ಪನಿಕ ಘಟನೆಗಳು ಬೀರಿರುವ ಪ್ರಭಾವ ಅಧಿಕವಾಗಿ ಕಂಡುಬರುತ್ತದೆ. ಜನಪದರು ಹೇಳಿಕೊಂಡುಬಂದಿರುವಂತೆ ಅನೇಕ ಶಿವಕವಿಗಳು, ಗ್ರಂಥಕರ್ತರು ಈ ಬಗ್ಗೆ ವಿವರಿಸಿರುವದನ್ನು ಕಾಣುತ್ತೇವೆ. ಭೀಮ ಕವಿಯು ಬಸವ ಪುರಾಣದಲ್ಲಿ ಹೇಳಿರುವದನ್ನು ಗಮನಿಸುವಾಗ ನಾಗಾಲಾಂಬೆಯ ಗರ್ಭದಲ್ಲಿ ಚೆನ್ನಬಸವಣ್ಣನವರು ಜನಿಸಿ ಬಂದರೆಂದು ಹೇಳಿರುವದನ್ನು ಕಾಣುತ್ತೇವೆ.

**ತರುಣಿ ನಾಂಗಾಂಬೆಯ ಸುಗರ್ಭದಿ**
**ನಿರುಪಮಜ್ಞಾನ ಸ್ವರೂಪಂ**
**ಪರಮಕಾರಣ ಚೆನ್ನಬಸವಂ ಉದ್ಭವಗೈದಂ**

ಹೀಗೆ ಚೆನ್ನಬಸವಣ್ಣನವರ ಜನನದ ಬಗ್ಗೆ ಭಿಮಕವಿ ತಿಳಿಸುವಲ್ಲಿ ಹೇಳಿರುವ ಸಾಲುಗಳು ಗಮನಾರ್ಹವಾಗಿ ಕಂಡುಬರುತ್ತವೆ. ಅದೇರೀತಿ ಪ್ರಭುಲಿಂಗ ಲೀಲೆಯ ಗತಿ ೯ ಪದ್ಯ ೨೩೩ ರಲ್ಲಿ ಉಲ್ಲೇಖವಾದಂತೆ;

**ಮಿಕ್ಕು ಭಕ್ತಿಯಲೊಂದು ದಿವಸದ**
**ಲಕ್ಕ ನಾಗಾಯಿಗಳು ಬಸವನ**
**ಒಕ್ಕು ಮಿಕ್ಕ ಮಹಾಪ್ರಸಾದವನುಣಲು ಕ್ಷಣದೊಳಗೆ**
**ತಕ್ಕ ಶಿವತತ್ವ ಸ್ವರೂಪವೆ**
**ಸಿಕ್ಕಿ ಬೆಳದುದಯಿಸಲು ಕಾಣುತ**
**ಲಕ್ಕನಾ ಬಸವೇಶ್ವರನ ಹೆಸರಿಟ್ಟಳಾ ಶಿಶುಗೆ**

ಅದೇರಿತಿ ವಿರೂಪಾಕ್ಷ ಪಂಡಿತ, ಲಕ್ಕಣ್ಣ ದಂಡೇಶ ಮುಂತಾದವರು ಚೆನ್ನಬಸವಣ್ಣನವರ ಜೀವನವೃತ್ತಾಂತದ ಕುರಿತು ಪವಾಡಗಳನ್ನು ಪ್ರಸಾದದ ಕುರಿತು ಕೆಲವು ಸಂಗತಿಗಳನ್ನು ಹೇಳಿರುವದನ್ನು ಕಾಣುತ್ತೇವೆ. ಆದರೆ ಸಿಂಗಿರಾಜ ಕವಿ ಚೆನ್ನ ಬಸವಣ್ಣನವರ ತಂದೆ ಶಿವದೇವ, ಶಿವಸ್ವಾಮಿ

**ಸಂಶೋಧನಾ ವಿದ್ಯಾರ್ಥಿ ಕನ್ನಡ ವಿಶ್ವವಿದ್ಯಾಲಯ ಹಂಪಿ, ತಾ. ಹುನಗುಂದ ಜಿ. ಬಾಗಲಕೋಟ ಮೊ: ೯೪೮೨೮೭೬೦೮**

ಎಂದು ಹೇಳಿರುವದರಿಂದ ಸಿಂಗಿರಾಜ ಕವಿ ಇತರರಿಗಿಂತ ಐತಿಹಾಸಿಕ ನಿಲುವಿನ ವ್ಯಕ್ತಿಯಾಗಿ ಕಾಣುತ್ತಾನೆ.

## ಫ್ಲೀಟರು ಸಂಗ್ರಹಿಸಿದ ಅಕ್ಕನಾಗಮ್ಮನ ಜೋಗುಳಪದ

ಜಾನ್ ಫೆಯ್ತಫುಲ್ ಫ್ಲೀಟರವರು ಕೇವಲ ಲಾವಣಿ ಪದಗಳನ್ನಷ್ಟೇ ಸಂಗ್ರಹ ಮಾಡದೆ ಜನಪದ ಸಾಹಿತ್ಯದ ಅನೇಕ ಹಾಡುಗಳನ್ನು ಸಂಗ್ರಹಿಸಿದ್ದರು ಎಂಬುದಕ್ಕೆ ಅವರ ಅಪ್ರಕಟಿತ ಹಸ್ತಪ್ರತಿಯಲ್ಲಿ ಇರಲಾಗಿದ್ದ ಅಕ್ಕನಾಗಮ್ಮನ ಜೋಗುಳ ಪದ ಒಂದಾಗಿದೆ. ಕ್ಯಾತನಹಳ್ಳಿ ರಾಮಣ್ಣನವರು ಸಂಪಾದಿಸಿದ ಫ್ಲೀಟರು ಸಂಗ್ರಹಿಸಿದ ಸಮಗ್ರಲಾವಣಿಗಳು ಎಂಬ ಕೃತಿಯಲ್ಲಿನ ಜೋಗುಳ ಪದಗಳು ಭಾಗದಲ್ಲಿ ಸುದೀರ್ಘವಾದ ಜೋಗುಳಪದ ಇರಲಾಗಿದೆ.ಈ ಪದವನ್ನು ಗಮನಿಸುವಾಗ ಅಕ್ಕನಾಗಮ್ಮನವರು ಪುತ್ರಸಂತಾನ ಪಡೆದ ಬಗೆ, ಪ್ರಸಾದದ ಪ್ರಸ್ತಾಪ, ಅಂದಿನ ಸಾಮಾಜಿಕ ಜೀವನ,ಧಾರ್ಮಿಕ ಸಂಸ್ಕಾರ, ನಾಮಕರಣದ ಕುರಿತಾದ ವಿವರಣೆಗಳು ಕಂಡುಬರುತ್ತವೆ.

**ಜೋ ಯಂನಿರಿ ಶರಣ ಸತಿಯರು ಕೂಡಿ।**
**ಜೋ ಯಂದು ಪಾಡಿರಿ ನಲಿನಲಿದಾಡಿ।**
**ತಾಯಿ ನಾಗವ್ವನ ಮಗನ ಮುದ್ದಾಡಿ।**
**ಜೋ ಯಂದು ಚಂನಬಸವನ ಕೊಂಡಾಡಿ ಜೋಜೊ॥ಪ॥**

**ಶರಣ ಕಕ್ಕೈನವರ ವರಪ್ರಸಾದವನು।**
**ಯರಡಾರು ವರುಷವ ಕಾಯ್ದುಕೊಂಡಿಹನು।**
**ದೊರಕಲು ಮನದೊಳು ಹರುಷ ತಾಳಿಹನು।**
**ಭರದಿಂದ ಕೈಕೊಂಡು ಬಂದ ಬಸವನು। ॥೧॥**

**ಮಿಕ್ಕ ಪ್ರಸಾದವ ಬಸವಂಣ ತಂದು।**
**ಅಕ್ಕ ನಾಗವ್ವಗೆ ಕೊಟ್ಟರು ಬಂದು।**
**ವುಕ್ಕುತ ನಾಗಾಯಿ ಶಿವಶಿವ ಯಂದು।**
**ಮುಕ್ಕಂಣ ಗತಿ ಯಂದು ಸಲಿಸಿದಳಂದು ಜೋಜೊ। ॥೨॥**

**ಪ್ರಸಾದ ಸಲಿಸಲು ಅಕ್ಕನಾಗುವಿಗೆ।**
**ಸೂಸಲ ವಡಲೊಳು ನಿಂತಿತು ಬ್ಯಾಗ।**
**ಆಸರಿಕೆ ಬ್ಯಾಸರಿಕೆ ಮನದೊಳಗೀಗ**
**ಮಾಸ ಮಾಸಕೆ ದೇಹ ಪಲ್ಲಟವಾಗೆ ಜೋಜೊ। ॥೩॥**

ಪ್ರಸ್ತುತ ಈ ಜೋಗುಳ ಪದದ ಆಯ್ದ ಭಾಗಗಳನ್ನು ಗಮನಿಸುವಾಗ ಶರಣರಾದ ಕಕ್ಕಯ್ಯನವರ ವರ ಪ್ರಸಾದವನ್ನು ಬಸವಣ್ಣನವರು ತಂದರು,ಅದನ್ನು ತಮ್ಮ ಅಕ್ಕನಿಗೆ ಕೊಡಲಾಗಿ ಅದನ್ನು ಸೇವಿಸಿದ ಫಲವಾಗಿ ನಾಗಮ್ಮನವರು ಗರ್ಭವತಿಯಾದರೆಂದು ಜೋಗುಳ ಪದದ ಸಾಲುಗಳು ಹೇಳುವದನ್ನು ಕಾಣುತ್ತೇವೆ.ಇದೇ ಸಂಗ್ರಹದಲ್ಲಿರುವ ಕೆಲವು ಸಾಲುಗಳನ್ನು ಗಮನಿಸುವದಾದರೆ..

**ಬಸವಣ ದೊಡ್ಡಾತ ಯಲ್ಲಾ ಲೋಕದಲಿ।**
**ಬಸುರಾದಳವರಕ್ಕ ಗಂಡನಿಲ್ಲದಲೆ।**
**ಯಸವ ಬೂದಿ ತಂತ್ರಾದಿ ಶಾಸ್ತ್ರಗಳು।**
**ವಸುಧೀಶ ಕೇಳಯ್ಯ ಕರಸಿ ಬ್ಯಾಗದಲಿ ಜೋಜೊ।**

**ಗಂಡನಿಲ್ಲದ ಬಾಲಿ ಬಸುರಾದಳಲ್ಲ।**
**ಪಿಂಡ ಶಿಸವು ತಾನು ಮಾತಾಡುದಲ್ಲ।**
**ಮಿಂಡ ಜಂಗಮರು ಮಠದೊಳು ಸೊಲ್ಲ।**
**ಭಂಡಾಟ ಆಗುದು ಶಿವ ತಾನೆ ಬಲ್ಲ ಜೋಜೊ ।**

ನಾಗಲಾಂಬಿಕೆಗೆ ಅನೇಕ ತರಹದ ಪ್ರಶ್ನೆಗಳು ಸಭೆಯಲ್ಲಿ ಕೇಳಿಬಂದಿರುವಂತೆ ಕಾಣುತ್ತದೆ.ಇಲ್ಲಿ ಜನಪದರು ಪದ್ಯದ ಸ್ವಾರಸ್ಯ ಹೆಚ್ಚಿಸಲು ಕೆಲವು ಸಾಲುಗಳನ್ನು ಹೇಳಿರುವ ಸಾಧ್ಯತೆಗಳು ಇರಲಾಗಿವೆ.ದೈವದ ವರ್ಣನೆಯ ಕಾರಣಕ್ಕೂ ಕೂಡಾ ಕೆಲವು ಸಂಗತಿಗಳು ಸೇರಿರುವದನ್ನು ಕಾಣುತ್ತೇವೆ.ಪ್ರಾದೇಶಿಕ ನೆಲೆಯಲ್ಲಿ ಈ ಬಗೆಯ ಜನಪದ ಜೋಗುಳ ಪದಗಳಲ್ಲಿ ವಿಭಿನ್ನ ಬಗೆಯ ವಿವರಣೆಗಳ ಸಾಲುಗಳನ್ನು ಗಮನಿಸುತ್ತೇವೆ. ಈ ಸಂಗ್ರಹದ ಜೋಗುಳ ಪದದ ಒಟ್ಟು ವಿವರಣೆ ನೋಡುವಾಗ ಪ್ರಸವ ಪೂರ್ವದಲ್ಲಿ ತಾಯಿಯೊರ್ವಳು ಪಡುವ ಯಾತನೆ,ಮಗು ಜನಿಸಿದಾಗ ಆಚರಿಸಲ್ಪಡುವ ಸಂಭ್ರಮದ ಸಂಗತಿಗಳು, ಸೂಲಗಿತ್ತಿಯ ಪಾತ್ರ, ಬಾಣಂತಿಯ ಆರೈಕೆ, ನಾಮಕರಣ, ಸೇರಿದಂತೆ ಸಮಕಾಲೀನ ಶರಣ ಶರಣೆಯರ ಹೆಸರುಗಳ ಉಲ್ಲೇಖ ನೀಡುವದರಿಂದ ಈ ಬಗೆಯ ಜೋಗುಳ ಪದಗಳು ಗಮನಾರ್ಹ ಎನಿಸುತ್ತವೆ. ಇಲ್ಲಿ ಬಾಲಕ ಚೆನ್ನಬಸವಣ್ಣನ ವರ್ಣನೆ ವಿಶೇಷವಾಗಿ ಮೂಡಿಬಂದಿರುವದನ್ನು ಕಾಣುತ್ತೇವೆ.

ಡಾ. ವೈ. ಎ. ದೇವಋಷಿಯವರು ಸುಡಗಾಡು ಸಿದ್ಧರು ಒಂದು ಸಾಂಸ್ಕೃತಿಕ ಅಧ್ಯಯನ ಎಂಬ ಕೃತಿಯಲ್ಲಿ ಕೂಡಾ ಕೆಲವು ಜೋಗುಳ ಪದಗಳನ್ನು ಯಥಾವತ್ತಾಗಿ ಸಂಗ್ರಹಿಸುವ ಪ್ರಯತ್ನ ಮಾಡಿರುವರು ಈ ಕೃತಿಯಲ್ಲಿನ ಜೋಗುಳಪದದ ಆಯ್ದ ಭಾಗಗಳನ್ನು ಗಮನಿಸುವದಾದರೆ..

**ಕಕ್ಕೈನ ಮನಿಯೊಳು ಮಿಕ್ಕುಂಡ ಪುರುಷದ**
**ಹತ್ತ ತಿಂಗಳ ಸಾಧಿಸಿ ಬಸವ**
**ಆಗುವಲ್ಲದ ಸೆರಗ ಭೇದಿಸಿ ಮರಿಮಾಡಿ**
**ಆಗ ಸಲುಸಾಳೆ ಅಕ್ಕನಾಗಮ್ಮ ॥ ಜೋ॥**

**ಎಲ್ಲರ ಕೂಡಿ ದಂಡುಳ ಛಲ ಮಾಡಿ**
**ದಂಡುಳ ಅಣ್ಣನ ತಂಗಿ ಬಸುರಾಗಿ**
**ಭುವನ ಮಂಡಲದೊಳಗೆ ಭವ ಸುದ್ದಿ ಹರುಡಾವೆ**
**ಗಂಡನಿಲ್ಲದೆ ಬಾಲೆ ಗರ್ಭಾಗ್ಯಾಳೆಂದು ॥ ಜೋ॥**

**ಬ್ಯಾನಿ ಎದ್ದಾವಂತ ನಾರಿಯರ ಕೂಗಿ**
**ಕೂ ಕುಡಗಿಲ ಬೇವು ಬ್ಯಾಗದಲಿ ತರಸಿ**
**ಸೂಗನಾರಿ ಎಂಬ ಸೂಲಗಿತ್ತಿಯನ್ನು ಕರಿಸಿ**
**ಚಂದರ ಮಗನ ತಾ ಹಡದಾಳ ॥ಜೋ॥**

**ಬಾಲ ಹುಟ್ಯಾನಂತ ಸುದ್ದಿ ಕೇಳಿ**
**ಬಾಗಿಲ ಮ್ಯಾಲ ಇಟ್ಟಾರೆ ದಿವಿಗೆ**
**ಊರ ಎಲ್ಲ ತಿರುಗಿ ಹಾರಯ್ಯನ ಕರಿಸಿ**
**ನಿಲದ ಹೊತ್ತಿಗೆ ತೆಗಸ್ಯಾರೆ ॥ಜೋ॥**

**ಹೊಳಕುಂದ ಹಚ್ಚಿದ ಹಲಗಿಯ ತೊಟ್ಟಿಲ ತಂದು**
**ಗಳಂಗರು ನಿಲವಿದರಯ್ಯ ನಾಲ್ಕು ಮಾಣಿಕ್ಯ ಹಚ್ಚಿದ**
**ತೊಟ್ಟಿಲ ತಂದು ಗಳಂಗರು ನಿಲವಿದರಯ್ಯಾ ॥ಜೋ॥**

**ಕಾವಿ ವಸ್ತ್ರದವರೆ ಕಾವಿ ಪಾವಡದವರೇ**
**ಕಾಳಮ್ಮನ ಮನಿಯೊಳು ಶಿವಶರಣರೇ**
**ಕಾಳಮ್ಮನ ಮನಿಯೊಳು ಶರಣ ಶಿವಭಕ್ತರೆ**
**ನೀವು ಬಾಗಿಣಕ ಬರಬೇಕ್ರಿ ॥ಜೋ॥**

ಇಲ್ಲಿಯು ಕೂಡಾ ಕಕ್ಕಯ್ಯನ ಮನೆಯ ಪ್ರಸಾದದಿಂದ ಅಕ್ಕನಾಗಮ್ಮ ಗರ್ಭವತಿಯಾದ ಬಗ್ಗೆ ಹಾಗೂ ಆಕೆಯನ್ನು ಪರಿ ಪರಿಯಾಗಿ ಪ್ರಶ್ನಿಸುವ ಅಂಶಗಳನ್ನು ಸೇರಿದಂತೆ ಬಾಲಕನ ಜನನದ ಬಗ್ಗೆ ವಿವರಣಾಂಶಗಳನ್ನು ಈ ಜೋಗುಳ ಪದದಲ್ಲಿ ಕಾಣುತ್ತೇವೆ. ಸುಡುಗಾಡು ಸಿದ್ಧರ ಸಾಹಿತ್ಯದ ಭಾಗವಾಗಿ ಈ ಜೋಗುಳಪದ ಸಂಗ್ರಹಗೊಂಡಿದ್ದರಿಂದ ಇಲ್ಲಿಯ ಕೆಲವು ಅಂಶಗಳು ಇತರ ಕಡೆಗಳಲ್ಲಿ ಕಂಡುಬರುವ ಜೋಗುಳ ಪದಗಳಿಗಿಂತ ಸ್ವಲ್ಪ ಭಿನ್ನರೂಪ ಎನಿಸುವ ಸಾಲುಗಳು ಹೊಂದಿರುವುದು ಕಂಡುಬರುತ್ತವೆ. ಈ ಬಗೆಯಲ್ಲಿ ಅವರ ಆಚರಣೆಯ ಕೆಲಸಂಗತಿಗಳನ್ನು ಈ ಜೋಗುಳದ ಪದದಲ್ಲಿ ಹೇಳಿರುವದನ್ನು ಗಮನಿಸುವಾಗ ಮಕ್ಕಳು ಜನಿಸಿದಾಗ ಬಾಗಿಲ ಮೇಲೆ ದೀಪ ಹಚ್ಚಿಡುವ ಪದ್ಧತಿ, ನೀಲದ ಹೊತ್ತಿಗೆ ತೆಗೆಸಿ ಪಂಚಾಂಗ ಕೇಳುವ ಪದ್ಧತಿ ಮುಂತಾದ ಅಂಶಗಳು ಈ ಜನಾಂಗದ ಮಹಿಳೆಯರ ಕಣ್ಣಿಗೆ ಬಿದ್ದಿರುವಂತೆ ಜೋಗುಳದ ಹಾಡಿನಲ್ಲಿ ಸೇರಿಸಿ ಹೇಳಿರುವದನ್ನು ಗಮನಿಸುತ್ತೇವೆ. ತೊಟ್ಟಿಲಿನ ಕುರಿತಾದ ವಿವರಣೆ ಈ ಜೋಗುಳಪದದಲ್ಲಿ ವಿಶೇಷವಾಗಿ ಮೂಡಿಬರಲಾಗಿದೆ.

ಈ ಬಗೆಯ ಜನಪದ ಜೋಗುಳಪದಗಳು ಪ್ರಕಟಣೆಯಲ್ಲಿ ಮೂಡಿಬಂದಿರುವದನ್ನು ಕಾಣುವಂತೆ ಇಂದಿಗೂ ಕೂಡಾ ಮೌಖಿಕ ಪರಂಪರೆಯಲ್ಲಿ ಉಳಿದಿರುವದನ್ನು ಕಾಣುತ್ತೇವೆ. ಉತ್ತರಕರ್ನಾಟಕದ ಬಹುತೇಕ ಹಳ್ಳಿಗಳಲ್ಲಿ ಈ ಬಗೆಯ ಹಾಡುಗಳು ಇಂದಿಗೂ ಕೇಳಿಬರುತ್ತವೆ. ಕೂಡಲಸಂಗಮದ ಮಾತೋಶ್ರೀ ಶ್ರೀಮತಿ ಕಸ್ತೂರಿಬಾಯಿ ಮಲ್ಲಪ್ಪ ಗೊರಚಿಕ್ಕನವರ ವಯಸ್ಸು (೪೫) ಇವರಿಂದ ಕೇಳಿ ಸಂಗ್ರಹಿಸಲಾದ ಜನಪದ ಹಾಡಿನ ಆಯ್ದ ಭಾಗಗಳನ್ನು ಗಮನಿಸುವಾಗ ಕೂಡಾ ಶರಣಪರಂಪರೆಯ ಅನೇಕ ಸಂಗತಿಗಳು ಕಂಡುಬರುತ್ತವೆ. ಇವರಿಂದ ಹಾಡಿನ ಆಯ್ದ ಭಾಗಗಳನ್ನು ಸಂಗ್ರಹಿಸುವಾಗ ತಿಳಿದುಬಂದ ಮಾಹಿತಿ ಪ್ರಕಾರ ಈ ಬಗೆಯ ಹಾಡುಗಳನ್ನು ತಮ್ಮ ಬಾಲ್ಯದಿಂದಲೂ ಕೇಳುತ್ತಾ ಬರಲಾಗಿದ್ದು, ಬಸವಜನ್ಮ ಭೂಮಿ ಬಸವನ ಬಾಗೇವಾಡಿ ಇಂಗಳೇಶ್ವರದ ಸಮೀಪದಲ್ಲಿ ಇರುವ ಹೆಬ್ಬಾಳ ಗ್ರಾಮದ ಅನೇಕ ಹಿರಿಯ ತಾಯಂದಿರು ವಿವಿಧಸಮಾರಂಭಗಳಲ್ಲಿ ಶರಣರ ಕುರಿತಾದ ಅನೇಕ ಹಾಡುಗಳನ್ನು ಹೇಳುತ್ತಿದ್ದರು, ಆ ಹಾಡುಗಳು ಸುದೀರ್ಘ ಸ್ವರೂಪದ ಹಾಡುಗಳಾಗಿರುತ್ತಿದ್ದವು. ಇಂತಹ ಹಾಡುಗಳನ್ನು ಹೇಳುವ, ಹಾಗೂ ಕೇಳುವ ಪ್ರಸಂಗಗಳು ಇಂದು ಕಣ್ಮರೆಯಾಗುತ್ತಿದ್ದು ಆಗಾಗ ಬಳಕೆಯಲ್ಲಿರದ ಕಾರಣಕ್ಕೆ ಕೆಲವು ಸಾಲುಗಳು ಮಾತ್ರ ನೆನಪಿನಾಳದಲ್ಲಿ ಉಳಿದಿವೆ, ಕೆಲವು ಮರೆತು ಹೋಗಿವೆ ಎಂದು ತಿಳಿಸುತ್ತಾ, ಅಕ್ಕನಾಗಮ್ಮನವರ ಬಗ್ಗೆ ಹಾಗೂ ಚೆನ್ನಬಸವಣ್ಣನವರ ಜೀವನದ ಬಗ್ಗೆ ತಿಳಿಸುವ ಹಾಡಿನ ಆಯ್ದ ಭಾಗಗಳನ್ನು ಹೇಳಿದಾಗ ಅಕ್ಷರರೂಪಕ್ಕೆ ತರುವ ಪ್ರಯತ್ನ ಮಾಡಲಾಗಿ ಅಪರೂಪದ ಸಾಲುಗಳು ಸಂಗ್ರಹಗೊಂಡವು. ಗ್ರಾಮೀಣ ಪರಿಸರದಲ್ಲಿ ಜನಪದರು ಶರಣರನ್ನು ಕಾಣುವ ಬಗೆ ಸೇರಿದಂತೆ ,ಅಕ್ಕನಾಗಮ್ಮ, ಚೆನ್ನಬಸವಣ್ಣನವರು ಪೂಜ್ಯರಾಗುವ ಸಾರವನ್ನು ಈ ಪದಗಳಲ್ಲಿ ಗುರುತಿಸ ಬಹುದಾಗಿದೆ.

**ಅಪ್ಪಪ್ಪ ಶರಣರು ಮಕ್ಕಳ ಕೇಳಲು ಹೋಗಿ**
**ಇಪ್ಪ ಇಪ್ಪತ್ತು ವರ್ಷ ತಪಸೇವೆ**
**ಇಪ್ಪ ಇಪ್ಪತ್ತು ವರ್ಷ ತಪಸೇವೆ ಮಾಡಿದರೆ**
**ಮಕ್ಕಳ ಸಂತಾನ ಜಯ-ಜಯ ಕೋಲು ಕೋಲ।**

**ಕಕ್ಕಯ್ಯನ ಮನೆಯಾಗ ಮಿಕ್ಕಿದ ಪ್ರಸಾದ**
**ಅಣ್ಣ ಬಸವಣ್ಣ ಅಲೆದಾಡಿ**
**ಕಕ್ಕಯ್ಯನ ಮನೆಯ ಕದಹಾಕಿ**
**ಅನ್ನದಗಳು ಇರುವೆ ಬಾಯಿಲಿ ತಂದು**
**ದೋತರದ ಚುಂಗಲ್ಲಿ ಪ್ರಸಾದ ಕಟ್ಟಿ**
**ಮಡದಿ ನೀಲಮ್ಮಗ ತರಲು ಕೋಲು ಕೋಲ।**

**ಅಂಗಿರುಂಬಾಲು ಕಳೆದು ಅಕ್ಕನ ಕೈಯಲಿ ಕೊಟ್ಟು**
**ಮನೆಯಾನ ಮಡದಿ ನೀರ ಬೇರಸ**
**ಹೊನ್ನ ಕಟ್ಟಲಾರದ ಅಣ್ಣ ಚಿನ್ನ ಕಟ್ಟಲಾರದ ಅಣ್ಣ**
**ಏನ್ ಕಟ್ಯಾನ ನಮ್ಮಣ್ಣ ಬಸವಣ್ಣ**
**ಲಿಂಗ ಪೂಜೆ ಮಾಡಿ ಸಲಿಸ್ಯಾಳ ನಾಗಮ್ಮ**
**ಪ್ರಾದದ ಫಲದಿಂದ ಗರ್ಭವತಿ ತಾನಾಗಿ ಕೋಲು ಕೋಲ।**

**ಓಣ್ಯಾನ ಅವ್ವಗಳೇ ಓಣ್ಯಾನ ಅಕ್ಕಗೊಳೆ**
**ಕೇಳಿರಿ ನಮ್ಮ ಮನೆ ಸುದ್ದಿ**
**ಕೇಳಿರಿ ಕೇಳಿರಿ ಮನೆಯಾನ ಹೊಸ ಸುದ್ದಿ**
**ಅಣ್ಣಾನ ತಂಗಿ ಬಸರಾಗಿ**
**ಶರಣ ಶರಣರು ಕೂಡಿ ಕಟ್ಟಿಗೆ ನಾಗಮ್ಮನ ಕರಸ್ಯಾರ**
**ಡಬ್ಬೆಣ್ಣಿ ಕಾಯಿಸಿ ಕೇಳ್ಯಾರ**
**ಯಾರಿಗಿ ಬಸರಾದಿ ತಂಗಿ ನಾಗಮ್ಮ ಕೋಲು ಕೋಲ।**

**ಅನ್ಯದೊಳಗ ಇಲ್ಲರಿ..ಪುಣ್ಯದೊಳಗ ಇಲ್ಲರಿ**
**ಕೈಲಾಸದ ಬಸವ ತಾ ಕೊಟ್ಟ**
**ಕೈಯಾಗ ರುದ್ರಾಕ್ಷೀ ಕೊಳ್ಳಾಗ ಜಪಮಣಿ**
**ಸಿಟ್ಟಿಲಿ ಚೆನ್ನಬಸವ ಕಿವಿಯಾಗ ಹಾಯ್ದು ಸಿಡಿದು ಬಿದ್ದ ಕೋಲು ಕೋಲ।**

**ಪಾಪಿಲ್ಲದ ಪಿಂಡ ಚೆನ್ನಬಸವ**
**ಕುಂತೆಲ್ಲಾ ಜನರು ಕೈಮುಗಿದು**
**ನಿಂತೆಲ್ಲಾ ಜನರು ಕೈ ಮುಗಿದು**
**ಇಲ್ಲಿಗೆ ಶರಣರ ಪದ ಮುಗಿದು ಕೋಲು ಕೋಲ।**

ಈ ಬಗೆಯಲ್ಲಿ ಶರಣರ ಕುರಿತಾಗಿ ಅನೇಕ ಬಗೆಯ ಐತಿಹ್ಯ, ಜನಪದ ನೆಲೆಯ ಹಾಡುಗಳು ಪ್ರಚಲಿತದಲ್ಲಿರುವದನ್ನು ಗಮನಿಸುವಾಗ ಒಂದು ಸಂಗತಿ ಸುತ್ತ ಹೇಗೆ ಭಿನ್ನ ಆಲೋಚನೆಯ ಅಭಿಪ್ರಾಯಗಳು ಹುಟ್ಟಿಕೊಳ್ಳಬಲ್ಲವು ಎಂಬುದನ್ನು ತಿಳಿಯಬಹುದಾಗಿದೆ. ಇಲ್ಲಿನ ಕೆಲವು ಸಾಲುಗಳು ಶರಣಪರಂಪರೆಯ ನಿಲುವುಗಳನ್ನು ಪ್ರತಿನಿಧಿಸುತ್ತವೆ.ಐತಿಹಾಸಿಕ ಗೊಂದಲವೆನಿಸುವ ಪ್ರಶ್ನೆಗಳಿಗೆ ಉತ್ತರದೊರಕುವ ಸಾಧ್ಯತೆಗಳು ಇರಲಾಗಿವೆ ಎನ್ನಬಹುದು. ಇಲ್ಲಿನ ಒಂದು ಸಾಲು ಹೊನ್ನ ಕಟ್ಟಲಾರದ ಅಣ್ಣ ಚಿನ್ನ ಕಟ್ಟಲಾರದ ಅಣ್ಣ ಎಂಬ ಸಾಲು ಬಸವಣ್ಣನವರ ನಿಲುವುಗಳನ್ನು ಅಸಂಗ್ರಹ ಪ್ರವೃತ್ತಿಯ ಚಿಂತನೆಗಳನ್ನು ತಿಳಿಸುತ್ತದೆ. ಈ ಬಗೆಯಲ್ಲಿ ಜನಪದ ಸಾಹಿತ್ಯದ ಸೂಕ್ಷ್ಮತೆಗಳನ್ನು ಗ್ರಹಿಸುವದು ಅವಶ್ಯಕ ಎನಿಸುತ್ತದೆ. ಶರಣರ ಸುತ್ತಲೂ ದೈವತ್ವದ ಸಂಗತಿಗಳನ್ನು ಹೆಣೆಯಲು ಜನಪದರು ಬಳಸುವ ದೃಷ್ಟಾಂತಗಳು, ಉಪಮೇಯಗಳು, ವರ್ಣನೆಗಳು ಕೂಡಾ ಕೆಲವೊಮ್ಮೆ ಹೊಸ ಹೊಸ ಆಲೋಚನೆಗಳತ್ತ ಮುಖಮಾಡಲು ಸಹಾಯಕ ಎನಿಸುತ್ತವೆ.

ಶರಣರ ಕುರಿತಾಗಿ ಅನೇಕ ಬಗೆಯ ಐತಿಹ್ಯ, ಕಥನಗಳು, ಮೌಖಿಕ ಪರಂಪರೆಯ ಹೇಳಿಕೆಗಳು ಇರಲಾಗಿದ್ದು ಇಲ್ಲಿನ ಕೆಲವು ಸಂಗತಿಗಳನ್ನು ಐತಿಹಾಸಿಕವಾಗಿ ವಿಶ್ಲೇಷಿಸುವ ಅವಶ್ಯಕತೆ ಇರಲಾಗಿದೆ.ಪ್ರಸ್ತುತ ಪ್ರಸಾದದ ಕುರಿತಾಗಿ ಸಾಗಿಬಂದಿರುವ ಹಾಡುಗಳನ್ನು, ವಿಶೇಷವಾಗಿ ಇಲ್ಲಿ ಉಲ್ಲೇಖಿಸಲಾದ ಜೋಗುಳ ಪದಗಳ ಹಿನ್ನಲೆಯಲ್ಲಿ ಹೇಳುವಾಗ ಇಲ್ಲಿ ಕೆಲವು ಸಂಗತಿಗಳನ್ನು ವೈಭವೀಕರಣ ಮಾಡಿರುವದನ್ನು, ಸಂಪ್ರದಾಯದ ಸಂಗತಿಗಳ ಸುತ್ತ ಹಾಡುಗಳು ರಚನೆಗೊಂಡಿರುವದನ್ನು ಕಾಣುತ್ತೇವೆ. ಜನಪದರ ಸೃಜನಶೀಲತೆಯು ಕೆಲವೊಮ್ಮೆ ನಂಬಲಸಾಧ್ಯ ಎನಿಸುವ ಅಂಶಗಳನ್ನು ಪದಗಳಲ್ಲಿ ಉಲ್ಲೇಖಿಸಿರುವದನ್ನು ಕಾಣುತ್ತೇವೆ. ಈ ಬಗೆಯಲ್ಲಿ ಇಂದಿಗೂ ಕೂಡಾ ಅನೇಕ ಕಡೆಗಳಲ್ಲಿ ಹಲವಾರು ವರ್ಷಗಳಿಂದ ಮಕ್ಕಳ ಭಾಗ್ಯ ಇರದ ದಂಪತಿಗಳು ದೈವದ ನಂಬಿಕೆ,ಗುರು ಭಕ್ತಿಯ ನೆಲೆಯನ್ನು ಸೂಚಿಸುವಂತೆ, ಸಂತಾನ ಭಾಗ್ಯ ಪಡೆದಾಗ ತಮ್ಮ ಮನೆಯ ದೇವರ ವರ ಪ್ರಸಾದದಿಂದ, ನಮಗೆ ಮಕ್ಕಳ ಭಾಗ್ಯ ದೊರಕಿತೆಂದು ಹೇಳುವರು. ಅದೇ ರೀತಿ ನಮ್ಮ ಮನೆ ಗುರುಗಳು ಕರುಣಿಸಿದ ವರ ಪ್ರಸಾದದಿಂದ ನಮಗೆ ಮಕ್ಕಳ ಭಾಗ್ಯ ಲಭಿಸಿತೆಂದು ಹೇಳುವರು. ಮಹಾತಪಸ್ವಿಗಳ, ಪೂಜ್ಯರ ಆಶೀರ್ವಾದದ ಕಾರಣದಿಂದ ಅವರು ಕೊಟ್ಟ ಪ್ರಸಾದದ ಫಲದಿಂದ ನಮ್ಮ ಮನೆತನಕ್ಕೆ ಪುತ್ರಸಂತಾನ ದೊರಕಿತ್ತೆಂದು ಇಂದಿಗೂ ಹೇಳುತ್ತಾ ಬಂದಿರುವದನ್ನು ಗಮನಿಸುತ್ತೇವೆ. ಅದೇರೀತಿ ಈ ಬಗೆಯಲ್ಲಿ ಗಮನಿಸುವಾಗ ಪ್ರಸಾದದ ಕಲ್ಪನೆ ಶರಣಪರಂಪರೆಯಲ್ಲಿ ವಿನೂತನ ಅರ್ಥ ಪಡೆದುಕೊಂಡು ಬಂದಿರುವದನ್ನು ಗಮನಿಸಲಾಗಿ ಈ ಬಗೆಯ ಕಥನಗಳು ಹಾಡುಗಳು ರಚನೆಗೊಳ್ಳಲು ಕಾರಣವೆನಿಸಿರಬಹುದು. ಅದೇ ರೀತಿ ಅಂದಿನ ಆಚರಣೆಗಳಲ್ಲಿ ಮಕ್ಕಳನ್ನು ಪಡೆಯುವ ಸಲುವಾಗಿ ಪ್ರಸಾದಕ್ಕೆಂದು ಜನರು ಹಂಬಲಿಸುತ್ತಿದ್ದ ಸಂಗತಿಗಳು, ಇಲ್ಲಿ ಕೇವಲ ಉನ್ನತ ವರ್ಗದವರು ಮಾತ್ರ ಈ ಬಗೆಯ ಪ್ರಸಾದ ಕರುಣಿಸಿ ದೈವತ್ವಕ್ಕೇರುತ್ತಿದ್ದ ಸಂಗತಿಗಳು ಜನರನ್ನು ಸುಲಿಗೆ ಮಾಡುತ್ತಿದ್ದ ಸಂಗತಿಗಳು ಬಸವಣ್ಣನವರನ್ನು ಸಮಕಾಲೀನ ಶರಣರನ್ನು ಕಾಡಿರಬಹುದು.ಈ ಬಗೆಯ ಸಮಾಜದ ನಂಬಿಕೆಗಳನ್ನು ದೂರ ಮಾಡಲು ಇಲ್ಲಿ ಕೆಳವರ್ಗದವರ ಮನೆಯ ಪ್ರಸಾದಕ್ಕೆ ದೈವತ್ವದ, ಪೂಜ್ಯನೀಯ ಸ್ಥಾನ ಕಲ್ಪಿಸಲು ಕಕ್ಕಯ್ಯನವರ ಮನೆಯ ಮಿಕ್ಕಿದ ಪ್ರಸಾದದಿಂದ ಅಕ್ಕ ನಾಗಮ್ಮ ಮಕ್ಕಳ ಭಾಗ್ಯ ಪಡೆದಳೆಂಬ ಚಾರಿತ್ರಿಕ ಸಂಗತಿ, ನಿಜದ ಅರ್ಥದಲ್ಲಿ ಸಮಾಜದಲ್ಲಿ ಯಾರು ಮೇಲಲ್ಲ ಕೀಳಲ್ಲ ಎಲ್ಲರೂ ಒಂದೇ ಎಂಬ ಭಾವ ಬಿತ್ತಲು ಸಹಕಾರಿಯಾಗಿತ್ತು ಎನ್ನಬಹುದು.

ಕೆಳವರ್ಗದವರನ್ನು, ಶೋಷಿತರನ್ನು ನಮ್ಮವರೆಂದು ಒಪ್ಪಿಕೊಳ್ಳಲು ಅವರಿಗೆ ಈ ಬಗೆಯ ಸಂಗತಿಗಳು ಅವಶ್ಯಕ ಎನಿಸಿದ್ದವು. ಬಂಧುತ್ವದ ನೆಲೆಯಲ್ಲಿ ಎಲ್ಲರನ್ನು ಕಾಣುವಾಗ ವ್ಯಕ್ತಿಮಾತ್ರ ಶ್ರೇಷ್ಠನಾಗದೇ ಆತನ ಮನೆಯ ಪ್ರಸಾದ ಶ್ರೇಷ್ಠ ಎಂದು ಸಾರಿರುವದು ಜಗತ್ತಿನಲ್ಲಿಯೇ ಮೊದಲ ಪ್ರಯತ್ನ ಇಲ್ಲಿ ಅನೇಕ ಎಡರು ತೊಡರುಗಳನ್ನು ಎದುರಿಸಬೇಕಾದ

ಸಂಗತಿಗಳನ್ನು ಮನಗಂಡು ಅಂದು ಪ್ರಸಾದದ ಶ್ರೇಷ್ಠತೆಯನ್ನು ತಿಳಿಸಿದರು.ಇಂದಿಗೂ ಕೂಡಾ ಈ ಬಗೆಯಲ್ಲಿ ಅನೇಕ ವಚನಗಳು ಪ್ರಸಾದದ ಹಿರಿಮೆಯನ್ನು ತಿಳಿಸಿಕೊಡುತ್ತವೆ. ಅನೇಕ ವಚನಗಳಲ್ಲಿ ಬಸವಣ್ಣನವರು ಹಾಗೂ ಅನೇಕ ಶರಣರ ವಚನಗಳು ಅಲಕ್ಷಿತರನ್ನು, ಸಮಾಜದಿಂದ ದೂರವಿಟ್ಟವರನ್ನು ತಮ್ಮ ಬಂಧುಗಳೆಂಬ ನೆಲೆಯಲ್ಲಿ, ತಂದೆ ತಾಯಿಗಳೆಂಬ ಅರ್ಥದಲ್ಲಿ ಹೇಳಿರುವಾಗ, ಅವರ ಮನೆಯ ಪ್ರಸಾದ ಕೂಡಾ ನಮ್ಮ ಶರಣ ಪರಂಪರೆಯುಲ್ಲಿ ಗೌರವದ ಸ್ಥಾನ ಪಡೆದುಕೊಳ್ಳಬೇಕು. ಆ ಪ್ರಸಾದ ನಮಗೆ ಒಳಿತನ್ನು ಮಾಡಿದೆನಲು ಪುತ್ರಸಂತಾನ ದೊರಕಿರುವದು ಸಾಕ್ಷಿ. ಕೇವಲ ಕೆಲವೇ ಸೀಮಿತ ವ್ಯಕ್ತಿಗಳು ಲಾಭಧಾಸೆಗೆ ಕರುಣಿಸುವ ಪ್ರಸಾದಕ್ಕಿಂತ ಕಾಯಕದ ಹಿರಿಮೆ ತೋರಿದ ಶರಣರ ಮನೆಯಲ್ಲಿನ ಮಿಕ್ಕಿದ ಪ್ರಸಾದ ಅತಿ ಶ್ರೇಷ್ಠ ಎಂದು ಹೇಳುವಲ್ಲಿ, ಸಮಾಜಮುಖಿ ಚಿಂತನೆಗಳಿರುವದನ್ನು, ವೈಚಾರಿಕತೆಯ ಹಾದಿ ಇರುವದನ್ನು, ಅಂಧ ಶ್ರದ್ಧೆಯುನ್ನು ಧಿಕ್ಕರಿಸುವ ನೆಲೆಗಳಿರುವದನ್ನು ಗಮನಿಸಿದಾಗ ಇಂತಹ ಜನಪದ ನೆಲೆಯ ಹಾಡುಗಳಲ್ಲಿನ ನೈಜತೆಯ ಸಂಗತಿಗಳನ್ನು ಗುರುತಿಸಲು ಸಾಧ್ಯವಾಗುತ್ತದೆ. ಇಲ್ಲಿ ಕಾಲಾಂತರದಲ್ಲಿ ಕೆಲವು ಕಡೆಗಳಲ್ಲಿ ತಿರುಚುವ, ತಿದ್ದುವ ಪ್ರಯತ್ನಗಳು ನಡೆದಿರುವದನ್ನು, ಉದ್ದೇಶಪೂರಕವಾಗಿ ಇಲ್ಲದ್ದನ್ನು ಇತ್ತು ಎಂಬರ್ಥದಲ್ಲಿ ಹೇಳಲು ಪ್ರಯತ್ನಿಸಿದ ಪಟ್ಟಭದ್ರ ಹಿತಾಸಕ್ತಿಗಳ ಕಾರ್ಯ ಆರಂಭಿಕ ಯಶಸ್ಸು ಕಂಡರು; ಸೂರ್ಯನ ಬೆಳಕಿಗೆ ಪರದೆ ಹಿಡಿಯುವ ಕೆಲಸದಂತೆ ವಿಫಲಗೊಂಡಿರುವದನ್ನು ಕಾಣುತ್ತೇವೆ. ಈ ವಿಧಾನವಾಗಿ ಶರಣ ಪರಂಪರೆಯ ನಿಜ ಆದರ್ಶಗಳನ್ನು, ಮೇರು ವ್ಯಕ್ತಿತ್ವಗಳನ್ನು ಅರಿಯುವ ಪ್ರಯತ್ನವೆಂಬಂತೆ ಅಧ್ಯಯನಗಳು ಹೊಸ ಆಲೋಚನೆಗಳತ್ತ ಮುಖ ಮಾಡಬೇಕಿದೆ.

ಈ ಬಗೆಯಲ್ಲಿ ಚೆನ್ನಬಸವಣ್ಣನವರ ಅಗಾಧ ಪ್ರತಿಭೆ,ಮೇರು ಪಾಂಡಿತ್ಯ, ವಚನಸಾಹಿತ್ಯದಲ್ಲಿ ತೋರಿದ ವೈಚಾರಿಕ ನಿಲುವುಗಳನ್ನು ಅಧ್ಯಯನದ ನೆಲೆಯಲ್ಲಿ ಅವಲೋಕಿಸುವದು ಅವಶ್ಯಕ ಎನಿಸುತ್ತದೆ. ವಿವಿಧ ಆಯಾಮಗಳಲ್ಲಿ ಚೆನ್ನಬಸವಣ್ಣನವರನ್ನು ಅರಿಯುವ ಪ್ರಯತ್ನಗಳ ಮೊದಲ ಹೆಜ್ಜೆಯಾಗಿ ಚೆನ್ನಬಸವಣ್ಣನವರ ಜನನದ ಸಂಗತಿಗಳ ಸುತ್ತಲಿನ ಅಂಶಗಳನ್ನು ಗಮನಿಸುವಾಗ ಇಲ್ಲಿನ ಪವಾಡ, ಲೀಲೆ, ನಂಬಿಕೆ, ಐತಿಹ್ಯ, ಕಥನಗಳನ್ನು, ಯಥಾವತ್ತಾಗಿ ನಂಬದೆ ಅವುಗಳ ಹಿಂದಿನ ನಿಜದ ನಿಲವು, ವೈಚಾರಿಕ ಚಿಂತನೆಗಳ್ನು ಅರಿಯಬೇಕಾಗಿರುವದು ಗಮನಾರ್ಹ ಎನಿಸುತ್ತದೆ. ಸರ್ವರನ್ನು ಸಮತೆಯ ಭಾವದಿಂದ ಕಾಣುವ ಕೆಳವರ್ಗದವರನ್ನು ಕೂಡಾ ಪೂಜ್ಯನೀಯ ಭಾವದಿಂದ ಕಾಣುವ ಪ್ರಯತ್ನಗಳು ಇಲ್ಲಿ ಪ್ರಧಾನವಾಗಿ ಕಂಡಾಗ ಹನ್ನೆರಡನೇ ಶತಮಾನದ ಶರಣರ ಆಂದೋಲನದ ಕ್ರಾಂತಿಯ ಆಶಯಗಳಿಗೆ ಸಮಕಾಲೀನ ಸಮಾಜ ಹಿರಿದಾದ ಅರ್ಥವನ್ನು ಕೊಟ್ಟು ಗೌರವಿಸಿದಂತಾಗುತ್ತದೆ. ಆ ಕಾಲಘಟ್ಟದ ಐತಿಹಾಸಿಕ ಪ್ರಜ್ಞೆಯೊಟ್ಟಿಗೆ ಶರಣರು ಕಟ್ಟಬಯಸಿದ ಆದರ್ಶಸಮಾಜದ ಚಿಂತನೆ ಕಾಯಕ ದಾಸೋಹ, ಜಂಗಮ ಮುಂತಾದ ವೈಚಾರಿಕ ನಿಲುವುಗಳನ್ನು ಗಮನದಲ್ಲಿರಿಸಿಕೊಂಡು ಇಂತಹ ಅನೇಕ ಜನಪದ ಕಥನ, ಹಾಡು, ಐತಿಹ್ಯಗಳನ್ನು ವಿಶ್ಲೇಷಿಸಿದಾಗ ಚೆನ್ನಬಸವಣ್ಣನವರಂತಹ ಶ್ರೇಷ್ಠ ಶರಣರ ಬದುಕಿನ ಸಂಗತಿಗಳನ್ನು ತಿಳಿಯಲು ಸಾಧ್ಯವಾಗುತ್ತದೆ.

**ಪರಾಮರ್ಶನ ಗ್ರಂಥಗಳು**


೧. ಎಚ್. ತಿಪ್ಪೇರುದ್ರಸ್ವಾಮಿ, ೧೯೭೮, ಅವಿರಳಜ್ಞಾನಿ ಚೆನ್ನಬಸವಣ್ಣ, ಡಿ. ವಿ. ಕೆ ಮೂರ್ತಿ ಪ್ರಕಾಶಕರು, ಮೈಸೂರು.

೨. ಮಲ್ಲೇಪುರಂ. ಜಿ ವೆಂಕಟೇಶ, (ಸಂ), ೨೦೧೧, ಚೆನ್ನಬಸವಣ್ಣ, ಕನ್ನಡ ಅಧ್ಯಯನ ಸಂಸ್ಥೆ ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ.

೩. ಎಸ್. ಉಮಾಪತಿ, ೨೦೦೮, ಷಟಸ್ಥಲಪ್ರಭೆ ಚೆನ್ನಬಸವಣ್ಣ, ಶ್ರೀ ಸಿದ್ಧಗಂಗಾ ಪ್ರಕಾಶನ, ತುಮಕೂರು.

೪. ಜಗದಂಬಾ ಮಲ್ಲೇದೇವರು, (ಸಂ), ೧೯೯೧, ಚೆನ್ನಬಸವಣ್ಣನವರು, ಜಗದ್ಗುರು ಶ್ರೀ ಶಿವರಾತ್ರೇಶ್ವರ ಗ್ರಂಥಮಾಲೆ, ಮೈಸೂರು.

೫. ವಿಜಯಾದೇವಿ, ೧೯೯೮,ಚೆನ್ನಬಸವ ಪುರಾಣ ಒಂದು ಅಧ್ಯಯನ, ಪ್ರಭುದೇವ ಗ್ರಂಥಮಾಲೆ, ಭಧ್ರಾವತಿ.

೬. ಸಿದ್ದಣ್ಣ ಲಂಗೋಟಿ (ಚಾಂದಕವಠೆ), ೨೦೧೯, ಕ್ರಾಂತಿ ಗಂಗೋತ್ರಿ ಶರಣೆ ಅಕ್ಕನಾಗಮ್ಮನವರು, ಜಗಜ್ಯೋತಿ ಬಸವೇಶ್ವರ ಅನುಭಾವ ಪೀಠ, ರಾಮದುರ್ಗ.

೭. ವಿ, ಜಿ. ಮಾರಿಹಾಳ, ೨೦೦೩, ಚೆನ್ನಬಸವಣ್ಣನವರು, ಶ್ರೀ ಬಸವೇಶ್ವರ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೮. ಸಿದ್ದಣ್ಣ ಲಂಗೋಟಿ (ಚಾಂದಕವಠೆ), ೨೦೧೯, ಕ್ರಾಂತಿ ಗಂಗೋತ್ರಿ ಶರಣೆ ಅಕ್ಕನಾಗಮ್ಮನವರು, ಜಗಜ್ಯೋತಿ ಬಸವೇಶ್ವರ ಅನುಭಾವ ಪೀಠ, ರಾಮದುರ್ಗ.


■■

# ಶಿವಯೋಗಿಣಿ ಅಕ್ಕಮಹಾದೇವಿ

• ಶ್ರೀಧರ ಗೌಡರ

ಶರಣ ಸಂಸ್ಕೃತಿಯ ಉತ್ತುಂಗ ಸಾಧನೆಯ ಪ್ರತೀಕ ಈ ಅಕ್ಕ. ಹತಾಶೆ, ಸೋಲು, ನಿರಾಸೆಗಳ ನೆರಳಲ್ಲಿ ನಲುಗುವ ಸ್ತ್ರೀಯರಿಗೆ ಅಕ್ಕಮಹಾದೇವಿಯ ಆಧ್ಯಾತ್ಮಿಕ ಸಾಧನೆ ಒಂದು ಉಜ್ವಲ ದಾರಿದೀಪವಾಗಿ ನಿಲ್ಲಬಲ್ಲದು. ಒಬ್ಬಸ್ತ್ರೀ ಸಂಸ್ಕಾರ, ಜ್ಞಾನ, ಚಿಂತನೆ, ಸಾಧನೆಗಳ ಬಲದಿಂದ ಅಸಾಮಾನ್ಯದೆತ್ತರಕ್ಕೆ ಏರಬಲ್ಲಳು ಎಂಬುದಕ್ಕೆ ಅಕ್ಕಮಹಾದೇವಿಯ ಜೀವನ ಚರಿತ್ರೆ ಸಾಕ್ಷಿ.

ಅಂತರಂಗದ ಪ್ರಭೆ ಬಹಿರಂಗವೆಲ್ಲಾ ತಾನೆಯಾಗಿ ಗುಹೇಶ್ವರ ಲಿಂಗದಲ್ಲಿ ಸಂದಿಲ್ಲದಿಪ್ಪ ಮಹಾದೇವಿಯಕ್ಕನ ಶ್ರೀ ಪಾದಕ್ಕೆ ನಮೋ ನಮೋ ಎಂಬೆನು ಎಂದು ಪ್ರಭುದೇವರಿಂದ, ಲಿಂಗಾಂಗ ಸಮರಸಾನಂದದ ಶಿವಾನುಭವವನ್ನು ಶ್ರೇಷ್ಠ ವಚನ ರಚನೆಯಲ್ಲಿ ಅಭಿವ್ಯಕ್ತ ಪಡಿಸಿದವರಲ್ಲಿ ಅಕ್ಕಮಹಾದೇವಿ ಅಗ್ರಗಣ್ಯಳೆಂದು ಚನ್ನಬಸವಣ್ಣನವರಿಂದ, ಮಹಾದೇವಿಯಕ್ಕನ ಜೀವನ ಚರಿತ್ರೆ ಹೆಣ್ಣಿನ ಗೌರವ ಸಾಧನೆಯ, ಹೆಣ್ಣಿನ ಸ್ವಾತಂತ್ರ್ಯ ಸಾಧನೆಯ, ಹೆಣ್ಣಿನ ಪರಮಾರ್ಥಸಾಧನೆಯ ಒಂದು ಮಹಾಪ್ರಕರಣ ಎಂದು ಎಂ. ಆರ್. ಶ್ರೀಯವರಿಂದ ಬಣ್ಣಿಸಿಕೊಂಡವಳೇ ಅಕ್ಕಮಹಾದೇವಿ.

ಕನ್ನಡದ ಪ್ರಥಮ ಮಹಿಳಾ ಕವಿಯತ್ರಿಯಾಗಿ, ಶರಣ ಚಳುವಳಿಗೆ ವೈಚಾರಿಕ ದಿಕ್ಕು ತೋರಿಸಿ, ಸ್ತ್ರೀವಾದಿ ಚಳುವಳಿಯ ಪ್ರತಿಪಾದಕಿಯಾಗಿ ಸ್ವಾಭಿಮಾನದಿಂದ ಬದುಕಿ ಎಲ್ಲ ಶರಣ ಶರಣೆಯರಿಗೆ ಅಕ್ಕರೆಯ ಅಕ್ಕನಾಗಿ ಖ್ಯಾತಿಹೊಂದಿದವಳು ಅಕ್ಕಮಹಾದೇವಿ.

ಚಿಕ್ಕ ವಯಸ್ಸಿನಲ್ಲಿ ಸುಖವನ್ನು ತ್ಯಜಿಸಿ, ಬದುಕಿನಲ್ಲಿ ಹಲವಾರು ಸತ್ವ ಪರೀಕ್ಷೆಗಳನ್ನು ಎದುರಿಸಿ, ಶಿವ (ಮಲ್ಲಿಕಾರ್ಜುನ)ನನ್ನು ಪತಿ ಎಂದು ಸ್ವೀಕರಿಸಿ, ಲೌಕಿಕ ಜಗತ್ತನ್ನು ಧಿಕ್ಕರಿಸಿ, ಕೇಶಾಂಬರೆಯಾಗಿ ನಡೆದ ಅಕ್ಕಮಹಾದೇವಿಯ ಚರಿತ್ರೆ ವಿಶ್ವದ ಇತಿಹಾಸದಲ್ಲಿ ಅಚ್ಚಳಿಯದೆ ಉಳಿದಿದೆ.

ಭರತದ ಖಂಡದ ಮಹಿಳಾ ಪ್ರಪಂಚದ ಗೌರವವನ್ನು ಹೆಚ್ಚಿಸಿದ ಅಕ್ಕಮಹಾದೇವಿಯ ಚರಿತ್ರೆ ಉಜ್ವಲವಾದುದು. ಪಾಲ್ಕುರಿಕೆ ಸೋಮನಾಥನ ಪಂಡಿತಾರಾಧ್ಯ ಚರಿತ್ರೆ, ಹರಿಹರನ ಮಹಾದೇವಿಯಕ್ಕನ ರಗಳೆ, ಚಾಮರಸನ ಪ್ರಭುಲಿಂಗಲೀಲೆ, ಎಳಂದೂರು ಹರೀಶ್ವರನ ಪ್ರಭುದೇವರ ಪುರಾಣ, ಚೆನ್ನಬಸವಪುರಾಣ, ರಾಚಕವಿಯ ಮಹಾದೇವಿಯಕ್ಕನ ಸಾಂಗತ್ಯ, ಶೂನ್ಯಸಂಪಾದನೆಗಳು ಅಕ್ಕಮಹಾದೇವಿಯ ಜೀವನಚಿತ್ರವನ್ನು ರೂಪಿಸುವಲ್ಲಿ ಸಹಾಯಕಾರಿಯಾಗುವ ಕೃತಿಗಳು. ಜನಪದ ಹಾಡುಗಳಲ್ಲಿಯೂ ಅಕ್ಕನ ವೈರಾಗ್ಯಜೀವನದ ಚಿತ್ರ ಪ್ರತಿಬಿಂಬಿತವಾಗಿದೆ.

ಶಿವಮೊಗ್ಗ ಜಿಲ್ಲೆಯ ಬಳ್ಳಿಗಾವಿ ಸಮೀಪದ ಉಡುತಡಿ ಎಂಬ ಗ್ರಾಮದ ನಿರ್ಮಲಶೆಟ್ಟಿ ಮತ್ತು ಸುಮತಿ ಎಂಬ ಶಿವಭಕ್ತ ದಂಪತಿಗಳ ಪುತ್ರಿಯಾಗಿ ಮಹಾದೇವಿ ಜನಿಸಿದಳು. ಬಾಲ್ಯದಿಂದಲೇ ಶಿವಪೂಜೆ-ಧ್ಯಾನಗಳಲ್ಲಿ ನಿರತಳಾಗಿರುತ್ತಿದ್ದಳು. ಮದುವೆಯ ವಯಸ್ಸಿಗೆ ಬಂದ ಮಗಳಿಗೆ ಯೋಗ್ಯ ವರನ ಹುಡುಕಾಟದಲ್ಲಿ ತಂದೆ ತಾಯಿಗಳು ತೊಡಗಿದ್ದಾಗ ಒಂದು ಪ್ರಸಂಗ ನಡೆಯಿತು.

ಆ ಪ್ರಾಂತ್ಯವನ್ನು ಕೌಶಿಕ ಎಂಬ ಅರಸ ಆಳುತ್ತಿದ್ದ, ಅರಣ್ಯದಿಂದ ಅರಮನೆಗೆ ಮೆರವಣಿಗೆಯಲ್ಲಿ ಬರುತ್ತಿದ್ದ. ಆ ಮೆರವಣಿಗೆಯನ್ನು ನೋಡಲು ನೂರಾರು ಜನ ಸೇರಿದ್ದರು, ಮಹಾದೇವಿಯೂ ಹೋಗಿದ್ದಳು. ಮೆರವಣಿಗೆಯಲ್ಲಿ ಬರುತ್ತಿದ್ದ ಕೌಶಿಕನ ಕಣ್ಣಿಗೆ ಮಹಾದೇವಿ ಬಿದ್ದಳು, ಅವಳ ಸೌಂದರ್ಯಕ್ಕೆ ಮಾರುಹೋಗಿ ಅವಳನ್ನೇ ಮದುವೆಯಾಗಬೇಕು ಎಂದು ನಿರ್ಧರಿಸಿದ.

ಮರುದಿನವೇ ಅರಮನೆಯ ಅಧಿಕಾರಿಗಳು ಮಹಾದೇವಿಯ ಮನೆಗೆ ತೆರಳಿ ಅವಳ ತಂದೆ ತಾಯಿಗಳಿಗೆ ರಾಜನ ಅಭಿಪ್ರಾಯ ತಿಳಿಸಿದರು. ವಿಷಯ ತಿಳಿದ ನಿರ್ಮಲಶೆಟ್ಟಿ ಸುಮತಿ ದಂತಿಗಳಿಗೆ ಸಂತೋಷಕ್ಕೆ ಬದಲು ದುಖವಾಯಿತು.

ಶಿಕ್ಷಕರು, ಸರ್ಕಾರಿ ಪ್ರೌಢ ಶಾಲೆ, ಕೂಡಲಸಂಗಮ -೫೮೭೧೧೫ ತಾ.ಹುನಗುಂದ ಜಿ.ಬಾಗಲಕೋಟ

ನಾವು ಶಿವಭಕ್ತರು ಆದರೆ ಕೌಶಿಕ ರಾಜ ಶಿವಭಕ್ತನಲ್ಲ. ಶಿವಭಕ್ತನಲ್ಲದ ಅರಸನಿಗೆ ಮಗಳನ್ನು ಮದುವೆ ಮಾಡಿಕೊಡುವುದು ಆ ದಂಪತಿಗಳಿಗೆ ಇಷ್ಟ ಇರಲಿಲ್ಲ. ಅರಸನ ಇಚ್ಛೆಗೆ ವಿರುದ್ದವಾಗಿ ನಡೆದು-ಬಾಳುವುದು ಸುಲಭವಾಗಿರಲಿಲ್ಲ.ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಮಗಳ ಅಭಿಪ್ರಾಯ ಕೇಳಿದಾಗ ಮಹಾದೇವಿ ಶಿವ ನನ್ನ ಗಂಡ, ಅವನನ್ನು ಬಿಟ್ಟು ಬೇರೆ ನನಗೆ ಗಂಡಂದಿರಿಲ್ಲ ಎಂದು ಸ್ಪಷ್ಟವಾಗಿ ಹೇಳಿದಳು. ಇದರಿಂದ ಕೋಪಗೊಂಡ ಅರಸ ತನ್ನನ್ನು ಮದುವೆಯಾಗದಿದ್ದರೆ ನಿನ್ನ ತಂದೆ ತಾಯಿಯನ್ನು ಕೊಲ್ಲಿಸುವುದಾಗಿ ಬೆದರಿಕೆ ಹಾಕಿದ. ತಂದೆ, ತಾಯಿಯ ರಕ್ಷಣೆಗಾಗಿ ಒಲ್ಲದ ಮನಸ್ಸಿನಿಂದ ಒಪ್ಪಿ ಮದುವೆಯಾದ ಮೇಲೆ ಕೌಶಿಕ ತನ್ನ ಶಿವಪೂಜೆ- ಧ್ಯಾನಕ್ಕೆ ಅಡ್ಡಿಮಾಡಬಾರದು. ತನ್ನ ಭಕ್ತಿ ಸಾಧನೆಯಲ್ಲಿ ರಾಜನಿಂದ ಅಡ್ಡಿ ಬಂದರೆ ಅದನ್ನು ಒಂದು ತಪ್ಪು ಎಂದು ಪರಿಗಣಿಸುತ್ತೇನೆ ಇಂಥ ಮೂರು ತಪ್ಪುಗಳಾದರೆ ರಾಜನನ್ನು ಬಿಟ್ಟು ಬಿಡುವುದಾಗಿ ಸ್ಪಷ್ಟವಾಗಿ ಹೇಳಿದಳು. ಇದಕ್ಕೆ ಕೌಶಿಕ ಒಪ್ಪಿ ಮಹಾದೇವಿಯನ್ನು ಮದುವೆಯಾದ.

ಅರಮನೆಯಲ್ಲಿ ಮಹಾದೇವಿಯ ಶಿವಭಕ್ತಿ ಇಮ್ಮಡಿಸಿತು. ದಿನದ ಬಹು ಭಾಗವನ್ನೆಲ್ಲಾ ಶಿವಪೂಜೆಯಲ್ಲಿಯೇ ಕಳೆಯತೊಡಗಿದಳು. ಸುಖವಾಗಿರಲು ಬಯಸಿದ ಕೌಶಿಕ ಅವಳ ಧಾರ್ಮಿಕ ಚಟುವಟಿಕೆಗಳಿಂದ ಬೇಸರಗೊಂಡ. ಕಾಮುಕನಾದ ಕೌಶಿಕ ಮೂರು ಬಾರಿ ಶಿವಪೂಜೆ- ಧ್ಯಾನಕ್ಕೆ ಅಡ್ಡಿ ಪಡಿಸಿದ. ಇದರಿಂದ ಮಹಾದೇವಿ ಕೌಶಿಕನನ್ನು ಬಿಟ್ಟು ಅರಮನೆಯಿಂದ ತನ್ನ ಆರಾಧ್ಯ ದೈವ ಚನ್ನಮಲ್ಲಿಕಾರ್ಜುನನನ್ನು ಅರಸುತ್ತ ಶ್ರೀಶೈಲದ ಕಡೆ ಪಯಣಿಸಿದಳು. ಮಾರ್ಗ ಮಧ್ಯದಲ್ಲಿ ಕಲ್ಯಾಣದಲ್ಲಿ ಸ್ವಲ್ಪಕಾಲ ನಿಂತಳು. ಅಲ್ಲಿದ್ದ ಅನುಭವ ಮಂಟಪದಲ್ಲಿ ಬಸವಣ್ಣ, ಸಿದ್ದರಾಮ, ಅಲ್ಲಮಪ್ರಭು ಮುಂತಾದವರನ್ನು ಸಂದರ್ಶಿಸಿದಳು. ಎಲ್ಲರಿಂದ ಅಕ್ಕ ಎಂದು ಕರೆಯಿಸಿಕೊಂಡಳು. ಬಸವಣ್ಣನವರಿಂದ ಭಕ್ತಿಯ ಮಾರ್ಗವನ್ನು, ಅಲ್ಲಮಪ್ರಭುಗಳಿಂದ ಜ್ಞಾನದ ಮಾರ್ಗವನ್ನು ಅರಿತುಕೊಂಡ ಅಕ್ಕಮಹಾದೇವಿ ಶ್ರೀಶೈಲದತ್ತ ಪ್ರಯಾಣ ಬೆಳಸಿದಳು. ಕೊನೆಗೆ ಶ್ರೀಶೈಲದ ಕದಳಿ ವನದಲ್ಲಿ ಐಕ್ಯಳಾದಳು.

ಅಕ್ಕಮಹಾದೇವಿ ಚನ್ನಮಲ್ಲಿಕಾರ್ಜುನ ಅಂಕಿತದಲ್ಲಿ ಸಾವಿರಾರು ವಚನಗಳನ್ನು ರಚಿಸಿದ್ದು ಸದ್ಯ ನಮ್ಮಗೆ ೪೩೪ ವಚನಗಳು ಮಾತ್ರ ದೊರಕಿವೆ.ಯೋಗಾಂಗತ್ರಿವಿಧಿ, ಮಂತ್ರಗೌಪ್ಯ, ಸೃಷ್ಟಿಯ ವಚನ ಮುಂತಾದ ಲಘುಕೃತಿಗಳನ್ನು ರಚಿಸಿದ್ದಾಳೆ. ಅಕ್ಕನ ವಚನಗಳು ಭಕ್ತಿ, ಅನುಭಾವ, ಭಾಷಾಪ್ರೌಢಿಮೆಯಿಂದ ಕೂಡಿವೆ. ಭಾವಗೀತಾತ್ಮಕವಾಗಿರುವ ಅಕ್ಕನ ವಚನಗಳು ಹಾಡುಗಾರಿಕೆಗೆ ಸೂಕ್ತವಾಗಿವೆ.

ಅಕ್ಕಮಹಾದೇವಿಯನ್ನು ರಾಜಸ್ಥಾನದ ಮೀರಾಳಿಗೆ, ಕಾಶ್ಮೀರದ ಲಲ್ಲೇಶ್ವರಿಗೆ, ತಮಿಳುನಾಡಿನ ಆಂಡಾಳ್‌ಗೆ ಹೋಲಿಸುವುದುಂಟು. ಆದರೆ ಅಕ್ಕನ ಜ್ಞಾನ, ಭಕ್ತಿ, ಸಾಧನೆ, ವಚನಗಳಲ್ಲಿ ಅವಳ ನಿರ್ಭಿಡೆಯ ಅಭಿವ್ಯಕ್ತಿ, ಸಮಾಜದ ಸಂಪ್ರದಾಯವನ್ನು ಎದುರಿಸಿದ ಅವಳ ದಿಟ್ಟತನ ಅವರೆಲ್ಲರಿಗಿಂತ ಭಿನ್ನವಾಗಿದೆ.

■■

ಬಸವಣ್ಣನೆ ಗುರು, ಪ್ರಭುದೇವರೆ ಲಿಂಗ
ಸಿದ್ಧರಾಮಯ್ಯನೆ ಜಂಗಮ
ಮಡಿವಾಳಯ್ಯನೆ ಜಂಗಮ
ಚೆನ್ನಬಸವಣ್ಣನೆನ್ನ ಪರಮಾರಾಧ್ಯರು
ಇನ್ನು ಸುಖಿಯಾದೆನು ಕಾಣಾ
ಚೆನ್ನಮಲ್ಲಿಕಾರ್ಜುನಯ್ಯಾ.

# ಶರಣ ಶಿವನಾಗಮಯ್ಯ

● ವೆಂಕಟೇಶ ಕೆ. ಜನಾದ್ರಿ

ಇಂದಿಗೂ ಈ ನಾಡಲ್ಲಿ ಕೆಲವು ಸಂದರ್ಭದಲ್ಲಿ ಅಸ್ಪೃಶ್ಯತೆಯ ಆಚರಣೆ ನಡೆಯುತ್ತಿರುವುದು, ಅಸ್ಪೃಶ್ಯರಿಗೆ ಸಣ್ಣಪುಟ್ಟ ಕಾರಣಗಳಿಗಾಗಿಯೇ ಬಹಿಷ್ಕಾರ ಹಾಕುವುದು, ದೇವಸ್ಥಾನದೊಳಗೆ ಅವರುಗಳನ್ನು ಬಿಟ್ಟುಕೊಳ್ಳದಿರುವ ಹಲವಾರು ಪ್ರಕರಣಗಳನ್ನು ಗಮನಿಸುತ್ತಿರುತ್ತೇವೆ. ಇಂಥ ಸಂದರ್ಭದಲ್ಲೆಲ್ಲ ನಮ್ಮಂಥವರ ಕಣ್ಣಂಚು ಒಂಚೂರು ಒದ್ದೆಯಾಗುತ್ತದೆ. ಏನೋ ಒಂದು ಬರೆದೋ, ಒಂದಿಷ್ಟು ಮಾತನಾಡಿಯೋ ಕೈ ತೊಳೆದುಕೊಳ್ಳುತ್ತೇವೆ. ಆದರೆ ನಾವು ಅವರಾಗಿ ಯೋಚಿಸಿದಾಗ? ಇದೆಂಥ ಅಮಾನವೀಯತೆ ಎನಿಸುತ್ತದೆ; ಸಂಕಟಪಡುತ್ತೇವೆ. ಹನ್ನೆರಡನೆ ಶತಮಾನದಲ್ಲಿ ಇನ್ನೆಂಥ ಅಮಾನವೀಯತೆ ಇದ್ದೀತೆಂದು ಒಂದಿನಿತು ಯೋಚಿಸಿದರೆ ದಿಗ್ಭ್ರಮೆಯಾಗುತ್ತದೆ.

ಹೌದು, ಅಂದು ಅಸ್ಪೃಶ್ಯನೊಬ್ಬನ ಬದುಕಿನ ಕ್ರಮ ತೀರಾ ನಿಕೃಷ್ಟವಾಗಿತ್ತು. ಊರೊರಗಡೆ ಇದ್ದ ತನ್ನ ಕೇರಿ ಬಿಟ್ಟು ಊರೊಳಗಿರುವವರ ಸ್ಥಳಕ್ಕೆ ಬರುವಂತಿರಲಿಲ್ಲ. ಆಕಸ್ಮಿಕವಾಗಿ ಬರಬೇಕಾದರೆ ಆತನ ನೆರಳು ಸಹ ನೆಲದ ಮೇಲೆ ಬೀಳಲು ಹೆಚ್ಚು ಅವಕಾಶವಿಲ್ಲದ ಅವಧಿ ಅಂದರೆ ಮಧ್ಯಾಹ್ನ ಸುಮಾರು ಹನ್ನೆರಡಕ್ಕೆ ಹೆಚ್ಚಿನ ಜನ ಸಂಚಾರವಿಲ್ಲದ ಸಮಯದಲ್ಲಿ ಬರಬೇಕು. ತಾನು ನಡೆದುಕೊಂಡು ಹೋದ ನಂತರ ತನ್ನ ಹೆಜ್ಜೆ ಗುರುತುಗಳೂ ಸಹ ಉಳಿಯದಂತೆ ವಾಪಸಿ ಹೋಗಬೇಕು ಅದಕ್ಕಾಗಿ ಬೆನ್ನ ಹಿಂದೆ ಪೊರಕೆಯೊಂದನ್ನು ಕಟ್ಟಿಕೊಂಡು ನಡೆಯಬೇಕು. ಆತ ಮುಂದೆ ಮುಂದೆ ಸಾಗಿದಂತೆ ಆ ಪೊರಕೆ ಆತನ ಹೆಜ್ಜೆ ಗುರುತುಗಳನ್ನು ಅಳಿಸುವಂತಿರಬೇಕು. ಆತ ನೆಲದ ಮೇಲೆ ಉಗುಳಬಾರದು. ಉಗುಳಬೇಕೆನಿಸಿದರೆ ಕೊರಳಲ್ಲೊಂದು ಬಟ್ಟಲು (ಗಡಿಗೆ) ಕಟ್ಟಿಕೊಂಡಿರಬೇಕು ಅದರಲ್ಲಿಯೇ ಉಗುಳಬೇಕು. ಆತ ನಡೆದುಕೊಂಡು ಬರುವಾಗ ಉಚ್ಚ ಜಾತಿಯವರು ಆಕಸ್ಮಾತ್ತಾಗಿ ಆತನಿಗೆದುರಾಗಿ ಬಂದರೆ ಆತನ ದೃಷ್ಟಿ ಅವರ ಮೇಲೆ ಬಿದ್ದು ಅವರಿಗೆ ಕೆಟ್ಟದ್ದಾಗಬಹುದೆಂದು ಯಾರೂ ಎದುರಿಗೆ ಬರುತ್ತಿರಲಿಲ್ಲ. ಆತ ಬರುತ್ತಿದ್ದಾನೆಂದು ತಿಳಿದುಕೊಳ್ಳಲು ಹಾಗೆ ನಡೆದುಕೊಂಡು ಬರುತ್ತಿರುವ ಅಸ್ಪೃಶ್ಯ "ಸಂಭೋಳಿ" ಎಂದು ಕೂಗುತ್ತಾ ನಡೆದುಕೊಂಡು ಬರುತ್ತಿರಬೇಕು. ಈ ಶಬ್ದ ಕೇಳಿಸಿಕೊಂಡರೆ ಉಚ್ಚ ಜಾತಿಯವರು ತಾವಿರುವಲ್ಲಿಯೇ ಮರೆಯಾಗಿಬಿಡುತ್ತಿದ್ದರು.

ಅಬ್ಬಾ ಈ ಚಿತ್ರಣವನ್ನೊಮ್ಮೆ ಸುಮ್ಮನೆ ಊಹಿಸಿಕೊಳ್ಳಿ. ಮನಸ್ಸಿಗೆ ಎಷ್ಟೊಂದು ಹಿಂಸೆಯಾಗುತ್ತದೆಯಲ್ಲವೇ? ನಿಜ ಇದು ಅಂದಿನ ಕಟು ವಾಸ್ತವತೆ. ಕರ್ಮಠರ ಅಮಾನವೀಯತೆಯ ಪರಮಾವಧಿ. ಮೌಢ್ಯತೆಯ ಅಂಧಶ್ರದ್ಧೆಯಾಗಿತ್ತು. ಮೀನ-ಹಂದಿ (ಮತ್ಸ್ಯ-ವರಹಾವತಾರ)ಗಳೂ ಸಹ ದೇವರ ಅವತಾರವಾಗಿ ಪೂಜಿಸಿಕೊಳ್ಳುತ್ತಿದ್ದ ಕಾಲದಲ್ಲಿ ಒಬ್ಬ ಮನುಷ್ಯನನ್ನು ಇಷ್ಟೊಂದು ನಿಕೃಷ್ಟವಾಗಿ ಕಾಣುವುದು ನಿಜಕ್ಕೂ ಅಕ್ಷಮ್ಯ.

ಇದೇ ಅವಧಿಯಲ್ಲಿ ಬಸವಕಲ್ಯಾಣದ ಭಾಗದಲ್ಲಿ "ನಾಗ" ಎಂಬ ಒಬ್ಬ (ಶ್ವಪಚ) ಅಸ್ಪೃಶ್ಯನಿದ್ದ. ಈತನಿಗೆ ಸಂಭೋಳಿ ನಾಗ, ಸಂಭೋಳಿ ನಾಗಯ್ಯ ಎಂದೇ ಗುರುತಿಸಿದ್ದರು. ಬಹುಶಃ ಈತ ಕಂಬಳಿ ನೇಯುವ ಕಾಯಕ ಮಾಡುತ್ತಿರುವುದರಿಂದ ಈತನಿಗೆ ಕಂಬಳಿ ನಾಗಯ್ಯ ಎಂತಲೂ ಕರೆಯುತ್ತಿದ್ದರು. ಮೂಲತಃ ವಿಳಾಸವಿಲ್ಲದ ಇಂಥವರನ್ನು ಹೀಗೆ ತಾನೇ ನಮ್ಮ ಸಮಾಜ ಗುರುತಿಸುವುದು. ಮೇಲೆ ವಿವರಿಸಿದ ಮಾದರಿಯಲ್ಲಿಯೇ ಈತ ಅವಶ್ಯವಿದ್ದಾಗ ಊರೊಳಗೆ ಪ್ರವೇಶ ಮಾಡುತ್ತಿರಬೇಕಾಗಿದ್ದೊಂದು ಅನಿವಾರ್ಯತೆ ಇತ್ತು. ಒಂದೊಮ್ಮೆ ಆಕಸ್ಮಿಕವಾಗಿ 'ಸಂಭೋಳಿ' ಎಂದು ಕೂಗುವುದನ್ನು ಬಿಟ್ಟು ಹಾಗೆ ನಡೆದುಕೊಂಡು ಬರುತ್ತಿರುವುದನ್ನು ಗಮನಿಸಿದ ಕೆಲ ಉಚ್ಚ ಜಾತಿಯ ಕರ್ಮಠರು ಈತನನ್ನು ಹಿಡಿದುಕೊಂಡು ಮನಬಂದಂತೆ ಥಳಿಸುತ್ತಾರೆ, ಹಿಂಸೆ ಕೊಡುತ್ತಾರೆ. ಅವರ ಏಟುಗಳನ್ನು ತಾಳದೇ

ಲೆಕ್ಕಪತ್ರ ಅಧೀಕ್ಷಕ, ಈಕರಸಾ ಸಂಸ್ಥೆ , ಕೇಂದ್ರ ಕಛೇರಿ, ಕಲಬುರ್ಗಿ-೫೮೫೧೦೨ ಮೊ: ೯೪೪೫೩೩೪೯೪೨

ತಲೆ ತಗ್ಗಿಸಿ ತಪ್ಪಾಯ್ತು ಬಿಟ್ಟುಬಿಡಿ ಎಂದು ಬೇಡಿಕೊಂಡರೂ ಈತನ ಆಕ್ರಂದನಕ್ಕೆ ಸ್ಪಂದಿಸುವವರು ಅಲ್ಲಿರಲಿಲ್ಲ. ಆಗ ಭೌತಿಕ ನೋವಿಗಿಂತಲೂ ಮಾನಸಿಕವಾಗಿ ಅನುಭವಿಸುವ ಹಿಂಸೆಯು ತೀವ್ರವಾಗಿರುತ್ತದೆ.

ತಕ್ಷಣಕ್ಕೆ ಯಾರೋ ಒಬ್ಬರು ಆಪ್ತವಾಗಿ ಈತನನ್ನು ತಬ್ಬಿಕೊಂಡು ಸಂತೈಸುವಂತೆ ಈತನ ಗಮನಕ್ಕೆ ಬರುತ್ತದೆ. ತಲೆತಗ್ಗಿಸಿ ಕಣ್ಣು ಮುಚ್ಚಿಕೊಂಡಿದ್ದ ಈತನನ್ನುದ್ದೇಶಿಸಿ ತಬ್ಬಿಕೊಂಡಿರುವ ಅವರು "ನಾಗಯ್ಯ ನಾನಾರು ಹೇಳಬಲ್ಲೆಯಾ" ಎನ್ನುತ್ತಾರೆ. "ಇಂಥ ಸಂಕಷ್ಟದಲ್ಲಿ ನನ್ನಂಥ ನೀಚ ಕುಲದವನನ್ನು ಸಂತೈಸುತ್ತಿರಬೇಕಾದರೆ ನೀವು ಬಸವಣ್ಣನಲ್ಲದೇ ಮತ್ತಾರಿರಲು ಸಾಧ್ಯ. ನೀವು ಬಸವತಂದೆಯೇ ಇದ್ದಿರಬೇಕು" ಎಂದೆನ್ನುತ್ತಾರೆ ನಾಗಯ್ಯ. ಬಸವಣ್ಣನ ಬಗ್ಗೆ ಅಷ್ಟೊಂದು ಆಪ್ತ ಭರವಸೆ ನಾಗಯ್ಯನದ್ದು. ಬಸವಣ್ಣನವರು ತಾವು ಚಿಂತಿಸಿ ನುಡಿದಿದ್ದನ್ನು ನಡೆಯಲ್ಲಿ ತರುವ ಈ ಪರಿಗೆ, ಅವರ ನಡೆಯ ಕಂಡು ಅವರ ಲಿಂಗ ಮೆಚ್ಚಿ ಹೌದೌದೆನ್ನುತ್ತಿತ್ತು. ಇದೆ ಈ ನಡೆಯೇ ಶರಣರ ಸಾರ್ಥಕತೆಯಾಗಿದೆ.

ಅಂದು ಅಸ್ಪೃಶ್ಯರ ಪಾಲಿಗೆ ಬಸವಣ್ಣ ಮಹಾಮಾನವ, ದೇವಮಾನವರಾಗಿದ್ದರು. ಬಸವಣ್ಣನವರು ನೆರೆದವರನ್ನೆಲ್ಲ ಚೆದುರಿಸಿ ಸಂಭೋಳಿ ನಾಗಯ್ಯನನ್ನು ಬಿಡಿಸಿಕೊಂಡು ಸಂತೈಸಿಸುತ್ತಾರೆ. ತಮ್ಮ ಸಂಸರ್ಗಕ್ಕೆ ಬಂದ ಆತನಿಗೆ ಲಿಂಗತತ್ವ ತಿಳಿಸಿ, ಇಷ್ಟಲಿಂಗ ಧಾರಣೆ ಮಾಡಿಸಿ ಶರಣನನ್ನಾಗಿಸುತ್ತಾರೆ. ಎಲ್ಲರ ದೃಷ್ಟಿಯಲ್ಲಿ ಸಂಭೋಳಿ ನಾಗ, ಸಂಭೋಳಿ ನಾಗಯ್ಯನಾಗಿದ್ದು ನಿಕೃಷ್ಟವಾದ ಬದುಕನ್ನು ಬದುಕಿ ಬಸವಳಿದಿದ್ದ ಆತನನ್ನು ಶರಣ "ಶಿವನಾಗಮಯ್ಯ"ನಾಗುವಂತೆ ಮಾಡುತ್ತಾರೆ. ತುಳಿತಕ್ಕೊಳಪಟ್ಟ ಇಂಥವರ ಒಡಲ ಅಳಲಿಗೆ ಧ್ವನಿಯಾದವರೇ ಬಸವಣ್ಣ. ಈ ಬಗೆಯ ಅಂತಃಕರಣ ಬಸವಣ್ಣನಿಗಲ್ಲದೇ ಮತ್ತಾರಿಗಿದೆ?

ಹೀಗೆ ತುಳಿತಕ್ಕೊಳಪಟ್ಟ ಅನೇಕರನ್ನು ಬಸವಣ್ಣನವರು ತಮ್ಮೊಂದಿಗೆ ಶರಣ ಸಂಸ್ಕೃತಿಯಲ್ಲಿ ಸಮಾನವಾಗಿ ಗುರುತಿಸಿಕೊಂಡಿದ್ದಾರೆ. ಅಂದು ಸವರ್ಣೀಯರೂ ಸೇರಿದಂತೆ ಕೆಳಜಾತಿಯವರೂ ಬಸವಣ್ಣನವರ ಪರಿಕಲ್ಪನೆಯ ಇಷ್ಟಲಿಂಗ ಧಾರಣೆ ಮಾಡಿಕೊಳ್ಳುವ ಮೂಲಕ ಸರ್ವಸಮ್ಮತದ ನವ ಸಮಾಜವೇ ತಾವಾಗಿದ್ದು ಹೊರಗಡೆ ದೇವರನ್ನುಡುಕುವ ಗೋಜಿಗೋಗದೇ ತಮ್ಮೊಳಗಿನ ದೇವರ ಅರಿವನ್ನು ಅರಿತುಕೊಂಡು ಎಲ್ಲರೂ ಸಮಾನರಾಗಿ ಪ್ರತಿಯೊಬ್ಬರೂ ಆ ಪರಮಾತ್ಮನ ಅಂಶವಾದ ಆತ್ಮವಾಗಿ, ಜೀವಾತ್ಮವಾಗಿ ಅಂದಿನವರೆಗಿದ್ದ ಅಸಮಾನತೆಯನ್ನು ಬೇರಿನೊಂದಿಗೆ ಕಿತ್ತೊಗೆದಿದ್ದರು. ಇದೊಂದು ಬಗೆಯ ಸಾಮಾಜಿಕ ಕ್ರಾಂತಿಯೇ ಆಗಿತ್ತು. ಬಸವಣ್ಣನವರ ಧೋರಣೆಯಂತೆ ಅಂತರಂಗದೊಂದಿಗೆ ಬಹಿರಂಗದ ಶುದ್ಧಿಯೂ ಆಗಿತ್ತು.

ಹೀಗೆ, ಬಸವಣ್ಣನವರ ಸಂಸರ್ಗದಿಂದ ಶರಣ ಶಿವನಾಗಮಯ್ಯನಾದ ಸಂಭೋಳಿ ನಾಗಿದೇವರು ಬಸವಣ್ಣನವರ ಸಮಕಾಲೀನರಾಗಿದ್ದವರು. ಇವರ ಕಾಲ ೧೧೬೦ ಇವರು ಸುಮಾರು ಮೂರು ವಚನಗಳನ್ನು "ನಾಗಪ್ರಿಯ ಚೆನ್ನರಾಮೇಶ್ವರ" ಎಂಬ ಅಂಕಿತ ನಾಮದಲ್ಲಿ ರಚಿಸಿದ್ದಾರೆ. ಇಂದು ಬಸವಕಲ್ಯಾಣದಲ್ಲಿ ಕಂಬಳಿ ನಾಗಿದೇವರ ಮಠವೊಂದಿದೆ. ಅಲ್ಲೊಂದು ಗದ್ದುಗೆ, ಲಿಂಗ, ನಂದಿ, ಜೋಡಿ ಪಾದುಕೆಗಳಿವೆ. ಇಲ್ಲಿಯೇ ನಾಗಿದೇವರು ಇರುತ್ತಿದ್ದರೆಂಬುದೊಂದು ಪ್ರತೀತಿ. ಅಸ್ಪೃಶ್ಯರ ಮಠ ನಡು ಊರಲ್ಲಿದ್ದುದು ಹೆಚ್ಚಿನ ಮಹತ್ವವಿದೆ. ಶರಣರ ಭೌತಿಕ ಬದುಕಿನ ಬಗ್ಗೆ ಸ್ಥಳ, ಕಾಲ, ತಂದೆ-ತಾಯಿ, ಲಿಂಗೈಕ್ಯ, ಸಮಾಧಿ ಇವೆಲ್ಲವುಗಳ ನೈಜತೆಗಿಂತ ಶರಣರು ತೋರಿದ ಧೋರಣೆ ಮತ್ತು ಅನುಭಾವಿಸಿದ ವಿಚಾರಗಳಿಗೆ ಮಹತ್ವ ಕೊಡಬೇಕೆಂದೇ ನನ್ನ ಅನಿಸಿಕೆ. ಈ ದೃಷ್ಟಿಯಿಂದ ನನ್ನ ವಿಚಾರಗಳನ್ನು ಅವಲೋಕಿಸಿ.

ಲಿಂಗ ತತ್ವದ ಮಹತ್ವ ಕೇವಲ ಲಿಂಗ ಧರಿಸುವುದರಲ್ಲಿಲ್ಲ ಲಿಂಗ ತತ್ವದ ಆಚಾರದಲ್ಲಿದೆ. ನಡೆಯಲ್ಲಿದೆ ಎಂಬ ವಿಚಾರಗಳನ್ನು ಬಹಳ ಆಪ್ತವಾಗಿ ಶಿವನಾಗಮಯ್ಯ ತಮ್ಮ ವಚನಗಳಲ್ಲಿ ಬಿಂಬಿಸುತ್ತಾರೆ. "ಅಂಗದ ಮೇಲೆ ಲಿಂಗವಿದ್ದ ಬಳಿಕ, ಲಿಂಗಹೀನರ ಬೆರಸಲಾಗದು. ಅಂಗದ ಮೇಲೆ ಲಿಂಗವಿದ್ದ ಬಳಿಕ, ಲಿಂಗ ಮುಂತಾಗಿ ಎಲ್ಲಾ ಕ್ರೀಗಳನೂ ಗಮಿಸಬೇಕಲ್ಲದೆ ಅಂಗ ಮುಂತಾಗಿ ಗಮಿಸಲಾಗದು. ಲಿಂಗ ಸಂಬಂಧಿಯಾಗಿ ಅಂಗ ಮುಂತಾಗಿಪ್ಪವರು ಲಿಂಗಕ್ಕೆ ದೂರವಯ್ಯಾ ನಾಗಪ್ರಿಯ ಚೆನ್ನರಾಮೇಶ್ವರಾ". ಎಂಬುದೊಂದು ಇವರ ಪ್ರಸಿದ್ಧ ವಚನವಾಗಿದೆ. ಇದೊಂದು ವಚನವೇ ಸಾಕು ಲಿಂಗನಿಷ್ಠೆ ಮತ್ತು ಶರಣ ತತ್ವಗಳಾಚರಣೆಯಲ್ಲಿರುವ ಇವರ ಕಕ್ಕಲುತನ, ಕಳಕಳಿಯನ್ನು ಅರಿಯಲು. ಇವರ ಈ ವಚನವನ್ನು ಹಲವಾರು ಆಯಾಮಗಳಲ್ಲಿ ವಿಶ್ಲೇಷಿಸಿಕೊಳ್ಳಬಹುದಾಗಿದೆ. ಇಷ್ಟಲಿಂಗಧಾರಿಗಳನ್ನುದ್ದೇಶಿಸಿ, ಅಂಗದ ಮೇಲೆ ಲಿಂಗವಿದ್ದ ಬಳಿಕ ಅವರು ಲಿಂಗವಂತರಾಗಿರಲೇಬೇಕು. ಲಿಂಗಧಾರಣೆ

ಮಾಡಿಕೊಂಡವರು ಲಿಂಗ ಧರಿಸದವರನ್ನು ಬೇರೆಯಾಗಿಡುವುದಲ್ಲ. ಲಿಂಗವಿಲ್ಲದಿದ್ದರೂ ಲಿಂಗತತ್ವವನ್ನಳವಡಿಸಿಕೊಂಡವರನ್ನೂ ಸಹ ಇವನಾರವ ಇವನಾರವನೆಂದೆಣಿಸದೇ ತಮ್ಮವರೆನ್ನಬೇಕು. ಇಲ್ಲಿ ಸಮಸಮಾಜದ ಭಾವವನ್ನು ಕಾಣುತ್ತೇವೆ.

ಹೀಗೆ ಲಿಂಗಧಾರಿಯಾಗಿರಲಿ ಅಥವಾ ಲಿಂಗಧಾರಿಗಳಾಗಿರದೇ ಲಿಂಗತತ್ವಗಳನ್ನಳವಡಿಸಿಕೊಂಡವರೇ ಆಗಿರಲಿ ತಾವು ದೈನಂದಿನ ನಡೆಯಲ್ಲಿ ನಡೆದುಕೊಳ್ಳುತ್ತಿರುವ ಎಲ್ಲಾ ಕ್ರಿಯೆಗಳನ್ನು ಬಹಳ ಗಂಭೀರವಾಗಿ ಎಚ್ಚರಿಕೆಯಿಂದ ಗಮನಿಸುತ್ತಿರಬೇಕು. ಬರೀ ಲಿಂಗವನ್ನಷ್ಟೇ ಗಮನಿಸುತ್ತಿದ್ದರೆ, ಲಿಂಗವನ್ನಿಡಿದುಕೊಂಡಿದ್ದರಷ್ಟೇ ಸಾಲದು ನಾನು ಅನುಸರಿಸುತ್ತಿರುವ ನನ್ನ ನಡೆಯಲ್ಲಿ ಲಿಂಗತತ್ವವಿದೆಯೇ? ನನ್ನ ನುಡಿ–ನಡೆ ಒಂದಾಗಿವೆಯೇ? ಎಂಬುದನ್ನು ನನ್ನಷ್ಟಕ್ಕೆ ನಾನೇ ಪ್ರಶ್ನಿಸಿಕೊಳ್ಳುತ್ತಿರಬೇಕು. ನನ್ನ ನಡೆಯನ್ನು ಕಂಡ ನನ್ನ ಲಿಂಗ ಮೆಚ್ಚಿ ಹೌದೌದೆನ್ನಬೇಕು. ಅಂಗ–ಲಿಂಗಗಳಲ್ಲಿ ಸಾಮರಸ್ಯವಿದೆಯೇ? ಅಂಗದೆಲ್ಲಾ ಚಟುವಟಿಕೆಗಳು ಕಟ್ಟಿಕೊಂಡ ಲಿಂಗಕ್ಕೆ ಅಥವಾ ಲಿಂಗ ತತ್ವಕ್ಕೆ ತಲೆಬಾಗುವಂತಿರಬೇಕು. ನೆಪ ಮಾತ್ರಕ್ಕೆ ಲಿಂಗವನ್ನು ಕಟ್ಟಿಕೊಂಡು ಅಂಗಗುಣಗಳ ಆಮಿಷಕ್ಕೆ ಒಳಗಾಗಿದ್ದವರು ಲಿಂಗಕ್ಕೆ ಅಥವಾ ಲಿಂಗ ತತ್ವಕ್ಕೆ ದೂರಿದಂತೆ, ನಿಂದಿಸಿದಂತೆ ಎಂಬ ಎಚ್ಚರಿಕೆಯನ್ನೂ ನೀಡುತ್ತಾರೆ. ಹೀಗೆ ಇಷ್ಟಲಿಂಗವೆಂಬುದು ಕೇವಲ ಕೊರಳಲ್ಲಿ ಧಾರಣೆ ಮಾಡಿಕೊಂಡರಷ್ಟೇ ಸಾಲದು ಅಂಗದ ಮೇಲಿನ ಆ ಇಷ್ಟಲಿಂಗ ಅಂಗದೊಳಗಿಳಿದು ಅಂಗಾಂಗವೆಲ್ಲವೂ ಲಿಂಗಾಂಗವಾಗಿ, ಅಂಗವೇ ಲಿಂಗವಾಗಿ, ಆತನೇ ಲಿಂಗವಾಗಿ, ಆತನ ನುಡಿ ಮತ್ತು ನಡೆಗಳನ್ನು ಗಮನಿಸಿದ ಆತನೊಳಗೇ ಇರುವ ಲಿಂಗವೇ ಮೆಚ್ಚಿ ಹೌದೌದೆನ್ನುವಂತಿರಬೇಕು. ಹೀಗೆ ಈ ವಚನ ಭೌತಿಕ ಲಿಂಗಧಾರಿಗಳಿಗೆ ಉತ್ತಮ ಮಾರ್ಗದರ್ಶಿಯಾಗಿದೆ. ಹಾಗೆಯೇ ಭೌತಿಕ ಇಷ್ಟಲಿಂಗವಿಲ್ಲದೆಯೂ ಲಿಂಗತತ್ವವನ್ನಳವಡಿಸಿಕೊಂಡು ತತ್ವ ಸಂಬಂಧಿಯಾಗಿ ಮನದೊಳಗಣ ಇಷ್ಟಲಿಂಗಕ್ಕೆ ಬದ್ಧರಾಗಿ ನಡೆ–ನುಡಿಯನ್ನೊಂದಾಗಿಸಿಕೊಳ್ಳಲೂಬಹುದೆಂದು ಈ ವಚನದೊಳಗಿನ ಸೂಕ್ಷ್ಮತೆಯಲ್ಲಿ ತಿಳಿದುಬರುತ್ತದೆ. ಇಂಥ ಇಷ್ಟಲಿಂಗಧಾರಿಗಳು ತಮ್ಮ ಪೂರ್ವಾಶ್ರಮವನ್ನೆಂದಿಗೂ ಅರಸಲೇಬಾರದು. ಮನುವಾದಿಗಳಿಂದ ಅಸ್ಪೃಶ್ಯರೆನಿಸಿಕೊಂಡವರನ್ನು ಇಷ್ಟಲಿಂಗಧಾರಿಗಳು ಕಡೆಗಾಣಿಸಿದರೆ ಲಿಂಗತತ್ವಕ್ಕೆ ಅಪಚಾರ ಮಾಡಿ ದೂರವಾದಂತೆಯೇ ಸರಿ.

"ಘನಸುಖ ಮಹಾಸುಖವ ಮುಟ್ಟಲು, ಸಮಸುಖಿಂಗಳ ಸುಖಿಸಬಲ್ಲ, ಸುಖವನಲ್ಲಿಯೇ ಕೊಯ್ದು ಸೂಡ ಕಟ್ಟಬಲ್ಲ, ನಾಗಪ್ರಿಯ ಚೆನ್ನರಾಮೇಶ್ವರಾ" ಎಂಬ ಇನ್ನೊಂದು ವಚನದಲ್ಲಿ ಉತ್ಕೃಷ್ಟವಾದ ಸುಖವನ್ನಾಗಲೀ ಮಹಾ ಸುಖವನ್ನಾಗಲೀ ಮುಟ್ಟಿ ಅನುಭವಿಸಲು ಸಮಾನತೆಯನ್ನು ಹೊಂದಿ ಸಮಸುಖಿಂಗಳ ಸುಖಿಸುವಾತನಿಗೆ ಮಾತ್ರ ಸಾಧ್ಯ ಹೀಗೆ ಸಮಾನತೆಯಲ್ಲಿ ಸಮಸುಖಿಯಾಗಿರಬಲ್ಲಾತ ಸುಖವನ್ನು ಕೊಯ್ದು ಸೂಡು ಕಟ್ಟಿಕೊಳ್ಳಬಲ್ಲ. ಅಂಥ ಸಮೃದ್ಧವಾದ ಪರಮ ಸುಖವನ್ನು ಸುಖಿಸಬಲ್ಲ ಎಂಬ ವಿಚಾರವನ್ನು ಸಮಾನತೆಯ ತತ್ವದಲ್ಲಡಗಿದ ಉತ್ಕೃಷ್ಟವಾದ ಸುಖದ ಪರಿಕಲ್ಪನೆಯನ್ನು ಬಿಂಬಿಸಿದ್ದಾರೆ. ಹಾಗೆಯೇ ಅಂಥ ಸುಖವನ್ನನುಭವಿಸುವ ಕ್ರಮವನ್ನು ಸಹ ತಿಳಿಸಿದ್ದಾರೆ.

ಸ್ಪರ್ಶಿಸಿಕೊಳ್ಳಲು, ಸ್ಪರ್ಶಿಸಲು ಅಯೋಗ್ಯವೆನಿಸಿಕೊಳ್ಳುವ ವ್ಯಕ್ತಿಯನ್ನು ಸ್ಪರ್ಶಿಸಿ ಸಂತೈಸಿ ಆತನನ್ನೇ ಶಿವಶರಣನನ್ನಾಗಿಸಿ ಆತನಿಂದಲೇ ಬಹು ಅದ್ಭುತವಾದ ಇಷ್ಟಲಿಂಗ ಮತ್ತು ಇಷ್ಟಲಿಂಗ ತತ್ವದ ಮೂಲಕ ಇಡೀ ಶರಣಸಂಕುಲಕ್ಕೆ ಮಾರ್ಗದರ್ಶಿಯಾಗುವಂಥ ತತ್ವವನ್ನು ಅನಾವರಣಗೊಳಿಸಲು ಬಸವಣ್ಣನವರು ಕಾರಣನಾಗುತ್ತಾರೆ. ಹೀಗೆ ನುಡಿದು ನಡೆದುಕೊಂಡ 'ಶಿವನಾಗಮಯ್ಯ' ಅಥವಾ 'ಶಿವನಾಗಿದೇವ' ಶರಣರು ಇಂದು ಶರಣ ಸಂಕುಲದಲ್ಲಿ ಉಪಮಿಸಬಾರದ ಉಪಮಾತೀತರು. ಯಾರನ್ನು ನಿಕೃಷ್ಟರೆಂದು ಈ ವ್ಯವಸ್ಥೆ ತಿಳಿದುಕೊಂಡಿತ್ತೋ ಅಂಥವರಲ್ಲಿ ಇಂಥ ಅದ್ಭುತವಾದ ಚಿಂತನೆಗಳಿವೆ ಎಂಬುದನ್ನು ಗುರುತಿಸಿದ ಬಸವಣ್ಣನವರ ಜೊತೆಜೊತೆಗೆ ಅಕ್ಷರಶಃ ಅನಾಮಿಕರಾಗಿಯೇ ಉಳಿದುಬಿಟ್ಟಿರುವ ಇಂಥ ಮಹಾ ಶರಣರ ಬಗ್ಗೆಯೂ ತಿಳಿದುಕೊಳ್ಳುವ ಅವಶ್ಯಕತೆ ಇಂದಿದೆ. ನುಡಿದರೆ ಲಿಂಗ ಮೆಚ್ಚಿ ಹೌದೌದೆನ್ನಬೇಕೆಂದಿರುವ ಬಸವಣ್ಣನವರ ಪ್ರೇರಣೆಯಿಂದಲೇ ಮುಂದುವರಿದ ಶಿವನಾಗಿದೇವರು "ನಡೆದರೆ ಲಿಂಗ ಮೆಚ್ಚಿ ಹೌದೌದೆನ್ನಬೇಕು" ಎನ್ನುವ ಸಿದ್ಧಾಂತಕ್ಕೆ ಬದ್ಧರಾಗುತ್ತಾರೆ. ತಮ್ಮ ನಡೆಯಿಂದಲೇ ಲಿಂಗವನ್ನು ಮೆಚ್ಚಿಸಿ ಅದು ಹೌದೌದೆನ್ನಬೇಕೆಂಬುದು ಇಂಥವರ ಒಡಲಳಲು. ಅವರ ಒಡಲ ಹಸಿವೂ ಆಗಿತ್ತು.

ಬಸವಣ್ಣನವರು ಶಿವನಾಗಮಯ್ಯರನ್ನು 'ಹಿರಿಯ ಮಾಹೇಶ್ವರರು' ಎಂದು ಮಾನ್ಯತೆ ಕೊಟ್ಟು ಗೌರವಿಸುತ್ತಿದ್ದರು. ಒಂದೊಮ್ಮೆ ಬಸವಣ್ಣ ಶಿವನಾಗಮಯ್ಯನ ಮನೆಯಲ್ಲಿ ಪ್ರಸಾದ ಸ್ವೀಕರಿಸಿದ ಕಾರಣಕ್ಕೆ ಬಿಜ್ಜಳ ರಾಜ ಬಯಲಲ್ಲಿ ನಿಲ್ಲಿಸಿ

ಬಹಿರಂಗ ವಿಚಾರಣೆಗೊಳಪಡಿಸಿದ್ದ, ತುಳಿತಕ್ಕೊಳಗಾದವರಿಗಾಗಿ ಬಹಿರಂಗ ವಿಚಾರಣೆಗೊಳಪಡಿಸಿದ ಒಬ್ಬ ಪ್ರಧಾನಿ ಬಹುಶಃ ವಿಶ್ವದ ಇತಿಹಾಸದಲ್ಲಿಯೇ ಇಲ್ಲವೇನೋ?

ಇಂದಿಗೂ ಸಹ ಅಸ್ಪೃಶ್ಯತೆಯನ್ನು ಗೌರವದಿಂದಲೇ ಆಚರಿಸುತ್ತಿರುವ ಕೆಲ ಮತಿಹೀನರಿಗೆ ಈ ಎಲ್ಲಾ ವಿಚಾರಗಳು ಮನವಮುಟ್ಟುವಂತಾಗಲಿ. ಲಿಂಗವಂತರು, ಲಿಂಗತತ್ವದವರಾದರೂ ಇಂಥ ಅಮಾನವೀಯತೆಯ ಅಸ್ಪೃಶ್ಯತೆಯಾಚರಣೆಗೆ ವಿಮುಖವಾಗಿ ಉಚ್ಚ–ನೀಚಗಳೆಂಬ ಭಿನ್ನಭಾವವನ್ನು ತೊರೆಯಲಿ. ಡೋಹರ ಕಕ್ಕಯ್ಯ, ಅಂಬಿಗರ ಚೌಡಯ್ಯ, ಮಾದಾರ ಚೆನ್ನಯ್ಯ, ಮೇದಾರ ಕೇತಯ್ಯ, ಹಡಪದ ಅಪ್ಪಣ್ಣ....ಅನುಯಾಯಿಗಳನ್ನು ಅವರವರ ಜಾತಿ/ಗುಂಪಿಗೆ ಸೀಮಿತಗೊಳಿಸದೆ ಅವರನ್ನೂ ಮತ್ತು ಎಲ್ಲರನ್ನೂ ಅಪ್ಪಿಕೊಂಡು, ಒಪ್ಪಿಕೊಂಡು ಲಿಂಗಸಂಬಂಧಿಗಳೆಂಬ ಭಾವದಲ್ಲಿ ಸಮಸುಖ–ಸಮಸಮಾಜವೆಂಬ ಬಸವನ ಚಿಂತನೆಗೆ ನೀರೆರೆದು ಮತ್ತೇ ಚಿಗುರಿಸಬೇಕಾಗಿದೆ.

ಅಪಾರ ಕಷ್ಟಕೋಟಲೆಗಳನ್ನನುಭವಿಸಿ ಕಲ್ಯಾಣ ರಾಜ್ಯವನ್ನು ಸ್ಥಾಪಿಸಬೇಕೆನ್ನುವ ಶರಣರ ಆಶಯದಂತೆ ನಡೆದುಕೊಂಡು ಅವರೊಳಗೇ ಇರುವ ಅವರದೇ ಇಷ್ಟಲಿಂಗ ಮೆಚ್ಚಿ ಹೌದೌದೆನ್ನುವಂತೆ ಬದುಕಬೇಕಾದರೆ "ಶಿವನಾಗಮಯ್ಯ"ನವರನ್ನು ಸ್ಮರಿಸಿಕೊಂಡು ಧನ್ಯರಾಗೋಣ. ಅವರ ಬೆಳಕಿನ ಮಾರ್ಗದಲ್ಲಿ ಸಾಗುತ್ತಲೇ ಇಂದಿಗೂ ಅಲ್ಲಲ್ಲಿ ಅಜ್ಞಾತವಾಗಿಯೇ ಇರುವ ನಾಗ, ಕೆಂಚ, ಮಾದ, ಸಂಕವ್ವ, ಕಾಳವ್ವ, ಮತ್ತು ದುರ್ಗವ್ವರಂಥ ವಿಳಾಸವಿಲ್ಲದವರ ಪರವಾಗಿ ನಿಂತು ಅವರುಗಳ ಒಡಲಿನ ಅಳಲು ಮತ್ತು ಅವರ ಒಡಲಿನ ಹಸಿವು ಏನಾಗಿತ್ತೆಂಬುದನ್ನು ಅಂತಃಕರಣದಿಂದ ಅರಿಯಬೇಕಿದೆ. ಬಸವಾದಿ ಪ್ರಮಥರ ಆಶಯದಂತೆ, ಅವರು ಕಾಣಬೇಕೆಂದು ಬಯಸಿದ್ದ ಪ್ರಗತಿಪರ ವ್ಯವಸ್ಥೆಯ ಕಟ್ಟುವಿಕೆಗಾಗಿ ನಾವು ಆನುದೇವ ಹೊರಗಣವನು ಹೊರಗಿನವರೆಲ್ಲರನ್ನೂ ಒಳಗೆಳೆದುಕೊಂಡು, ಒಳಗೊಳಗೇ ದೇವರಿಗೆ ಹತ್ತಿರವಾದವರೆಂದುಕೊಂಡವರನ್ನು ಬೆಚ್ಚಿಬೀಳಿಸೋಣ. ಅವರನ್ನು ಭ್ರಮನಿರಸವಾಗಿಸೋಣ. ಸಮಸಮಾಜವನ್ನೇ ಉಸಿರಾಗಿಸಿಕೊಂಡು ಬದುಕೋಣ. ಅದನ್ನೇ ನಮ್ಮ ಭವ್ಯ ಸಂಸ್ಕೃತಿಯಾಗಿಸೋಣ.

■■

## ಅಕ್ಕಮಹಾದೇವಿ

ಹನ್ನೆರಡನೆಯ ಶತಮಾನ ಕನ್ನಡ ಸಾಹಿತ್ಯದ 'ಪ್ರಪ್ರಥಮ ಕವಯಿತ್ರಿ' ಎನಿಸಿದ ಅಕ್ಕಮಹಾದೇವಿಯ ಜನ್ಮಸ್ಥಳ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನ ಉಡುತಡಿ ಗ್ರಾಮ. ತಂದೆ ನಿರ್ಮಲಶೆಟ್ಟಿ ಮತ್ತು ತಾಯಿ ಸುಮತಿ. ಗುರು ಗುರುಲಿಂಗದೇವರೆಂದು ಕಾವ್ಯಗಳಲ್ಲಿ ಹೇಳಲಾಗಿದೆ. ಇವಳ ರೂಪಲಾವಣ್ಯಕ್ಕೆ ಮರುಳಾದ ಕೌಶಿಕ ಇವಳನ್ನು ಮದುವೆಯಾಗುತ್ತಾನೆ. ಬಾಲ್ಯದಿಂದಲೂ ಆರಾಧ್ಯಮೂರ್ತಿ ಚೆನ್ನಮಲ್ಲಿಕಾರ್ಜುನನನೆ ತನ್ನ ಪತಿ ಎಂದು ಭಾವಿಸಿದ್ದ ಇವಳ ಸಾಧನೆಗೆ ಕಟ್ಟು ಕರಾರುಗಳೊಂದಿಗೆ ವಿವಾಹವಾಗಿದ್ದ ಕೌಶಿಕನು ಅಡ್ಡಿಪಡಿಸಿದ್ದರಿಂದ ದಿಗಂಬರೆಯಾಗಿ ಉಡುತಡಿಯನ್ನು ಬಿಟ್ಟು ಹೊರಡುತ್ತಾಳೆ. ಈ ಘಟನೆಯ ಮೂಲಕ ಮಹಿಳೆಯರಿಗಿರಬೇಕಾದ ಧಾರ್ಮಿಕ ಹಾಗು ವೈಚಾರಿಕ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯುತ್ತಾಳೆ. ಕಲ್ಯಾಣದ ವಚನಕಾರ್ತಿಯರಲ್ಲಿ ಇವಳಿಗೆ ಶ್ರೇಷ್ಠ ಸ್ಥಾನವಿದೆ. ಇದುವರೆಗೆ ಇವಳ ೪೩೪ ವಚನಗಳು ಲಭ್ಯವಾಗಿದ್ದು, ಅವುಗಳು ಭಾವಗೀತಾತ್ಮಕವಾಗಿವೆ. 'ಚೆನ್ನಮಲ್ಲಿಕಾರ್ಜುನ' ಎಂಬ ವಚನಾಂಕಿತದಲ್ಲಿ ರಚನೆಯಾದ ವಚನಗಳಲ್ಲಿ ಬದುಕಿನ ನೋವು–ನಲಿವು, ಶರಣಸತಿ–ಲಿಂಗಪತಿ ಭಾವ, ಆಧ್ಯಾತ್ಮಿಕ ವಿರಹ ವೇದನೆ, ಸಾಮಾಜಿಕ ಕಳಕಳಿ ಮುಂತಾದ ವಿಚಾರಗಳನ್ನು ಕಾಣಬಹುದಾಗಿದೆ. ಕೆಲವು ಸ್ವರವಚನಗಳನ್ನೂ, ಯೋಗಾಂಗ ತ್ರಿವಿಧಿಗಳನ್ನೂ ರಚಿಸಿದ್ದಾಳೆ. ಕಲ್ಯಾಣದ ಅನುಭವ ಮಂಟಪದಲ್ಲಿ ಪ್ರಭುದೇವರ ಸತ್ವ ಪರೀಕ್ಷೆಯಲ್ಲಿ ಉತ್ತೀರ್ಣಳಾಗಿ ಎಲ್ಲ ಶರಣ–ಶರಣೆಯರ ಮೆಚ್ಚುಗೆಗೆ ಪಾತ್ರಳಾಗಿದ್ದಳು. ಅಲ್ಲಿಂದ ಶ್ರೀಶೈಲದ ಕದಳಿಗೆ ತೆರಳಿ ಬಯಲ ಸಮಾಧಿ ಹೊಂದುತ್ತಾಳೆ.

**ಪೂಜ್ಯಶ್ರೀ ಡಾ. ಸಿದ್ಧರಾಮ ಮಹಾಸ್ವಾಮಿಗಳು**
ನಾಗನೂರು ಶ್ರೀ ರುದ್ರಾಕ್ಷಿಮಠ ಬೆಳಗಾವಿ